f prajavani.net prajavani | ಸೋಮವಾರ, ಜನವರಿ 19, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 19 | ಪುಟ 14 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವಿರಾಟ್ ಶತಕ

ಇಂದೋರ್‌ನಲ್ಲಿ ಭಾನುವಾರ ನ್ಯೂಜಿಲೆಂಡ್ ಎದುರು ನಡೆದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತದ ವಿರಾಟ್ ಕೊಹ್ಲಿ (124; 108ಎಸೆತ) ಶತಕ ಗಳಿಸಿದರು. ನ್ಯೂಜಿಲೆಂಡ್ ತಂಡವು 2–1ರಿಂದ ಸರಣಿ ಜಯಿಸಿತು



ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಶಾಸ್ತ್ರೀಯ ಭಾಷಾ ಸಾಹಿತ್ಯ ಪ್ರಶಸ್ತಿ ಘೋಷಿಸಿದ ಸ್ಟಾಲಿನ್ 9

ಒಂದು ಗ್ರಾಮ – ಒಂದು ಚುನಾವಣೆ

ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿಗಳಿಗೆ ಏಕ ಕಾಲಕ್ಕೆ ಚುನಾವಣೆ

• ಚಂದ್ರಹಾಸ ಹಿರೇಮಳಲಿ



ಅಂಕಿ ಅಂಶಗಳು

5,948 ಕರ್ನಾಟಕದ ಗ್ರಾಮ ಪಂಚಾಯಿತಿಗಳು

95 ಸಾವಿರ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು

31 ಜಿಲ್ಲಾ ಪಂಚಾಯಿತಿಗಳು

240 ತಾಲ್ಲೂಕು ಪಂಚಾಯಿತಿಗಳು

ಬೆಂಗಳೂರು: ರಾಜ್ಯದ ಶೇ 90ರಷ್ಟು ಗ್ರಾಮ ಪಂಚಾಯಿತಿಗಳ ಅವಧಿ ಇನ್ನೆರಡು ತಿಂಗಳ ಒಳಗೆ ಮುಕ್ತಾಯವಾಗಲಿದ್ದು, ಜಿಲ್ಲಾ, ತಾಲ್ಲೂಕು ಪಂಚಾಯಿತಿಗಳ ಜತೆಗೇ ಗ್ರಾಮ ಪಂಚಾಯಿತಿಗಳಿಗೂ ಏಕಕಾಲಕ್ಕೆ ಚುನಾವಣೆ ನಡೆಸಲು ರಾಜ್ಯ ಸರ್ಕಾರ 'ಮೂರು ಸ್ತರ: ಒಂದು ಗ್ರಾಮ–ಒಂದು ಚುನಾವಣೆ' ಸೂತ್ರವನ್ನು ಸಿದ್ಧಪಡಿಸುತ್ತಿದೆ.

ಮೂರೂ ಸ್ತರದ ಪಂಚಾಯಿತಿಗಳಿಗೆ ಒಂದೇ ಬಾರಿ ಚುನಾವಣೆ ನಡೆಸಲು ಅಗತ್ಯ ಸಿದ್ಧತೆಗಳನ್ನು 2026ರ ಏಪ್ರಿಲ್ ಒಳಗೆ ಮಾಡಿಕೊಂಡು, ರಾಜ್ಯ ಚುನಾವಣಾ ಆಯೋಗಕ್ಕೆ ಅಗತ್ಯ ಸಹಕಾರ ನೀಡಲು ತೀರ್ಮಾನಿಸಿದೆ. ಒಂದು ಗ್ರಾಮ ಒಂದು ಚುನಾವಣೆಯಿಂದಾಗಿ ಗ್ರಾಮೀಣ ಜನರು ತಮ್ಮ ಮತಗಟ್ಟೆಗೆ ತೆರಳಿ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗೆ ಏಕಕಾಲಕ್ಕೆ ಪ್ರತ್ಯೇಕ ಮೂರು ಮತದಾನ ಮಾಡಬಹುದು. ಇದರಿಂದ ಸಮಯ, ಶ್ರಮ ಹಾಗೂ ಚುನಾವಣಾ ವೆಚ್ಚ ಕಡಿಮೆಯಾಗುತ್ತದೆ.

ಈ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತ ಯಂತ್ರದ (ಇವಿಎಂ) ಬದಲಿಗೆ ಮತ ಪತ್ರ (ಬ್ಯಾಲೆಟ್ ಪೇಪರ್) ಬಳಸಿ ಮತ ಚಲಾಯಿಸುವ ವ್ಯವಸ್ಥೆಯನ್ನು ಜಾರಿ ಮಾಡಲಾಗುತ್ತಿದೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಹಿಂದೆ ಇವಿಎಂಗಳನ್ನು, ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಮತಪತ್ರಗಳನ್ನು ಬಳಸಲಾಗಿತ್ತು.

ರಾಜ್ಯದ ಬಹುತೇಕ ಗ್ರಾಮ ಪಂಚಾಯಿತಿಗಳಿಗೆ 2020–21ರಲ್ಲಿ ಚುನಾವಣೆ ನಡೆಸಲಾಗಿತ್ತು. ಅವುಗಳ ಅವಧಿಯು ಇದೇ ಜನವರಿ, ಫೆಬ್ರುವರಿ ಮತ್ತು ಮಾರ್ಚ್ ಒಳಗೆ ಕೊನೆಗೊಳ್ಳಲಿದೆ. ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ 2016ರ ಏಪ್ರಿಲ್‌ನಲ್ಲಿ ಚುನಾವಣೆ ನಡೆದಿತ್ತು. ಅಂದು ಆಯ್ಕೆಯಾಗಿದ್ದ ಸದಸ್ಯರ ಅವಧಿ 2021ರ ಏಪ್ರಿಲ್ 27ರಂದು ಮುಕ್ತಾಯವಾಗಿತ್ತು.

ಕೆಲ ವರ್ಷಗಳ ಹಿಂದೆಯೇ ಚುನಾವಣೆ ನಡೆಸಲು ಸಿದ್ಧತೆ ಆರಂಭಿಸಿದ್ದ ಚುನಾವಣಾ ಆಯೋಗವು ಕ್ಷೇತ್ರ ಪುನರ್‌ವಿಂಗಡಣೆ ಮಾಡಿ ಮತದಾರರ ಅಂತಿಮ ಪಟ್ಟಿ ಹಾಗೂ ಮೀಸಲಾತಿ ಕರಡು ಪ್ರಕಟಿಸಿತ್ತು. ಆದರೆ, ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆದಿತ್ತು. ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದು 'ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ'ಕ್ಕೆ ನೀಡಿತ್ತು.

▶5



"ಮೂರು ಸ್ತರಗಳ ಪ್ರತ್ಯೇಕ ಚುನಾವಣೆಯಿಂದ ಒಂದೂವರೆ ವರ್ಷ ಚುನಾವಣೆ ಪ್ರಕ್ರಿಯೆಯಲ್ಲೇ ಮುಗಿದುಹೋಗುತ್ತದೆ. ಕೆಲಸಗಳೇ ಆಗುವುದಿಲ್ಲ. ಒಂದು ಗ್ರಾಮ–ಒಂದು ಚುನಾವಣೆ ಇದಕ್ಕೆ ಪರಿಹಾರ

ಮಂಜುನಾಥ ಭಂಡಾರಿ, ವಿಧಾನಪರಿಷತ್ ಸದಸ್ಯ

ಒಂದು ಚುನಾವಣೆಗೆ ವ್ಯಾಜ್ಯಗಳ ತೊಡಕು



ಮೂರೂ ಸ್ತರಗಳಿಗೆ ಚುನಾವಣೆ ನಡೆಸಲು ಹಿಂದೆಯೇ ಚಿಂತನೆ ನಡೆದಿತ್ತು. ಕ್ಷೇತ್ರ ಪುನರ್‌ವಿಂಗಡಣೆ, ಮೀಸಲಾತಿ ಪಟ್ಟಿ, ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಸೇರಿದಂತೆ ಸಣ್ಣ ವಿಷಯಗಳಿಗೂ ಕೆಲವರು ಕೋರ್ಟ್ ಮೊರೆ ಹೋಗುತ್ತಾರೆ. ಇದರಿಂದ ಒಂದು ಗ್ರಾಮ–ಒಂದು ಚುನಾವಣೆ ಆಶಯ ಸಾಕಾರಕ್ಕೆ ತೊಡಕಾಗಿತ್ತು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

'ಕೋರ್ಟ್ ವಿವಾದ ಮತ್ತಿತರ ಕಾರಣಗಳಿಗಾಗಿ ಚುನಾವಣೆ ವಿಳಂಬವಾಗುವ ಗ್ರಾಮ ಪಂಚಾಯಿತಿಗಳ ಸಂಖ್ಯೆ ಶೇ 10ಕ್ಕಿಂತ ಕಡಿಮೆ. ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಈಗಾಗಲೇ ಸಿದ್ಧತೆ ನಡೆದಿದೆ. ಹಾಗಾಗಿ, ಅವಧಿ ಮುಗಿಯುತ್ತಿರುವ ಗ್ರಾಮ ಪಂಚಾಯಿತಿಗಳನ್ನೂ ಸೇರಿಸಿಕೊಂಡು ಒಟ್ಟಿಗೆ ಚುನಾವಣೆ ನಡೆಸುವ ಆಲೋಚನೆ ಇದೆ. ಶೀಘ್ರ ಚುನಾವಣೆ ನಡೆಸಲಾಗುತ್ತದೆ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸಮಿತಿಗೆ ಒತ್ತಾಯ

ಐದು ವರ್ಷ ಪೂರೈಸುವ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಆದೇಶಕ್ಕೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿಗಳ ಸದಸ್ಯರ ಮಹಾ ಒಕ್ಕೂಟ ಆಕ್ಷೇಪ ವ್ಯಕ್ತಪಡಿಸಿದೆ.

'2026–31ನೇ ಅವಧಿಗೆ ಮತ್ತೆ ಚುನಾವಣೆ ನಡೆಯುವವರೆಗೆ ಅವಧಿ ಮುಗಿದ ದಿನಾಂಕದಿಂದ ಅನ್ವಯವಾಗುವಂತೆ ಎಲ್ಲ ಗ್ರಾಮ ಪಂಚಾಯಿತಿಗಳಿಗೂ ತಕ್ಷಣ ಆಡಳಿತಾಧಿಕಾರಿಗಳನ್ನು ನೇಮಕ ಮಾಡಬೇಕು' ಎಂಬ ಗ್ರಾಮೀಣಾಭಿವೃದ್ಧಿ ಇಲಾಖೆ ಸುತ್ತೋಲೆಯನ್ನು ಹಿಂದಕ್ಕೆ ಪಡೆಯಬೇಕು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯಲ್ಲಿ ನೀಡಿರುವ ಅವಕಾಶದಂತೆ ಈಗಿರುವ ಜನಪ್ರತಿನಿಧಿಗಳ ಆಡಳಿತ ಸಮಿತಿಗಳನ್ನೇ ನೂತನ ಆಡಳಿತ ಸಮಿತಿಗಳನ್ನಾಗಿ ಮುಂದಿನ ಆರು ತಿಂಗಳಿಗೆ ನೇಮಕ ಮಾಡಬೇಕು ಎಂದು ಮಹಾಒಕ್ಕೂಟದ ಅಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್ ಒತ್ತಾಯಿಸಿದ್ದಾರೆ.

ಪೀಠಾರೋಹಣ

ಪ್ರಜಾವಾಣಿ ಚಿತ್ರ



ಶೀರೂರು ಮಠಾಧೀಶ ವೇದವರ್ಧನತೀರ್ಥ ಶ್ರೀಪಾದರನ್ನು ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರು ಸರ್ವಜ್ಞ ಪೀಠದಲ್ಲಿ ಕೂರಿಸಿದರು. ಪುತ್ತಿಗೆ ಕಿರಿಯ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದರು ಹಾಗೂ ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉಪಸ್ಥಿತರಿದ್ದರು ▶4A

'ಅಬಕಾರಿ ಸನ್ನದು: ₹2,500 ಕೋಟಿ ಲಂಚ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮದ್ಯ ಮಾರಾಟ ಸನ್ನದು ನೀಡುವಲ್ಲಿ ರಾಜ್ಯ ಸರ್ಕಾರದ ಪ್ರಮುಖರು ₹2,500 ಕೋಟಿಗೂ ಹೆಚ್ಚು ಲಂಚ ಹೊಡೆಯಲು ಮುಂದಾಗಿದ್ದಾರೆ. ಅಬಕಾರಿ ಸಚಿವ ಆರ್‌.ಬಿ.ತಿಮ್ಮಾಪುರ ಅವರ ಆಣತಿಯಂತೆಯೇ ಲಂಚದ ಹಣ ಸಂಗ್ರಹ ನಡೆಯುತ್ತಿದೆ. ತಕ್ಷಣವೇ ಸಚಿವ ಸ್ಥಾನಕ್ಕೆ ಅವರು ರಾಜೀನಾಮೆ ನೀಡಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಒತ್ತಾಯಿಸಿದರು. ▶4A

ನನ್ನ ಹೆಸರು ದುರ್ಬಳಕೆ: ತಿಮ್ಮಾಪುರ

ಬಾಗಲಕೋಟೆ: 'ಸಚಿವರಿಗೆ ಹಣ ಕೊಡಬೇಕು ಎಂದು ಕೆಲ ಅಧಿಕಾರಿಗಳು ನನ್ನ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಾರೆ' ಎಂದು ಅಬಕಾರಿ ಸಚಿವ ಆರ್‌.ಬಿ. ತಿಮ್ಮಾಪುರ ಭಾನುವಾರ ಹೇಳಿದರು.

ಲಂಚ ಪಡೆಯುವಾಗ ಸಿಕ್ಕಿಬಿದ್ದ ಅಧಿಕಾರಿಯೊಬ್ಬರು ಅವರ ಹೆಸರು ಹೇಳಿರುವ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಚಿವರು, 'ಬೇರೆ ಬೇರೆ ಇಲಾಖೆಗಳಲ್ಲಿಯೂ ಆಯಾ ಇಲಾಖೆಯ ಸಚಿವರ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಾರೆ' ಎಂದರು. ▶4A

ಔಷಧ ಪರಿವೀಕ್ಷಕರ ನೇಮಕಾತಿ ಸುಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಔಷಧ ಪರಿವೀಕ್ಷಕ (ಡ್ರಗ್ ಇನ್‌ಸ್ಪೆಕ್ಟರ್) ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕೇಂದ್ರದ ಕಾಯ್ದೆಯಲ್ಲಿ ನಿಗದಿಪಡಿಸಿರುವ ಅರ್ಹತೆಗಳ ಹೊರತಾಗಿ ಹೆಚ್ಚುವರಿ ಅರ್ಹತೆಗಳನ್ನು ರಾಜ್ಯ ಸರ್ಕಾರಗಳು ವಿಧಿಸಲು ಅವಕಾಶ ಇಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.



ಸುಪ್ರೀಂ ಕೋರ್ಟ್ ಇದೇ 13ರಂದು ನೀಡಿರುವ ಈ ತೀರ್ಪಿನ ಪರಿಣಾಮ 2018ರಿಂದ ನನೆಗುದಿಯಲ್ಲಿರುವ ಈ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಅಂತಿಮಗೊಳಿಸಲು ಕೆಪಿಎಸ್‌ಸಿಗೆ ಹಾದಿ ಸುಗಮವಾಗಿದೆ.

ಔಷಧ ನಿಯಂತ್ರಣ ಇಲಾಖೆಯಲ್ಲಿ ಔಷಧ ಪರಿವೀಕ್ಷಕರ ತೀವ್ರ ಕೊರತೆಯಿದೆ. ಒಟ್ಟು 112 ಮಂದಿಯನ್ನು ನೇಮಕ ಮಾಡಿಕೊಳ್ಳಲು ಅವಕಾಶ ಇದ್ದರೂ ಎಂಟು ಜನ ಮಾತ್ರ ಕೆಲಸದಲ್ಲಿ ಇದ್ದಾರೆ.

ಒಟ್ಟು 83 (68 + 15 ಹೈದರಾಬಾದ್ ಕರ್ನಾಟಕ) ಔಷಧ ಪರಿವೀಕ್ಷಕರ ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ 2018ರ ಮಾರ್ಚ್ 23ರಂದು ಅಧಿಸೂಚನೆ ಹೊರಡಿಸಿತ್ತು. 1:3 ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಹಾಗೂ ಸಂದರ್ಶನಗಳು ನಡೆಯುತ್ತಿದ್ದ ಹಂತದಲ್ಲಿ, ಅಭ್ಯರ್ಥಿಗಳು ಔಷಧಗಳ ತಯಾರಿ ಅಥವಾ ಪರೀಕ್ಷೆಯಲ್ಲಿ ಕನಿಷ್ಠ 18 ತಿಂಗಳ ಅನುಭವವನ್ನು ಕಡ್ಡಾಯವಾಗಿ ಹೊಂದಿರಬೇಕು ಎಂಬ ಷರತ್ತನ್ನು ಸರ್ಕಾರ ವಿಧಿಸಿತ್ತು. ▶8

ಭಾರತದ ಪ್ರಜಾಪ್ರಭುತ್ವದ ಸ್ಥಿರತೆಗೆ ಕಾರಣಗಳು
ವಿಶ್ಲೇಷಣೆ ಪುಟ 7

ಬೆಳೆ ವಿಮೆ: ರಾಜ್ಯಕ್ಕೆ ಎರಡನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆಯ ಅನುಷ್ಠಾನದಲ್ಲಿ ಕರ್ನಾಟಕಕ್ಕೆ ಎರಡನೇ ಸ್ಥಾನ ದೊರೆತಿದ್ದು, ಕೇಂದ್ರ ಸರ್ಕಾರವು ರಾಜ್ಯ ಕೃಷಿ ಇಲಾಖೆಗೆ ಪ್ರಶಸ್ತಿ ನೀಡಿದೆ.

2024–25ನೇ ಸಾಲಿನಲ್ಲಿ ಬೆಳೆ ವಿಮೆ ಯೋಜನೆ ಅಡಿ ರಾಜ್ಯದ 27.04 ಲಕ್ಷ ರೈತರು ನೋಂದಣಿ ಮಾಡಿಕೊಂಡಿದ್ದರು. ಈ ಪೈಕಿ 11.85 ಲಕ್ಷ ರೈತರು, ₹2,094 ಕೋಟಿ ಕ್ಲೇಮು ಮಾಡಿದ್ದಾರೆ. ದೊಡ್ಡ ರಾಜ್ಯಗಳ ಪೈಕಿ ಯೋಜನೆಯ ಅನುಷ್ಠಾನದಲ್ಲಿ ಕರ್ನಾಟಕವೇ ಮುಂಚೂಣಿಯಲ್ಲಿದೆ ಎಂದು ಕೇಂದ್ರ ಕೃಷಿ ಸಚಿವಾಲಯವು ತಿಳಿಸಿದೆ.

ರಾಜ್ಯ ಕೃಷಿ ಇಲಾಖೆ ಆಯುಕ್ತರು–ನಿರ್ದೇಶಕರು ಭಾನುವಾರ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ

ತಗ್ಗದ ದಟ್ಟಣೆ: ಸವಾರರು ಹೈರಾಣ

ರೆಸಿಡೆನ್ಸಿ, ಜೆ.ಸಿ.ರಸ್ತೆಯಲ್ಲಿ ಪ್ರಯಾಣ ಪ್ರಯಾಸಕರ • ಸಂಚಾರ ನಿಯಮ ಉಲ್ಲಂಘಿಸಿ ರಸ್ತೆಯಲ್ಲಿ ವಾಹನಗಳ ಪಾರ್ಕಿಂಗ್

• ವರುಣ ಹೆಗಡೆ

ಬೆಂಗಳೂರು: ನಗರದ ಪ್ರಮುಖ ಸಂಪರ್ಕ ಕೊಂಡಿಯಾದ ರೆಸಿಡೆನ್ಸಿ ರಸ್ತೆ ಹಾಗೂ ಜೆ.ಸಿ. ರಸ್ತೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಸಾಮಾನ್ಯವಾಗಿದ್ದು, ರಸ್ತೆಗಳ ಉದ್ದಕ್ಕೂ ವಾಹನಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದೆ. ಇದರಿಂದ ದಟ್ಟಣೆ ಹೆಚ್ಚಿ, ವಾಹನ ಸವಾರರು ಹೈರಾಣಾಗುತ್ತಿದ್ದಾರೆ.

ರೆಸಿಡೆನ್ಸಿ ರಸ್ತೆಯಲ್ಲಿ ದಿನದ ಬಹುತೇಕ ಎಲ್ಲ ಅವಧಿಯಲ್ಲಿ ದಟ್ಟಣೆಯ ಬಿಸಿ ತಟ್ಟುತ್ತಿದೆ. ಇದಕ್ಕೆ ಪ್ರಮುಖ ಕಾರಣ ರಸ್ತೆಯ ಅಕ್ಕಪಕ್ಕದಲ್ಲಿರುವ ಶಾಲಾ–ಕಾಲೇಜುಗಳ ವಾಹನಗಳು. ಬೆಳಿಗ್ಗೆ 7.30ರಿಂದ 11 ಗಂಟೆವರೆಗೆ, ಮಧ್ಯಾಹ್ನ 2ರಿಂದ 4 ಗಂಟೆಯವರೆಗೆ ಹಾಗೂ ಸಂಜೆ 6 ಗಂಟೆಯ ಬಳಿಕ ವಿಪರೀತ ದಟ್ಟಣೆ ಉಂಟಾಗುತ್ತಿದೆ. ಈ ವೇಳೆ ವಾಹನಗಳು ಆಮೆ ವೇಗದಲ್ಲಿ ಸಂಚರಿಸುತ್ತವೆ.

ಮಿಷನ್ ರಸ್ತೆ, ಕೆಂಗಲ್ ಹನುಮಂತಯ್ಯ ರಸ್ತೆ (ಡಬಲ್ ರೋಡ್) ಹಾಗೂ ರಾಜಾರಾಮ್ ಮೋಹನ್ ರಾಯ್ ರಸ್ತೆಯಲ್ಲಿ ಬರುವ ವಾಹನಗಳು ರೆಸಿಡೆನ್ಸಿ ರಸ್ತೆಯನ್ನು ಸೇರಿಕೊಳ್ಳಲಿವೆ. ಇದರಿಂದ ಪ್ರತಿನಿತ್ಯ ಸಾವಿರಾರು ವಾಹನಗಳು ಈ ರಸ್ತೆಯಲ್ಲಿ ಸಂಚರಿಸುತ್ತವೆ. ಜನಾರ್ದನ್ ಟವರ್ ಬಹುಮಹಡಿ ಕಟ್ಟಡ, ದಿ ಚಾನ್ಸರಿ ಪೆವಿಲಿಯನ್, ದಿ ರಿಟ್ಜ್ ಕಾರ್ಲ್‌ಟನ್ ಹೋಟೆಲ್, ಪ್ರೆಸ್ಟೀಜ್ ಡಾಟ್‌ಕಾಮ್ ಬಹುಮಹಡಿ ಕಟ್ಟಡ ಸೇರಿ ಹಲವು ಪ್ರಮುಖ ಕಟ್ಟಡಗಳು ಈ ರಸ್ತೆಯಲ್ಲಿವೆ. ಹೀಗಾಗಿ ಶಾಲಾ–ಕಾಲೇಜುಗಳಿಗೆ ರಜೆ ಇರುವ ದಿನಗಳಲ್ಲಿಯೂ ಬೆಳಿಗ್ಗೆ ಮತ್ತು ಸಂಜೆ ಅವಧಿಯಲ್ಲಿ ದಟ್ಟಣೆ ಸಾಮಾನ್ಯವಾಗಿದೆ.

'ಪ್ರಜಾವಾಣಿ' ಪ್ರತಿನಿಧಿಯು ಜೆ.ಸಿ. ರಸ್ತೆ, ಲಾಲ್‌ಬಾಗ್ ಮುಖ್ಯರಸ್ತೆ, ಕೆಂಗಲ್ ಹನುಮಂತಯ್ಯ ರಸ್ತೆ (ಡಬಲ್ ರೋಡ್), ಮಿಷನ್ ರಸ್ತೆ, ರೆಸಿಡೆನ್ಸಿ ರಸ್ತೆ ಜತೆಗೆ ಸುತ್ತಮುತ್ತಲಿನ ರಸ್ತೆಯಲ್ಲಿ ಸಾಗಿದಾಗ, ದಟ್ಟಣೆಯ ದರ್ಶನದ ಜತೆಗೆ ಆಮೆವೇಗದ ಸಂಚಾರ ಅನುಭವಕ್ಕೆ ಬಂದಿತು.

ಸಂಚಾರ ಸಂಕಟ

ರೆಸಿಡೆನ್ಸಿ ರಸ್ತೆಯಲ್ಲಿ ಆಶೀರ್ವಾದಂ ಜಂಕ್ಷನ್‌ನಿಂದ ಬ್ರಿಗೇಡ್ ರಸ್ತೆಯ ಜಂಕ್ಷನ್‌ವರೆಗೆ ವೈಟ್‌ಟಾಪಿಂಗ್ ಕಾಮಗಾರಿ ನಡೆದಿದ್ದರೂ ಈ ರಸ್ತೆಯಲ್ಲಿ ದಟ್ಟಣೆ ನಿವಾರಣೆಯಾಗಿಲ್ಲ.

ಸಮಸ್ಯೆಗಿಲ್ಲ ಪರಿಹಾರ: ರೆಸಿಡೆನ್ಸಿ ರಸ್ತೆಯ ಸುತ್ತಮುತ್ತ ಬಿಷಪ್ ಕಾಟನ್ ಬಾಲಕರ ಹಾಗೂ ಬಾಲಕಿಯರ ಶಾಲೆ, ನ್ಯಾಷನಲ್ ಪಬ್ಲಿಕ್ ಶಾಲೆ, ಸೇಂಟ್ ಜೋಸೆಫ್ ಇಂಡಿಯನ್ ಪ್ರೌಢಶಾಲೆ, ಬಾಲ್ಡ್‌ವಿನ್ ಇಂಟರ್‌ನ್ಯಾಷನಲ್ ಸೇರಿ ಸುಮಾರು 50 ಶಾಲಾ ಕಾಲೇಜುಗಳಿವೆ. ಇವು ಆರಂಭವಾಗುವ ಹಾಗೂ ಮುಗಿಯುವ ವೇಳೆ ರಸ್ತೆಯಲ್ಲೇ ಕಿಲೋ ಮೀಟರ್‌ಗಟ್ಟಲೆ ವಾಹನಗಳು ನಿಂತಲ್ಲೇ ನಿಂತಿರುತ್ತವೆ. ಆ ಅವಧಿಯಲ್ಲಿ ಪ್ರಯಾಣ ದುಸ್ತರವಾಗಿದೆ. ಸಂಚಾರ ದಟ್ಟಣೆ ಕಾರಣ ಕೆಲ ದ್ವಿಚಕ್ರ ವಾಹನ ಸವಾರರು ಪಾದಚಾರಿ ಮಾರ್ಗಗಳ ಮೇಲೆಯೂ ವಾಹನ ಓಡಿಸುತ್ತಾರೆ.

'ರೆಸಿಡೆನ್ಸಿ ರಸ್ತೆಯಲ್ಲಿ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಗೆ ಶಾಶ್ವತ ಪರಿಹಾರವೇ ಇಲ್ಲದಂತಾಗಿದೆ. ಶಾಲೆ ಆರಂಭ ಹಾಗೂ ಮುಗಿಯುವ ಸಮಯದಲ್ಲಿ ಸಾಕಷ್ಟು ದಟ್ಟಣೆ ಉಂಟಾಗುತ್ತಿದೆ. ಈ ಸಮಸ್ಯೆ ಹಲವು ವರ್ಷಗಳಿಂದ ಇದೆ. ಇದು ಬಗೆಹರಿಯದ ಸಮಸ್ಯೆಯಾಗಿದ್ದು, ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ದೂರುತ್ತಾರೆ ವಾಹನಸವಾರರು.

'ಹಳೆ ವಿಮಾನ ನಿಲ್ದಾಣ ರಸ್ತೆ, ವೈಟ್‌ಫೀಲ್ಡ್ ಸೇರಿ ವಿವಿಧೆಡೆ ತೆರಳಲು ರೆಸಿಡೆನ್ಸಿ ರಸ್ತೆಯನ್ನು ವಾಹನ ಸವಾರರು ಬಳಸುತ್ತಾರೆ. ಶಾಲೆಗಳ ವಾಹನಗಳು ಅಧಿಕ ಸಂಖ್ಯೆಯಲ್ಲಿ ಬರುತ್ತವೆ. ಕಚೇರಿ ಸೇರಿ ವಿವಿಧ ಕಾರ್ಯನಿಮಿತ್ತ ತೆರಳುವವರು ಕಾರುಗಳನ್ನು ಹೆಚ್ಚಾಗಿ ಬಳಸುತ್ತಿದ್ದು, ಸಾರ್ವಜನಿಕ ಸಾರಿಗೆ ಬಳಕೆ ಕಡಿಮೆಯಾಗಿದೆ. ಇದರಿಂದಾಗಿ ಸಹಜವಾಗಿ ದಟ್ಟಣೆ ಹೆಚ್ಚಿರುತ್ತದೆ. ವಾಹನ ಸವಾರರು ಸೂಕ್ತವಾಗಿ ನಮಗೆ ಸ್ಪಂದಿಸಿದಲ್ಲಿ ತಕ್ಕಮಟ್ಟಿಗೆ ದಟ್ಟಣೆ ನಿವಾರಣೆ ಸಾಧ್ಯ' ಎನ್ನುತ್ತಾರೆ ಸಂಚಾರ ಪೊಲೀಸರು.

ಎಲ್ಲೆಲ್ಲಿ ಅಧಿಕ ದಟ್ಟಣೆ?

- ಮಿನರ್ವ ವೃತ್ತ
- ಭಾರತ್ ಜಂಕ್ಷನ್
- ಬಿ.ಎನ್. ಗರುಡಾಚಾರ್ ವೃತ್ತ
- ಸೇಂಟ್ ಮಾರ್ಕ್ಸ್ ರಸ್ತೆ ಜಂಕ್ಷನ್
- ಆಶೀರ್ವಾದಂ ಜಂಕ್ಷನ್
- ಬ್ರಿಗೇಡ್ ಜಂಕ್ಷನ್
- ಡಬಲ್ ರಸ್ತೆ ಜಂಕ್ಷನ್
- ಶಾಂತಿನಗರ ಜಂಕ್ಷನ್
- ಕೆ.ಎಚ್. ವೃತ್ತ



ರೆಸಿಡೆನ್ಸಿ ರಸ್ತೆಯಲ್ಲಿನ ಸಂಚಾರ ದಟ್ಟಣೆ — ಪ್ರಜಾವಾಣಿ ಚಿತ್ರಗಳು; ಪ್ರಶಾಂತ್ ಎಚ್.ಜಿ.

ಪಾದಚಾರಿ ಮಾರ್ಗ ಕಣ್ಮರೆ

ಜೆ.ಸಿ.ರಸ್ತೆಯಲ್ಲಿ ವಾಹನಗಳ ಬಿಡಿ ಭಾಗಗಳ ಮಳಿಗೆಗಳ ಜತೆಗೆ ಗೃಹೋಪಯೋಗಿ ವಸ್ತುಗಳ ಮಳಿಗೆ, ಆಸ್ಪತ್ರೆ, ರಂಗಮಂದಿರ, ಬ್ಯಾಂಕ್‌ಗಳ ಶಾಖೆ ಹಾಗೂ ವಿವಿಧ ವಾಣಿಜ್ಯ ಮಳಿಗೆಗಳಿವೆ. ಟಾರ್ಪಾಲ್, ಮ್ಯಾಟ್‌ಗಳ ಮಾರಾಟ ಮಳಿಗೆಗಳೂ ಹೆಚ್ಚಿನ ಸಂಖ್ಯೆಯಲ್ಲಿವೆ. ಪಾದಚಾರಿ ಮಾರ್ಗದಲ್ಲಿಯೇ ವಾಹನಗಳನ್ನು ನಿಲ್ಲಿಸುವ ಜತೆಗೆ, ಅಲ್ಲಿಯೇ ವಿವಿಧ ವಸ್ತುಗಳನ್ನು ಇಡಲಾಗುತ್ತಿದೆ. ಇದರಿಂದಾಗಿ ಪಾದಚಾರಿಗಳು ರಸ್ತೆಯಲ್ಲಿ ಸಾಗಬೇಕಾಗಿದೆ.

ಜೆ.ಸಿ.ರಸ್ತೆಗೆ ಹೊಂದಿಕೊಂಡಿರುವ ವಿನೋಬಾ ನಗರದ 1ನೇ ಅಡ್ಡರಸ್ತೆಯಲ್ಲಿ ಆಪ್ಟಿಕಲ್ ಫೈಬರ್ ಕೇಬಲ್ (ಒಎಫ್‌ಸಿ) ಅಳವಡಿಕೆ ಸಂಬಂಧ ಅಗೆದು, ಮುಚ್ಚಲಾಗಿದೆ. ರಸ್ತೆಯ ಒಂದು ಭಾಗದಲ್ಲಿ ಡಾಂಬರ್ ಸಂಪೂರ್ಣ ಕಣ್ಮರೆಯಾಗಿದ್ದು, ಇಲ್ಲಿ ಪ್ರಯಾಣ ಕಷ್ಟಸಾಧ್ಯವಾಗಿದೆ. ಈ ರಸ್ತೆ ಲಾಲ್‌ಬಾಗ್ ಮುಖ್ಯರಸ್ತೆಗೆ ಸಂಪರ್ಕ ಸಾಧಿಸಲಿದೆ. ನಯನ ರಂಗಮಂದಿರ, ಜೈನ್ ವಿಶ್ವವಿದ್ಯಾಲಯಕ್ಕೆ ಇದೇ ರಸ್ತೆಯಲ್ಲಿ ಸಾಗಬೇಕಿದೆ.



ನಗರದ ಸಂಚಾರ ದಟ್ಟಣೆಗೆ ಪರಿಹಾರವೇ ಇಲ್ಲದಂತಾಗಿದೆ. ಇಲಾಖೆಗಳ ನಡುವೆ ಸಮನ್ವಯದ ಕೊರತೆಯಿಂದ ಕಾಮಗಾರಿಗಳು ಸಮರ್ಪಕವಾಗಿ ನಡೆಯುತ್ತಿಲ್ಲ

ಮ್ಯಾಥ್ಯೂಸ್, ಖಾಸಗಿ ವಿವಿ ಪ್ರಾಧ್ಯಾಪಕ



ದಟ್ಟಣೆ ನಿವಾರಣೆಗೆ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ರಸ್ತೆಯ ಅಕ್ಕಪಕ್ಕದಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವವರಿಗೆ ದಂಡ ಹಾಕಬೇಕು. ಕಾಮಗಾರಿಗಳನ್ನು ವೇಗವಾಗಿ ಮುಗಿಸಬೇಕು

ಶಶಿ, ಖಾಸಗಿ ಸಂಸ್ಥೆ ಉದ್ಯೋಗಿ

ಪರಿಹಾರ ಏನು?

'ರೆಸಿಡೆನ್ಸಿ ರಸ್ತೆಯಲ್ಲಿ ಶಾಲಾ ವಾಹನ ಹಾಗೂ ಪೋಷಕರ ವಾಹನಗಳು ಶಾಲೆಗಳ ಆವರಣಕ್ಕೆ ತೆರಳುವಂತಾಗಬೇಕು. ಮೆಯೋಹಾಲ್‌ವರೆಗೂ ಮೇಲ್ಸೇತುವೆ ನಿರ್ಮಿಸಿದಲ್ಲಿ ದಟ್ಟಣೆ ನಿವಾರಣೆ ಸಾಧ್ಯ. ಶಾಲೆಗಳ ಸಮಯ ಬೇರೆ ಬೇರೆ ಇರಬೇಕು' ಎಂದು ಸಂಚಾರ ಪೊಲೀಸರು ತಿಳಿಸಿದರು.

'ಜೆ.ಸಿ. ರಸ್ತೆಯಲ್ಲಿ ಸಂಚಾರ ದಟ್ಟಣೆ ನಿವಾರಣೆಯಾಗಲು ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಮೇಲ್ಸೇತುವೆ ನಿರ್ಮಿಸಬೇಕು. ಮೇಲ್ಸೇತುವೆ ನಿರ್ಮಾಣವಾದರೆ ಕೇವಲ 5 ನಿಮಿಷಗಳಲ್ಲಿ ಸಾಗಬಹುದಾಗಿದೆ' ಎನ್ನುತ್ತಾರೆ ಸಂಚಾರ ಪೊಲೀಸರು.

ಸುಗಮ ಸಂಚಾರಕ್ಕೆ ಅಡ್ಡಿ



ನಗರದ ಹೃದಯ ಭಾಗದಲ್ಲಿರುವ ಜೆ.ಸಿ. ರಸ್ತೆಗೆ ವೈಟ್ ಟಾಪಿಂಗ್ ಮಾಡಲಾಗಿದೆ. ಇದರಿಂದಾಗಿ ರಸ್ತೆಯ ಚಿತ್ರಣ ಬದಲಾಗಿದೆ. ಕಳೆದೊಂದು ವರ್ಷದಿಂದ ಈ ರಸ್ತೆಯ ಕಾಮಗಾರಿಯಿಂದ ವಾಹನ ಸವಾರರು ಹೈರಾಣಾಗಿದ್ದರು. ಈಗ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದರೂ ದಟ್ಟಣೆ ನಿವಾರಣೆಯಾಗಿಲ್ಲ. ಇದಕ್ಕೆ ಕಾರಣ ರಸ್ತೆಯ ಇಕ್ಕೆಲಗಳಲ್ಲಿ ವಾಹನಗಳ ಪಾರ್ಕಿಂಗ್. ಮಿನರ್ವ ವೃತ್ತದಿಂದ ಭಾರತ್ ಜಂಕ್ಷನ್‌ವರಗೆ ಎಡಭಾಗದಲ್ಲಿ ವಾಹನಗಳ ಬಿಡಿ ಭಾಗದ ಮಳಿಗೆಗಳಿದ್ದು, ಕಾರುಗಳು ಹಾಗೂ ದ್ವಿಚಕ್ರ ವಾಹನಗಳಿಗೆ ಎಲ್ಲ ರೀತಿಯ ಬಿಡಿ ಭಾಗಗಳನ್ನು ಅಳವಡಿಸಲಾಗುತ್ತದೆ. ಇದರಿಂದಾಗಿ ರಸ್ತೆಯಲ್ಲಿಯೇ ವಾಹನಗಳನ್ನು ನಿಲ್ಲಿಸುವ ಜತೆಗೆ, ಮಳಿಗೆಗಳ ಪ್ರತಿನಿಧಿಗಳು ನಡು ರಸ್ತೆಯಲ್ಲಿ ನಿಲ್ಲುತ್ತಿದ್ದಾರೆ. ಇದು ಅಪಘಾತಕ್ಕೆ ಅವಕಾಶ ಮಾಡಿಕೊಡುತ್ತಿದೆ.

ಚಾಮರಾಜಪೇಟೆ, ಬಸವನಗುಡಿ ಕಡೆಯಿಂದ ಬರುವವರು ಲಾಲ್‌ಬಾಗ್ ಫೋರ್ಟ್ ರಸ್ತೆ ಮೂಲಕ ಬಂದು, ಜೆ.ಸಿ. ರಸ್ತೆ ತಲುಪುತ್ತಾರೆ. ಅದೇ ರೀತಿ, ಜೆ.ಪಿ. ನಗರ, ಜಯನಗರ, ವಿ.ವಿ ಪುರ ಭಾಗದಿಂದ ಬರುವವರು ಡಯಾಗನಲ್ ರಸ್ತೆ ಹಾಗೂ ಆರ್.ವಿ ರಸ್ತೆ ಮೂಲಕ ಬಂದು, ಜೆ.ಸಿ. ರಸ್ತೆ ಸೇರುತ್ತಾರೆ. ಎಚ್.ಸಿ. ಜವರಾಯ ವೃತ್ತದ ಕಡೆಯಿಂದ ಬರುವವರು ಲಾಲ್‌ಬಾಗ್ ಫೋರ್ಟ್ ರಸ್ತೆ ಮೂಲಕ ಜೆ.ಸಿ. ರಸ್ತೆ ತಲುಪುತ್ತಾರೆ. ಇದರಿಂದಾಗಿ ನಾಲ್ಕು ರಸ್ತೆಗಳಲ್ಲಿ ಬರುವ ವಾಹನಗಳು ಒಂದೇ ರಸ್ತೆಯನ್ನು ಸೇರಿ, ದಟ್ಟಣೆ ಹೆಚ್ಚಾಗುತ್ತಿದೆ.

ಸುದ್ದಿ 2 ನಿಮಿಷ

'ಮಕ್ಕಳಲ್ಲಿ ಸೃಜನಶೀಲತೆ ಅರಳಲು ಆಟ ಸಹಕಾರಿ'

ಬೆಂಗಳೂರು: 'ಮಕ್ಕಳಲ್ಲಿ ಸೃಜನಶೀಲತೆ ಅರಳಲು ಆಟಗಳು ಸಹಕಾರಿ. ಅವರಿಗೆ ತೋಚಿದ ಹಾಗೂ ಅವರ ಶೈಲಿಯಲ್ಲಿ ಆಡಲು ಪಾಲಕರು ಬಿಡಬೇಕು' ಎಂದು ಲೇಖಕಿ ರೋಹಿಣಿ ನಿಲೇಕಣಿ ಅಭಿಪ್ರಾಯ ವ್ಯಕ್ತಪಡಿಸಿದರು.

ಏಕ್‌ಸ್ಟೆಪ್ ಫೌಂಡೇಷನ್ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರ 'ಪ್ಲೇಬುಕ್ ಆಫ್ ಪ್ಲೇ' ಕೃತಿ ಜನಾರ್ಪಣೆಯಾಯಿತು. ಈ ವೇಳೆ ಮಾತನಾಡಿದ ಅವರು, 'ಬಾಲ್ಯದಲ್ಲಿ ಮಕ್ಕಳು ನಿಯಮಬದ್ಧವಾದ ಆಟಗಳನ್ನು ಆಡುವುದಕ್ಕಿಂತ, ಅವರಿಗೆ ತೋಚಿದ ಆಟಗಳನ್ನು ಆಡಲು ಪ್ರೋತ್ಸಾಹಿಸಬೇಕು. ಆಗ ಅವರ ಕಲ್ಪನೆ, ಸೃಜನಶೀಲತೆ ಹೊರಹೊಮ್ಮಲಿದೆ' ಎಂದು ಹೇಳಿದರು.

'ಆಟವು ಮಗುವಿನ ಭಾಷೆಯಾಗಿದೆ. ನರವಿಜ್ಞಾನದ ಸಂಶೋಧನೆ ಪ್ರಕಾರ, ಆಟವು ಮಿದುಳಿನ ರಚನೆ ಮತ್ತು ಕಾರ್ಯವನ್ನು ಬಲಪಡಿಸುತ್ತದೆ. ಸ್ವಯಂ ನಿಯಂತ್ರಣ, ಕೌಶಲವೃದ್ಧಿ, ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಯನ್ನು ಬೆಂಬಲಿಸುತ್ತದೆ' ಎಂದರು.

'ಮಕ್ಕಳಿಗೆ ಆಟಗಳ ಬಗ್ಗೆ ಸೂಚನಾ ಕೈಪಿಡಿಗಳು ಅಗತ್ಯವಿಲ್ಲ. ಬದಲಾಗಿ, ಅವರಿಗೆ ಸ್ವಾತಂತ್ರ್ಯ, ವಿಶ್ವಾಸ ಮತ್ತು ಸ್ಥಳ ಬೇಕಿದೆ. ಆಟಗಳು ಸ್ವಾಭಾವಿಕವಾಗಿ ಬರುತ್ತವೆ' ಎಂದು ಹೇಳಿದರು.

ಏಕ್‌ಸ್ಟೆಪ್ ಫೌಂಡೇಷನ್‌ನ ನೀತಿ ಮತ್ತು ಪಾಲುದಾರಿಕೆಗಳ ಮುಖ್ಯಸ್ಥೆ ದೀಪಿಕಾ ಮೊಗಿಲಿಶೆಟ್ಟಿ ಉಪಸ್ಥಿತರಿದ್ದರು.

ಬೆಂಗಳೂರು–ಮೈಸೂರು ಹೆದ್ದಾರಿ ಬದಿ ಕಾಡಿಗೆ ಬೆಂಕಿ



ರಾಮನಗರ: ಕಿಡಿಗೇಡಿಗಳು ಅರಣ್ಯ ಪ್ರದೇಶಕ್ಕೆ ಬೆಂಕಿ ಹಚ್ಚಿದ ಪರಿಣಾಮ ಮೂರು ಗುಡ್ಡಗಳಲ್ಲಿ ಬೆಳೆದಿದ್ದ ಅರಣ್ಯ ಪ್ರದೇಶ ಬೆಂಕಿಯಿಂದ ಹೊತ್ತಿ ಉರಿದ ಘಟನೆ ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರು ಗುಡ್ಡದಲ್ಲಿ ಭಾನುವಾರ ಸಂಭವಿಸಿದೆ.

ಅಬ್ಬೂರು ಗುಡ್ಡದಲ್ಲಿ ಕಾಣಿಸಿಕೊಂಡ ಬೆಂಕಿ ಪಕ್ಕದ ಪಟ್ಲು ಗುಡ್ಡ, ಕೋಮನಹಳ್ಳಿ ಗುಡ್ಡ ಅರಣ್ಯ ಪ್ರದೇಶಗಳಿಗೆ ವ್ಯಾಪಿಸಿದೆ.

ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯ ರಾಮನಗರ-ಚನ್ನಪಟ್ಟಣ ಬೈಪಾಸ್ ರಸ್ತೆ ಸನಿಹದಲ್ಲೇ ಇರುವ ಈ ಗುಡ್ಡಗಳಲ್ಲಿನ ಕಾಡು ಹೊತ್ತಿ ಹುರಿಯುತ್ತಿದ್ದ ದೃಶ್ಯ ಹೆದ್ದಾರಿಯಲ್ಲಿ ಸಂಚರಿಸಿದ ಪ್ರಯಾಣಿಕರಲ್ಲಿ ಆತಂಕ ಮೂಡಿಸಿತು.

ಬೆಂಕಿ ನಂದಿಸಲು ಅರಣ್ಯ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ರಾತ್ರಿಯಿಡೀ ಕಾರ್ಯಾಚರಣೆ ನಡೆಸಿದರು.

'ಕಿರುಕುಳ ನೀಡಿದರೆ ಕ್ರಮ'

ಬೆಂಗಳೂರು: 'ಖಾಸಗಿ ಶಾಲೆಗಳ ಮಾನ್ಯತೆ ನವೀಕರಣ ಪ್ರಕ್ರಿಯೆಯನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ಸರಳೀಕರಿಸಲಾಗುವುದು. ಈ ವಿಚಾರದಲ್ಲಿ ಶಾಲಾ ಆಡಳಿತ ಮಂಡಳಿಯವರಿಗೆ ಅಧಿಕಾರಿಗಳು ಕಿರುಕುಳ ನೀಡುವುದು ಕಂಡುಬಂದರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಎಚ್ಚರಿಕೆ ನೀಡಿದರು.

ಅರಮನೆ ಮೈದಾನದಲ್ಲಿ ಖಾಸಗಿ ಶಾಲಾ ಸಂಘಟನೆ ಕ್ಯಾಮ್ಸ್, ವಿವಿಧ ಶಾಲಾ ಆಡಳಿತ ಮಂಡಳಿಗಳು, ಸಂಸ್ಥೆಗಳ ಸಹಯೋಗದಲ್ಲಿ ಭಾನುವಾರ ನಡೆದ 'ವಿಷನ್- ಮಿಷನ್' ಎಂಬ ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಇಲಾಖೆಯಲ್ಲಿ ತಂದ ಸುಧಾರಣೆಗಳಿಗಾಗಿ ನೀಡಿದ ಸಚಿವರಿಗೆ 'ಶಿಕ್ಷಣ ಬಂಗಾರ' ಬಿರುದು ನೀಡಿ ಸನ್ಮಾನಿಸಲಾಯಿತು.

'ಖಾಸಗಿ ಶಾಲೆಗಳ ಮಾನ್ಯತೆ ನವೀಕರಣ ವಿಚಾರದಲ್ಲಿ ಹಲವು ವರ್ಷಗಳಿಂದ ಸಾಕಷ್ಟು ಸಮಸ್ಯೆಗಳಿವೆ. ಈ ಮೊದಲು 60ಕ್ಕೂ ಹೆಚ್ಚು ದಾಖಲೆಗಳನ್ನು ಸಲ್ಲಿಸಬೇಕಿತ್ತು. ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಅದನ್ನು 30ಕ್ಕೆ ಇಳಿಸಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಸರಳೀಕರಿಸಲಾಗುವುದು. ಈ ಉದ್ದೇಶದಿಂದ ಸದನ ಸಮಿತಿಯನ್ನೂ ರಚಿಸಲಾಗಿದೆ' ಎಂದರು.

'ಮಾನ್ಯತೆ ನವೀಕರಣ ವಿಚಾರದಲ್ಲಿ ಅಧಿಕಾರಿಗಳಿಂದ ಕಿರುಕುಳದ ಆರೋಪ, ದೂರುಗಳು ಬರುತ್ತಿವೆ. ಇದನ್ನು ಸಹಿಸುವುದಿಲ್ಲ' ಎಂದೂ ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಡಿ.ಟಿ. ಶ್ರೀನಿವಾಸ್, ರಾಮೋಜಿ ಗೌಡ, ಭಾರತೀಯ ಶಿಕ್ಷಣ ಮಂಡಳಿಯ ಕಾರ್ಯನಿರತ ಅಧ್ಯಕ್ಷ ಎನ್.ಪಿ. ಸಿಂಗ್, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ, ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್, ಪ್ರೌಢ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಮಂಜುನಾಥ್ ಇದ್ದರು.

ಗಣಿತಕ್ಕೆ 2 ರೀತಿ ಪ್ರಶ್ನೆ ಪತ್ರಿಕೆಗೆ ಮನವಿ

'ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಆಧರಿಸಿ ಗಣಿತ ವಿಷಯದಲ್ಲಿ ಸಿಬಿಎಸ್‌ಇ ಮಾದರಿಯಲ್ಲಿ ಸುಲಭವಾದ ಮತ್ತು ಕಠಿಣ ಎರಡು ರೀತಿಯ ಪ್ರಶ್ನೆ ಪತ್ರಿಕೆ ನೀಡಬೇಕು' ಎಂದು ಖಾಸಗಿ ಶಾಲಾ ಸಂಘಟನೆಗಳ ಪದಾಧಿಕಾರಿಗಳು ಮನವಿ ಮಾಡಿದರು. ಈ ಕುರಿತು ಪರಿಶೀಲಿಸಿ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ವೇದಿಕೆಯಲ್ಲೇ ಸಚಿವರು ಸೂಚಿಸಿದರು.

ಚಿತ್ರಾವಳಿ



ನಗರದ ಕರ್ನಾಟಕ ಜೈನ ಭವನದಲ್ಲಿ ಉತ್ತರ ಕರ್ನಾಟಕ ಜೈನ ಬಾಂಧವರು ಮತ್ತು ಶ್ರೀ ಜಿನಗೌಡ ಸುಭಾಷ ಪಿ. ಟ್ರಸ್ಟ್ ಆಯೋಜಿಸಿದ್ದ ಏಳನೇ ವರ್ಷದ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದಲ್ಲಿ ಪದ್ಮಿನಿ ನಾಗರಾಜು ಅವರಿಗೆ 'ಆದರ್ಶ ಜೈನ ಸಮಾಜ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಡಿ. ಸುರೇಂದ್ರಕುಮಾರ್, ಅನಿತಾ ಡಿ. ಸುರೇಂದ್ರಕುಮಾರ್ ಮತ್ತು ಶ್ರೀ ಜಿನಗೌಡ ಸುಭಾಷ ಪಿ. ಟ್ರಸ್ಟ್ ಅಧ್ಯಕ್ಷ ಸುಭಾಷ ಪಿ. ಜಿನಗೌಡ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ



ಬೆಂಗಳೂರು ಗಾಯನ ಸಮಾಜ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ಎಂ. ನಾಗರಾಜ್, ಮೈಸೂರು ಎಂ. ಮಂಜುನಾಥ್ ಅವರಿಗೆ 'ಗೋಟುವಾದ್ಯಂ ನಾರಾಯಣ ಅಯ್ಯಂಗಾರ್ ಸ್ಮಾರಕ' ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್, ಗಾಯನ ಸಮಾಜದ ಅಧ್ಯಕ್ಷ ಎಂ.ಆರ್.ವಿ. ಪ್ರಸಾದ್, ಉಪಾಧ್ಯಕ್ಷ ಅಚ್ಯುತ ರಾವ್ ಪದಕಿ ಮತ್ತು ಕಾರ್ಯದರ್ಶಿ ಕೆ. ನಾಗರಾಜ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ರಾಜ್ಯ ಸರ್ಕಾರಕ್ಕೆ ಸಾಹಿತಿ ಬರಗೂರು ರಾಮಚಂದ್ರಪ್ಪ ಆಗ್ರಹ

'ಗೌರವ ಡಾಕ್ಟರೇಟ್‌ಗೆ ಕಡಿವಾಣ ಹಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೌರವ ಕಳೆದುಕೊಳ್ಳುತ್ತಿರುವ ಗೌರವ ಡಾಕ್ಟರೇಟ್‌ಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಕಾಯ್ದೆ ರೂಪಿಸಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಆಗ್ರಹಿಸಿದರು.

ಕನ್ನಡ ಸಂಘರ್ಷ ಸಮಿತಿಯು ಕುವೆಂಪು ಹಾಗೂ ದ.ರಾ. ಬೇಂದ್ರೆ ಅವರ ಜನ್ಮದಿನದ ಅಂಗವಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರಜಾವಾಣಿ 'ಅಭಿಮತ' ಸಂಪಾದಕ ರಘುನಾಥ ಚ.ಹ ಅವರಿಗೆ 'ಕುವೆಂಪು ಚಿರಂತನ ಪ್ರಶಸ್ತಿ', ಪತ್ರಕರ್ತ ಇಂದೂಧರ ಹೊನ್ನಾಪುರ ಅವರಿಗೆ 'ಕುವೆಂಪು ಅನಿಕೇತನ ಪ್ರಶಸ್ತಿ' ಹಾಗೂ ಕವಯಿತ್ರಿ ಸಂಘಮಿತ್ರೆ ನಾಗರಘಟ್ಟ ಅವರಿಗೆ 'ಕುವೆಂಪು ಯುವಕವಿ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

'ಗೌರವ ಡಾಕ್ಟರೇಟ್ ನೀಡಲು ಅಧಿಕೃತ ವಿಶ್ವವಿದ್ಯಾಲಯಗಳು ಮಾತ್ರ ಅರ್ಹವಾಗಿರುತ್ತವೆ. ಆದರೆ, ಈಗ ವಿವಿಧ ಸಂಸ್ಥೆಗಳು ಗೌರವ ಡಾಕ್ಟರೇಟ್ ನೀಡುತ್ತಿವೆ. ಇದರಿಂದಾಗಿ ಸಾಧನೆ ಮಾಡಬೇಕೆಂದು ಹೊರಟವರ ಉತ್ಸಾಹ ಕುಂದಲಿದೆ. ಆದ್ದರಿಂದ ಗೌರವ ಡಾಕ್ಟರೇಟ್ ಅನ್ನು ಅಧಿಕೃತ ವಿಶ್ವವಿದ್ಯಾಲಯ ಮಾತ್ರ ನೀಡುವಂತಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಗೌರವ ಡಾಕ್ಟರೇಟ್, ನಾಡೋಜದಂತಹ ಗೌರವ ಪದವಿಗಳನ್ನು ಹೆಸರಿನ ಹಿಂದೆ ಹಾಕಿಕೊಳ್ಳಬಾರದು ಎಂಬ ನಿಯಮವಿದೆ. ಆದರೆ, ಈಗ ಲೆಟರ್ ಹೆಡ್‌ನಲ್ಲಿಯೇ ಹಾಕಿಕೊಳ್ಳುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಕೆಲ ವಿಮರ್ಶಕರು ಕುವೆಂಪು ಮತ್ತು ಬೇಂದ್ರೆಯನ್ನು ಎದುರು ಬದುರು ನಿಲ್ಲಿಸಲು ಪ್ರಯತ್ನಿಸಿದರು. ಇಬ್ಬರಿಗೂ ಅವರದೇ ಆದ ಶಕ್ತಿಯಿದೆ. ಅವರು ಕರ್ನಾಟಕದ ಸಂಸ್ಕೃತಿ ಮತ್ತು ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ' ಎಂದು ಹೇಳಿದರು.

ಕುವೆಂಪು ಹಾಗೂ ಬೇಂದ್ರೆ ಕುರಿತು ಉಪನ್ಯಾಸ ನೀಡಿದ ಕವಿ ಕಾ.ವೆಂ. ಶ್ರೀನಿವಾಸಮೂರ್ತಿ, 'ಕನ್ನಡ ಶಾಲೆ ಮುಚ್ಚುವ ಹಾಗೂ ಆಂಗ್ಲ ಮಾಧ್ಯಮ ಶಾಲೆ ಆರಂಭಿಸುವ ಸರ್ಕಾರದ ನಡೆ ಕುವೆಂಪು ಮತ್ತು ಬೇಂದ್ರೆ ಅವರ ಆಶಯಕ್ಕೆ ವಿರುದ್ಧವಾಗಿದೆ' ಎಂದು ಅಭಿಪ್ರಾಯಪಟ್ಟರು.

ಪತ್ರಕರ್ತ ರಾಮಣ್ಣ ಎಚ್. ಕೋಡಿಹೊಸಹಳ್ಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿಮರ್ಶಕ ಎಚ್. ದಂಡಪ್ಪ, ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ, ಪ್ರಧಾನ ಕಾರ್ಯದರ್ಶಿ ತಾ.ಸಿ. ತಿಮ್ಮಯ್ಯ, ಜಂಟಿ ಕಾರ್ಯದರ್ಶಿ ಇಂದಿರಾ ಶರಣ್ ಜಮ್ಮಲದಿನ್ನಿ ಉಪಸ್ಥಿತರಿದ್ದರು.




ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ರಘುನಾಥ ಚ.ಹ ಅವರಿಗೆ 'ಕುವೆಂಪು ಚಿರಂತನ ಪ್ರಶಸ್ತಿ', ಇಂದೂಧರ ಹೊನ್ನಾಪುರ ಅವರಿಗೆ'ಕುವೆಂಪು ಅನಿಕೇತನ ಪ್ರಶಸ್ತಿ', ಸಂಘಮಿತ್ರೆ ನಾಗರಘಟ್ಟ ಅವರಿಗೆ 'ಕುವೆಂಪು ಯುವಕವಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಎ.ಎಸ್.ನಾಗರಾಜಸ್ವಾಮಿ, ಇಂದಿರಾ ಶರಣ್ ಜಮ್ಮಲದಿನ್ನಿ, ಎಚ್. ದಂಡಪ್ಪ, ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಬರಗೂರು ರಾಮಚಂದ್ರಪ್ಪ, ಕಾ.ವೆಂ. ಶ್ರೀನಿವಾಸಮೂರ್ತಿ ಮತ್ತು ತಾ.ಸಿ. ತಿಮ್ಮಯ್ಯ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಭಾರತದ ಆಹಾರ ಮತ್ತು ಪಾನೀಯಗಳ ಸ್ಟಾರ್ಟ್‌ಅಪ್ ಪ್ರದರ್ಶನ, ನವೀನತೆ, ಬೆಳವಣಿಗೆಗೆ ವೇದಿಕೆ: ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11

ರಾಜ್ಯಮಟ್ಟದ ಐದು ದಿನಗಳ ಜಾನಪದ ನಾಟಕೋತ್ಸವ: 'ವಿದ್ಯಾರ್ಥಿಗಳಿಗೆ ರಂಗ ಶಿಕ್ಷಣದ ಅವಶ್ಯಕತೆ' ಉಪನ್ಯಾಸ: ಆಂಜನೇಯ, ಸಿ.ಎನ್. ನಂಜುಂಡಯ್ಯ, ಸುಂದರೇಶ್ ನಾಯಕ್ ಎ.ಸಿ., ಅಧ್ಯಕ್ಷತೆ: ಎಂ.ಎನ್. ಭೈರೇಗೌಡ, 'ದುಬಾರಿ ಖೈದಿ' ನಾಟಕ ಪ್ರದರ್ಶನ: ನಿರ್ದೇಶನ: ಯು. ಗೋವಿಂದೇಗೌಡ, ಪ್ರಸ್ತುತಿ: ರಂಗ ಸಂಸ್ಕೃತಿ ಟ್ರಸ್ಟ್, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಗಂಗಮ್ಮ ಪಟೇಲ್ ಮುದ್ದಭೈರಪ್ಪ ಸಭಾಂಗಣ, ನ್ಯೂ ಮಂಜುಳ ಪಬ್ಲಿಕ್ ಸ್ಕೂಲ್ ಸಮುಚ್ಚಯ, ಗೃಹಲಕ್ಷ್ಮಿ ಬಡಾವಣೆ, ನೆಲಗದರನಹಳ್ಳಿ, ಮಧ್ಯಾಹ್ನ 1

ಕನ್ನಡ ಬಾರದವರಿಗೆ ಕನ್ನಡ ಕಲಿಕೆ ತರಗತಿಗಳು 14ನೇ ತಂಡದ ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅತಿಥಿ: ಸಂತೋಷ್ ಹಾನಗಲ್, ಉಪಸ್ಥಿತಿ: ಶಿವರಾಜ್ ಜಿ. ಹೊಸಹಳ್ಳಿ, ಅಧ್ಯಕ್ಷತೆ: ಮ. ಚಂದ್ರಶೇಖರ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೇಂದ್ರೀಯ ಸದನ ಕನ್ನಡ ಸಂಘ, ಸ್ಥಳ: ಕೇಂದ್ರೀಯ ಸದನ ಸ್ವಾಗತ ಮಂಟಪ ಸಮೀಪ, ಕೋರಮಂಗಲ, ಮಧ್ಯಾಹ್ನ 1



ಪುರುಷೋತ್ತಮ ಬಿಳಿಮಲೆ

ಬೆಂಗಳೂರು ಹಬ್ಬ: ಮಧ್ಯಾಹ್ನ 3.30ಕ್ಕೆ ಸಂಗೀತ ಕಾರ್ಯಕ್ರಮ: ಬ್ಯಾಂಡ್ಸ್ ಗ್ಲೋರ್, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಸಂಜೆ 5ಕ್ಕೆ ಬಸವನಗುಡಿ ಹೆರಿಟೇಜ್ ವಾಕ್: ಪ್ರಾರಂಭವಾಗುವ ಸ್ಥಳ: ಬುಲ್ ಟೆಂಪಲ್ ರಸ್ತೆ, ಬಸವನಗುಡಿ, ಸಂಜೆ 6.30ಕ್ಕೆ 'ರಾಜಾಶ್ರಯದ ಪ್ರತಿಧ್ವನಿಗಳು–ವಿಜಯನಗರ ಸಾಮ್ರಾಜ್ಯದ ಸಂಗೀತ ಮತ್ತು ಸಾಹಿತ್ಯ'ದ ಕುರಿತು ಸಂಗೀತ: ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, ಸಂಜೆ 7ಕ್ಕೆ ನೃತ್ಯ ಪ್ರದರ್ಶನ, ಸ್ಥಳ: ಯುವಪಥ, ಜಯನಗರ, ಸಂಜೆ 7.30ಕ್ಕೆ 'ಸೈಜ್ ಹರ್! ದಿ ಕ್ರೌನ್' ನಾಟಕ ಪ್ರದರ್ಶನ: ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ರಾತ್ರಿ 8ಕ್ಕೆ ಸಂಗೀತ ಕಾರ್ಯಕ್ರಮ: ಗುರುಪ್ರಿಯಾ ಮತ್ತು ಭಾರದ್ವಾಜ್, ಸ್ಥಳ: ಸಭಾ, ಕಾಮ್‌ರಾಜ್ ರಸ್ತೆ.

ರಂಗನಾಯಕಮ್ಮ, ಜಿ. ಸುಬ್ಬರಾವ್ ಸಂಗೀತ ದತ್ತಿ: ಭಕ್ತಿ ಸಂಗೀತ: ಗಾಯನ: ಶ್ರಾವ್ಯ ಮತ್ತು ತಂಡ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಸಂಜೆ 5

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಭಾಗವಹಿಸುವವರು: ಲಕ್ಷ್ಮೀಕಾಂತ ಆರ್., ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್. ಆರ್. ಕಾಲೊನಿ, ಸಂಜೆ 5.45

ಮಹಾಯೋಗಿ ವೇಮನ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ವೇಮನಾನಂದ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ಎಸ್. ತಂಗಡಗಿ, ಅತಿಥಿಗಳು: ರಾಮಲಿಂಗಾರೆಡ್ಡಿ, ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಮಧ್ವನವರಾತ್ರಿ ಮಹೋತ್ಸವ: ಪ್ರವಚನ: ಚಂದ್ರಶೇಖರಾಚಾರ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

'ಸುಮಧ್ವ ವಿಜಯ' ಪ್ರವಚನ: ರಾಮ ವಿಠಲಾಚಾರ್ಯ, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ ಎರಡನೇ ಹಂತ, ಸಂಜೆ 6.30

ರಾಜ್ಯಮಟ್ಟದ 24ನೇ ನಾಟಕೋತ್ಸವದ ಉದ್ಘಾಟನೆ: ಹಿ.ಚಿ. ಬೋರಲಿಂಗಯ್ಯ, ರಂಗ ಗೌರವ ಸ್ವೀಕರಿಸುವವರು: ಎಸ್.ವಿ. ಸುಷ್ಮಾ, ಅಧ್ಯಕ್ಷತೆ: ಎಲ್. ಹನುಮಂತಯ್ಯ, 'ರಕ್ಕಸ ತಂಗಡಿ' ನಾಟಕ ಪ್ರದರ್ಶನ: ರಚನೆ: ಗಿರೀಶ್ ಕಾರ್ನಾಡ್, ನಿರ್ದೇಶನ: ಗಗನ್ ಪ್ರಸಾದ್, ಪ್ರಸ್ತುತಿ: ಸ್ಪಷ್ಟ ಥಿಯೇಟರ್, ಆಯೋಜನೆ: ಭಾಗವತರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.45

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

'ಸ್ಥಳೀಯ ಸಂಸ್ಥೆ ಚುನಾವಣೆಗೆ ತಯಾರಾಗಿ'

ಬೆಂಗಳೂರು: '2026ರಲ್ಲಿ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳು ನಡೆಯಲಿದ್ದು, ಅಧಿಕಾರದಿಂದ ಭ್ರಷ್ಟರನ್ನು ದೂರವಿಡಲು ಆಮ್ ಆದ್ಮಿ ಪಕ್ಷದಕಾರ್ಯಕರ್ತರು ಹೋರಾಟ ತೀವ್ರಗೊಳಿಸಬೇಕು' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ತಿಳಿಸಿದರು.

ಭಾನುವಾರ ನಡೆದ ರಾಜ್ಯ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಅವರು, 'ಪಾಲಿಕೆ, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ, ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಸಕಾಲದಲ್ಲಿ ನಡೆಸಿಲ್ಲ. ರಾಜ್ಯವನ್ನು ಆಳಿರುವ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸಂವಿಧಾನದ ಅಧಿಕಾರ ವಿಕೇಂದ್ರೀಕರಣ ಸೂತ್ರಕ್ಕೆ ಕೊಡಲಿ ಪೆಟ್ಟು ನೀಡಿವೆ. ಪ್ರಾಮಾಣಿಕರ ಕೈಗೆ ರಾಜಕೀಯ ಅಧಿಕಾರ ಸಿಗಬೇಕು' ಎಂದು ಹೇಳಿದರು.

ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಪೃಥ್ವಿ ರೆಡ್ಡಿ ಮಾತನಾಡಿದರು. ಪಕ್ಷದ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ, ಪ್ರಧಾನ ಕಾರ್ಯದರ್ಶಿ ಸಂಚಿತ್ ಸಹವಾನಿ, ರಾಜ್ಯ ಉಪಾಧ್ಯಕ್ಷ ವಿಜಯ ಶರ್ಮ, ಸಂಘಟನಾ ಕಾರ್ಯದರ್ಶಿಗಳಾದ ಅರ್ಜುನ್ ಹಲಗಿ ಗೌಡ, ಬಸವರಾಜ ಮುದಿಗೌಡರ್, ಸತೀಶ್ ಕುಮಾರ್, ರಾಜ್ಯ ಖಜಾಂಚಿ ಪ್ರಕಾಶ್ ನಡುಂಗಡಿ, ಪ್ರಚಾರ ಸಮಿತಿಯ ಅಧ್ಯಕ್ಷ ಲಕ್ಷ್ಮಿಕಾಂತ್ ರಾವ್ ಉಪಸ್ಥಿತರಿದ್ದರು.

ದಂಪತಿ ಸೇರಿ ಮೂವರ ವಿರುದ್ಧ ಎಫ್ಐಆರ್

ಮದುವೆಯಾಗುವುದಾಗಿ ನಂಬಿಸಿ, ₹1.53 ಕೋಟಿ ವಂಚನೆ: ಟೆಕಿ ಆರೋಪ • ಕೆಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆಯಾಗುವುದಾಗಿ ನಂಬಿಸಿ, ₹1.53 ಕೋಟಿ ಪಡೆದು ಮಹಿಳಾ ಟೆಕಿಗೆ ವಂಚಿಸಿರುವ ಘಟನೆ ನಡೆದಿದೆ.

ವೈಟ್‌ಫೀಲ್ಡ್ ನಿವಾಸಿ, 29 ವರ್ಷದ ಯುವತಿ ನೀಡಿದ ದೂರು ಆಧರಿಸಿ ವಿಜಯ್ ರಾಜ್ ಗೌಡ, ಆತನ ಪತ್ನಿ ಸೌಮ್ಯಾ ಮತ್ತು ತಂದೆ ಯು.ಜೆ. ಬೋರೇಗೌಡ ಎಂಬುವವರ ವಿರುದ್ಧ ಕೆಂಗೇರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

‘2024ರ ಮಾರ್ಚ್‌ನಲ್ಲಿ ಮ್ಯಾಟ್ರಿಮೋನಿ ವೆಬ್‌ಸೈಟ್ ಮೂಲಕ ವಿಜಯ್ ರಾಜ್ ಪರಿಚಯವಾಯಿತು. ವಿ.ಆರ್.ಜಿ ಎಂಟರ್‌ಪ್ರೈಸಸ್ ಎಂಬ ಕಂಪನಿ ಇದ್ದು, ರಾಜಾಜಿನಗರ ಮತ್ತು ಸದಾಶಿವನಗರದಲ್ಲಿ ಮನೆಗಳಿವೆ ಎಂದು ಹೇಳಿದ್ದ. ಬೆಂಗಳೂರಿನಲ್ಲಿ ₹715 ಕೋಟಿ ಆಸ್ತಿ ಇದೆ ಎಂದು ನಂಬಿಸಿ, ಒಟ್ಟಿಗೆ ಸೇರಿ ಬ್ಯುಸಿನೆಸ್ ಮಾಡುವ ನೆಪ ಹೇಳಿ ಹಂತ ಹಂತವಾಗಿ ₹1.75 ಕೋಟಿ ಪಡೆದುಕೊಂಡಿದ್ದ’ ಎಂದು ಯುವತಿ ದೂರಿನಲ್ಲಿ ತಿಳಿಸಿದ್ದಾರೆ.

‘ಕೆಂಗೇರಿ ಬಳಿ ನನ್ನನ್ನು ಕರೆಯಿಸಿಕೊಂಡು ತನ್ನ ಕುಟುಂಬದವರಿಗೆ ಪರಿಚಯಿಸಿದ್ದ. ಪರಿಚಯ ಗಟ್ಟಿಯಾದ ನಂತರ ವಿಜಯ್, ತನ್ನ ಆಸ್ತಿಯ ಸಂಬಂಧ ಇ.ಡಿ. ದಾಳಿಯಲ್ಲಿ ಪ್ರಕರಣ ದಾಖಲಾಗಿದೆ, ಬ್ಯಾಂಕ್ ಖಾತೆಗಳು ಫ್ರೀಜ್ ಆಗಿವೆ ಎಂದು ವಿವಿಧ ಕೋರ್ಟ್‌ಗಳಲ್ಲಿ ಪ್ರಕರಣ ನಡೆಯುತ್ತಿರುವ ನಕಲಿ ದಾಖಲೆ ತೋರಿಸಿ, ಹಣ ಪಡೆದುಕೊಂಡ. ಮದುವೆಗೆ ಹೆಣ್ಣು ನೋಡಲು ನನ್ನ ಮನೆಗೆ ಬರುವುದಾಗಿ ಸುಳ್ಳು ಹೇಳಿ ಮತ್ತೆ ನನ್ನ ಬ್ಯಾಂಕ್ ಖಾತೆಯಿಂದ ಆತನ ಬ್ಯಾಂಕ್ ಖಾತೆಗೆ ಹಣ ಹಾಕಿಸಿಕೊಂಡ. ಅಲ್ಲದೇ ಸ್ನೇಹಿತರಿಗೆ ವ್ಯವಹಾರ ಮಾಡಲು ಪ್ರೇರೇಪಿಸಿ ಲಕ್ಷಾಂತರ ರೂಪಾಯಿ ಪಡೆದು ವಂಚಿಸಿದ್ದಾನೆ’ ಎಂದು ಆರೋಪಿಸಿದ್ದಾರೆ.

ಅಪರಾಧ ಸುದ್ದಿ

‘ಹಣ ವಾಪಸ್ ನೀಡುವಂತೆ ಕೇಳಿದಾಗ ₹22 ಲಕ್ಷ ಮಾತ್ರ ನೀಡಿದ. ಉಳಿದ ಹಣ ನೀಡುವಂತೆ ಕೇಳಲು ಆತನ ಮನೆಗೆ ಹೋದಾಗ, ಆರೋಪಿಗೆ ಮದುವೆಯಾಗಿದ್ದು, ಒಂದು ಮಗು ಇರುವುದು ಗೊತ್ತಾಯಿತು. ಅಲ್ಲದೇ ತನ್ನ ಅಕ್ಕ ಎಂದು ಪರಿಚಯಿಸಿದ್ದ ಮಹಿಳೆಯೇ ಆತನ ಪತ್ನಿ ಎಂಬುದು ಗೊತ್ತಾಯಿತು. ಹಣ ವಾಪಸ್ ಕೇಳಿದರೆ, ನನ್ನ ಮತ್ತು ಸ್ನೇಹಿತರನ್ನು ಕೊಲೆ ಮಾಡುವದಾಗಿ ಬೆದರಿಕೆ ಹಾಕಿದ್ದಾನೆ. ಆರೋಪಿ ಮತ್ತು ಆತನ ಪತ್ನಿ ಮತ್ತು ತಂದೆಯ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ.

ಮಾರಕಾಸ್ತ್ರ ತೋರಿಸಿ ದಂಪತಿಗೆ ಬೆದರಿಕೆ: ಆರೋಪಿ ಸೆರೆ



ಅರ್ಬಾಜ್ ಖಾನ್

ರಸ್ತೆ ಮಧ್ಯೆ ನಿಂತು ಗಲಾಟೆ ಮಾಡಿ, ದಂಪತಿಗೆ ಮಾರಕಾಸ್ತ್ರ ತೋರಿಸಿ ಬೆದರಿಕೆ ಹಾಕಿ ಪರಾರಿಯಾಗಿದ್ದ ದ್ವಿಚಕ್ರ ವಾಹನ ಸವಾರನನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಾಹನ ನೋಂದಣಿ ಸಂಖ್ಯೆಯ ಆಧಾರದ ಮೇಲೆ ಆರೋಪಿ ಅರ್ಬಾಜ್ ಖಾನ್ ಎಂಬಾತನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ. ಆರೋಪಿಯು ಕನಕನಗರ ನಿವಾಸಿಯಾಗಿದ್ದು, ಮೀನು ಮಾರಾಟ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದಾನೆ.

ಶುಕ್ರವಾರ ಸಂಜೆ 6 ಗಂಟೆ ಸುಮಾರಿಗೆ ದಂಪತಿ ಕಾರಿನಲ್ಲಿ ಹೋಗುವಾಗ ಯಾವುದೋ ಕಾರಣಕ್ಕೆ ದ್ವಿಚಕ್ರ ವಾಹನ ಸವಾರನ ಜತೆ ಜಗಳ ಮಾಡಿಕೊಂಡಿದ್ದಾರೆ. ನಂತರ ವಸತಿ ಸಮುಚ್ಚಯವೊಂದರ ಸಿಗ್ನಲ್ ಬಳಿ ಕಾರು ನಿಲ್ಲಿಸಿದ್ದಾಗ ಬೈಕ್ ನಿಲ್ಲಿಸಿ ಬಂದ ಸವಾರ, ರಸ್ತೆ ಮಧ್ಯೆಯಲ್ಲಿಯೇ ದಂಪತಿ ಜತೆ ಗಲಾಟೆ ಮಾಡಿದ್ದಾನೆ. ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಆಕ್ರೋಶಗೊಂಡ ಸವಾರ ಮಾರಕಾಸ್ತ್ರ ತೋರಿಸಿ, ಧಮ್ಕಿ ಹಾಕಿದ್ದಾನೆ.

ಈ ದೃಶ್ಯ ಕಾರ್‌ನಲ್ಲಿದ್ದ ಡ್ಯಾಶ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದನ್ನು ಎ.ರೆಡ್ಡಿ ಎಂಬುವರು ‘ಎಕ್ಸ್’ನಲ್ಲಿ ಹಂಚಿಕೊಂಡು, ನಗರ ಪೊಲೀಸರಿಗೆ ಟ್ಯಾಗ್ ಮಾಡಿದ್ದರು. ವಿಡಿಯೊ ಹರಿದಾಡಿದ ಬೆನ್ನಲ್ಲೆ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಬೈಕ್ ಸವಾರನನ್ನು ಬಂಧಿಸಿದ್ದಾರೆ.

ಆರೋಪಿ ವಿರುದ್ಧ ಗೋವಿಂದ ಪುರ, ಫ್ರೇಜರ್ ಟೌನ್ , ಸಂಪಂಗಿ ರಾಮನಗರ, ಅಶೋಕನಗರ ಠಾಣೆಗಳಲ್ಲೂ ಪ್ರಕರಣ ದಾಖಲಾಗಿವೆ ಎಂದು ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

ಬಿಗ್ ಬಾಸ್ ಕನ್ನಡ ಸೀಸನ್ 12 ಗಿಲ್ಲಿಗೆ ಗೆಲುವಿನ ಕಿರೀಟ

ಬೆಂಗಳೂರು: ಖಾಸಗಿ ವಾಹಿನಿಯ ಬಿಗ್ ಬಾಸ್ ಕನ್ನಡ ಸೀಸನ್ 12ರಲ್ಲಿ ಗಿಲ್ಲಿ ನಟ ಎಂದೇ ಹೆಸರಾದ ನಟರಾಜ್ ವಿಜೇತರಾಗಿ ಹೊರಹೊಮ್ಮಿದರು. ರಕ್ಷಿತಾ ರನ್ನರ್ ಅಪ್ ಆದರು. ಭಾನುವಾರ ಬಿಡದಿಯ ಜಾಲಿವುಡ್ ಸ್ಟುಡಿಯೋಸ್‌ನಲ್ಲಿ ನಡೆದ ಫಿನಾಲೆಯಲ್ಲಿ ಕಾರ್ಯಕ್ರಮದ ನಿರೂಪಕ–ನಟ ಸುದೀಪ್ ವಿಜೇತರನ್ನು ಘೋಷಿಸಿ, ಅಭಿನಂದಿಸಿದರು. ಇದರೊಂದಿಗೆ ಬಿಗ್‌ಬಾಸ್ ಕಾರ್ಯಕ್ರಮ ಅಂತ್ಯಗೊಂಡಿತು.

ತಮ್ಮ ನೆಚ್ಚಿನ ಅಭ್ಯರ್ಥಿಗೆ ಆನ್‌ಲೈನ್ ಮೂಲಕ ಮತ ಚಲಾವಣೆ ಮಾಡಲು ಕಾರ್ಯಕ್ರಮದ ವೀಕ್ಷಕರಿಗೆ ಅವಕಾಶ ನೀಡಲಾಗಿತ್ತು. ಈ ಮೂಲಕ ಅಂತಿಮ ವಿಜೇತರನ್ನು ಆಯ್ಕೆ ಮಾಡಲಾಯಿತು.



ಫಿನಾಲೆಯಲ್ಲಿ ಗಿಲ್ಲಿ ನಟ, ಧನುಶ್, ಅಶ್ವಿನಿ ಗೌಡ, ರಘು, ಕಾವ್ಯಾ ಮತ್ತು ರಕ್ಷಿತಾ ಶೆಟ್ಟಿ ಸ್ಪರ್ಧೆಯಲ್ಲಿದ್ದರು. ಗಿಲ್ಲಿ ನಟ, ರಕ್ಷಿತಾ ಹಾಗೂ ಅಶ್ವಿನಿ ಗೌಡ ನಡುವೆ ಮೊದಲಿನಿಂದಲೂ ತುರುಸಿನ ಸ್ಪರ್ಧೆಯಿತ್ತು. ಬಿಗ್ ಬಾಸ್ ಸೀಸನ್–1ರ ಬಳಿಕ ಅತಿ ಹೆಚ್ಚು ಕುತೂಹಲ ಕೆರಳಿಸಿದ ಸೀಸನ್ ಇದಾಗಿತ್ತು.

ಒಬ್ಬ ಸ್ಪರ್ಧಿಗೆ 37 ಕೋಟಿಗೂ ಅಧಿಕ ಮತಗಳು ಬಂದಿವೆ, ಇನ್ನೊಬ್ಬ ಸ್ಪರ್ಧಿಗೂ ಸರಿ ಸುಮಾರು ಅಷ್ಟೇ ಮತಗಳು ಬಂದಿವೆ ಎಂದು ಸುದೀಪ್ ಹೇಳಿದ್ದರು.

ದಕ್ಷಿಣ ಭಾರತ ಸಮಾಜವಾದಿ ಸಮಾವೇಶ ನಾಳೆ

ಬೆಂಗಳೂರು: ಸಮಾಜವಾದಿ ಸಮಾಗಮ ಹಾಗೂ ಸಮಾಜವಾದಿ ಅಧ್ಯಯನ ಕೇಂದ್ರದ ವತಿಯಿಂದ ಜ.20ಕ್ಕೆ ನಗರದ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣದಲ್ಲಿ ‘ದಕ್ಷಿಣ ಭಾರತ ಸಮಾಜವಾದಿ ಸಮಾವೇಶ’ ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆ ಮೇಲೆ ಮಾಡುತ್ತಿರುವ ದಾಳಿ ವಿರೋಧಿಸಿ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಮಾವೇಶದ ಸ್ವಾಗತ ಸಮಿತಿಯ ಪ್ರಧಾನ ಸಂಚಾಲಕ ಶ್ರೀಕಂಠ ಮೂರ್ತಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಆರ್. ದಯಾನಂದ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಜನಸಂಖ್ಯೆಯ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡುವ ಯೋಚನೆಯಲ್ಲಿದೆ. ಹೀಗಾದರೆ, ದಕ್ಷಿಣದ ರಾಜ್ಯಗಳಿಗೆ ಭಾರಿ ಹೊಡೆತ ಬೀಳಲಿದೆ. ದಕ್ಷಿಣ ರಾಜ್ಯಗಳಿಗೆ ಕೊಡಬೇಕಾದ ತೆರಿಗೆಯ ಪಾಲನ್ನು ನೀಡುತ್ತಿಲ್ಲ. ಈ ಬಗ್ಗೆ ಸಮಾವೇಶದಲ್ಲಿ ಚರ್ಚೆ ನಡೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ನೀತಿ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಆಶಯ ನುಡಿ ಆಡಲಿದ್ದಾರೆ. ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಅಧ್ಯಕ್ಷತೆ ವಹಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಚಿತ್ರಕಲಾ ಪರಿಷತ್‌ನ ಅಧ್ಯಕ್ಷ ಬಿ.ಎಲ್. ಶಂಕರ್, ಸಾಹಿತಿ ಎಲ್. ಹನುಮಂತಯ್ಯ, ಕಾಂಗ್ರೆಸ್ ಪಕ್ಷದ ಮಹಿಳಾ ರಾಜ್ಯ ಘಟಕದ ಅಧ್ಯಕ್ಷೆ ಸೌಮ್ಯಾರೆಡ್ಡಿ ಮೊದಲಾದವರು ಭಾಗವಹಿಸಲಿದ್ದಾರೆ.

ತಮಿಳುನಾಡಿನ ಶಾಸಕ ರಾಜೇಶ್ ಕುಮಾರ್, ಕೇರಳದ ಮಾಜಿ ಹಣಕಾಸು ಸಚಿವ ಐಸ್ಯಾಕ್ ಥಾಮಸ್, ತೆಲಂಗಾಣದ ಶಾಸಕ ವಂಶಿಕೃಷ್ಣ, ನೆರೆರಾಜ್ಯಗಳ ಮಾಜಿ ಶಾಸಕರಾದ ವಿಜಯರಾಘವನ್, ಯಾದವ ರೆಡ್ಡಿ, ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಹೋರಾಟಗಾರರಾದ ಪ್ರಕಾಶ್ ಕಮ್ಮರಡಿ, ರವಿ ವರ್ಮಕುಮಾರ್, ಕೆ.ವಿ. ಭಟ್, ನೂರ್ ಶ್ರೀಧರ್, ಮಂಗ್ಳೂರ ವಿಜಯ ಸೇರಿದಂತೆ ಹಲವರು ವಿಚಾರ ಮಂಡಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಕೆನರಾ ಬ್ಯಾಂಕ್‌ನ ಮಲ್ಲೇಶ್ವರ ಶಾಖೆಯಲ್ಲಿ ₹3.11 ಕೋಟಿ ವಂಚನೆ ಆರೋಪ

ಮ್ಯಾನೇಜರ್ ಸುಳಿವು: ಹೊರ ರಾಜ್ಯಕ್ಕೆ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್‌ನ ಮಲ್ಲೇಶ್ವರ ಶಾಖೆಗೆ ಸೇರಿದ ₹3.11 ಕೋಟಿಯನ್ನು ದೋಚಿಕೊಂಡು ಪರಾರಿಯಾಗಿರುವ ಹಿರಿಯ ವ್ಯವಸ್ಥಾಪಕ ಎನ್.ರಘು ಅವರ ಪತ್ತೆಗೆ ಪೊಲೀಸರು ವಿಶೇಷ ತಂಡ ರಚಿಸಿದ್ದಾರೆ.



ಎನ್.ರಘು

ಗ್ರಾಹಕರ ಹೆಸರಿನಲ್ಲಿ ಚಿನ್ನದ ಸಾಲ ತೆಗೆದುಕೊಂಡು ನಾಪತ್ತೆ ಆಗಿರುವ ಆರೋಪಿಗಾಗಿ ಹುಡುಕಾಟ ಮುಂದುವರಿಸಿದ್ದಾರೆ. ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಸಹಾಯಕ ಪ್ರಧಾನ ವ್ಯವಸ್ಥಾಪಕ ಕಬೀಂದ್ರ ಕುಮಾರ್ ಸಾಹು ಅವರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲಾಗಿತ್ತು.

ವಿವಿಧ ಜಿಲ್ಲೆಗಳಲ್ಲಿ ಪೊಲೀಸರು ಹುಡುಕಾಟ ನಡೆಸಿದ್ದು, ಆರೋಪಿ ಆಂಧ್ರ ಪ್ರದೇಶದಲ್ಲಿ ಅಡಗಿರುವ ಸುಳಿವು ಸಿಕ್ಕಿದೆ. ಉತ್ತರ ವಿಭಾಗದ ಜಂಟಿ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ವಿಶೇಷ ತಂಡ ಆಂಧ್ರಪ್ರದೇಶಕ್ಕೆ ತೆರಳಿ, ಆರೋಪಿಯ ಬಂಧನಕ್ಕೆ ಮುಂದಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ರಘು ಅವರು 40ಕ್ಕೂ ಹೆಚ್ಚು ಗ್ರಾಹಕರ ಹೆಸರಿನಲ್ಲಿ ಚಿನ್ನದ ಮೇಲೆ ಸಾಲ ಪಡೆದು, ಆ ಹಣವನ್ನು ತನ್ನ ಖಾತೆಗೆ ವರ್ಗಾವಣೆ ಮಾಡಿಕೊಂಡು ಬ್ಯಾಂಕ್–ಗ್ರಾಹಕರಿಗೆ ವಂಚಿಸಿದ್ದಾರೆ. ‘ಮನೆಯಲ್ಲಿ ಕಷ್ಟವಿದೆ. ನಿಮ್ಮ (ಗ್ರಾಹಕರು) ಹೆಸರಲ್ಲಿ ಸಾಲ ತೆಗೆದುಕೊಳ್ಳುತ್ತೇನೆ. ನನ್ನ ಬಳಿ ಚಿನ್ನವಿದ್ದು ಅದನ್ನು ಅಡಮಾನ ಇರಿಸಿ ಬ್ಯಾಂಕ್‌ನಲ್ಲಿಟ್ಟು ಸಾಲ ತೆಗೆದುಕೊಳ್ಳುತ್ತೇನೆ’ ಎಂಬುದಾಗಿ ಗ್ರಾಹಕರಿಗೆ ನಂಬಿಸುತ್ತಿದ್ದರು. ಕೆಲವು ಗ್ರಾಹಕರಿಂದ ಸಹಿ ಪಡೆದು ಸಾಲ ಪಡೆದುಕೊಂಡಿದ್ದಾರೆ’ ಎಂದರು.

‘ಮ್ಯಾನೇಜರ್ ಮಾತು ನಂಬಿದ್ದ ಗ್ರಾಹಕರು, ಬ್ಯಾಂಕ್ ಖಾತೆಯ ವಿವರ, ಆಧಾರ್ ಕಾರ್ಡ್, ಒಟಿಪಿ ನೀಡಿದ್ದರು. ಜತೆಗೆ ರಘು ಅವರು ಚೆಕ್ ಸಹ ಪಡೆದುಕೊಂಡು, ಗ್ರಾಹಕರ ಹೆಸರಿನಲ್ಲಿ ಸಾಲ ಮಂಜೂರಾತಿ ಮಾಡಿಕೊಳ್ಳುತ್ತಿದ್ದರು’ ಎಂದು ತಿಳಿಸಿದರು.

ಬ್ಯಾಂಕಿನ ಮಾರ್ಗಸೂಚಿ ಪ್ರಕಾರ ಚಿನ್ನದ ಸಾಲಗಳ ತ್ರೈಮಾಸಿಕ ಮರುಮೌಲ್ಯಮಾಪನ ಹಾಗೂ ಲೆಕ್ಕ ಪರಿಶೋಧನೆ ನಡೆಸಲಾಗಿತ್ತು. ಆಗ, 41 ಸಾಲಗಳು ಕಾಲ್ಪನಿಕ ಸ್ವರೂಪದವು ಎಂಬುದು ಪತ್ತೆಯಾಗಿತ್ತು. ಅಲ್ಲದೇ, ಚಿನ್ನದ ಆಭರಣಗಳು ಇರಲಿಲ್ಲ ಎಂಬುದು ಲೆಕ್ಕ ಪರಿಶೋಧನೆ ಅಧಿಕಾರಿಗಳ ಗಮನಕ್ಕೆ ಬಂದಿತ್ತು.

ಮುಖ್ಯಾಂಶಗಳು

- ಚಿನ್ನದ ಸಾಲ ತೆಗೆದುಕೊಂಡು ನಾಪತ್ತೆ
- ಆರೋಪಿ ಆಂಧ್ರದಲ್ಲಿ ಅಡಗಿರುವ ಸುಳಿವು

ಸಹಾಯಕ ಜೈಲರ್ ಮೇಲೆ ಹಲ್ಲೆ

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಸಹಾಯಕ ಜೈಲರ್ ಎಸ್.ಮೂರ್ತಿ ಅವರ ಮೇಲೆ ಸಜಾಕೈದಿಗಳು ಹಲ್ಲೆ ನಡೆಸಿರುವ ಘಟನೆ ನಡೆದಿದೆ.

ಜೈಲಿನ ಸೂಪರಿಂಟೆಂಡೆಂಟ್ (ಪ್ರಭಾರ) ಕರ್ಣ ಬಿ. ಕ್ಷತ್ರಿ ಅವರ ದೂರಿನ ಮೇರೆಗೆ ಆನಂದ್ (33) ಮತ್ತು ಅಬ್ದುಲ್ ಘನಿ (41) ಎಂಬ ಸಜಾಕೈದಿಗಳ ವಿರುದ್ಧ ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಜನವರಿ 7ರಂದು ಕಾರಾಗೃಹದ ಟವರ್-2 ಗೇಟ್ ಬಳಿ ಆನಂದ್ ಮತ್ತು ಅಬ್ದುಲ್ ಘನಿ ಅನವಶ್ಯಕವಾಗಿ ಗಲಾಟೆ ಮಾಡಿದ್ದಾರೆ. ಅಲ್ಲದೆ, ಸಜಾ ಕೈದಿಗಳ ಭೇಟಿಗೆ ಮೀಸಲಾದ ಕಚೇರಿಯ ಒಳ ನುಗ್ಗಲು ಯತ್ನಿಸಿದ್ದಾರೆ. ಈ ವೇಳೆ ಅಲ್ಲಿ ಕರ್ತವ್ಯದಲ್ಲಿದ್ದ ಸಹಾಯಕ ಜೈಲರ್ ಎಸ್. ಮೂರ್ತಿ ಅವರು ಇಬ್ಬರನ್ನು ತಡೆದಿದ್ದಾರೆ. ಸಜಾ ಕೈದಿಗಳ ಭೇಟಿಗೆ ಮೀಸಲಾದ ಕಚೇರಿಗೆ ಹೋಗಲು ಜೈಲರ್ ಅವರಿಂದ ಅನುಮತಿ ಪಡೆದು ಬರುವಂತೆ ಸೂಚಿಸಿದ್ದಾರೆ. ಆಗ ಆನಂದ್ ಮತ್ತು ಅಬ್ದುಲ್ ಘನಿ, ಮೂರ್ತಿ ಅವರಿಗೆ ಅವಾಚ್ಯವಾಗಿ ನಿಂದಿಸಿ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ್ದಾರೆ’ ಎಂದು ಕರ್ಣ ದೂರಿನಲ್ಲಿ ಹೇಳಿದ್ದಾರೆ.

‘ಕೈದಿಗಳಿಬ್ಬರು ಮೂರ್ತಿ ಅವರಿಗೆ ಒದ್ದು ಹಲ್ಲೆ ನಡೆಸಿದ್ದಾರೆ. ಈ ರೀತಿಯ ಘಟನೆಗಳು ಜೈಲಿನಲ್ಲಿ ನಿತ್ಯವೂ ನಡೆಯುತ್ತಿದ್ದು, ಸಿಬ್ಬಂದಿಗೆ ಸೂಕ್ತ ರಕ್ಷಣೆ ಇಲ್ಲದೆ ಭಯದಲ್ಲಿ ಕರ್ತವ್ಯ ನಿರ್ವಹಿಸುವ ವಾತಾವರಣ ನಿರ್ಮಾಣವಾಗಿದೆ. ಜೈಲಿನ ನಿಯಮಗಳನ್ನು ಉಲ್ಲಂಘಿಸಿ ಸಿಬ್ಬಂದಿ ಮೇಲೆ ಹಲ್ಲೆ ಮಾಡಿರುವ ಕೈದಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು’ ಎಂದು ದೂರುದಾರರು ಮನವಿ ಮಾಡಿದ್ದಾರೆ.

ಕೈದಿಗಳಿಗೆ ಐಷಾರಾಮಿ ಸೌಲಭ್ಯಗಳು ಲಭ್ಯವಾಗುತ್ತಿರುವ ಕುರಿತ ವಿಡಿಯೊ ತುಣುಕುಗಳು ಜಾಲತಾಣದಲ್ಲಿ ಹರಿದಾಡಿದ ಬೆನ್ನಲ್ಲೇ ಇಬ್ಬರು ಜೈಲು ಅಧಿಕಾರಿಗಳನ್ನು ಈಚೆಗೆ ಅಮಾನತು ಮಾಡಲಾಗಿತ್ತು. ಅಲ್ಲದೆ ನೂತನ ಡಿಜಿಪಿಯಾಗಿ ಅಲೋಕ್ ಕುಮಾರ್ ಅವರನ್ನು ನೇಮಿಸಲಾಗಿತ್ತು.

ಜೆಡಿಎಸ್ ಮುಖಂಡರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಕ್ರಾಂತಿ ನಂತರ ಪಕ್ಷ ಸಂಘಟನೆಯ ಚಟುವಟಿಕೆಗಳನ್ನು ಜೆಡಿಎಸ್ ಚುರುಕುಗೊಳಿಸಿದ್ದು, ಪಕ್ಷದ ವರಿಷ್ಠ ಎಚ್‌.ಡಿ.ದೇವೇಗೌಡ ಅವರು ಮೈಸೂರು ಭಾಗದ ಶಾಸಕರ ಮತ್ತು ಮುಖಂಡರ ಜತೆಗೆ ಸಭೆ ನಡೆಸಿದ್ದಾರೆ.

ದೇವೇಗೌಡ ನಿವಾಸದಲ್ಲಿ ನಡೆದ ಸಭೆಯಲ್ಲಿ ಪಕ್ಷದ ಮುಖಂಡ ಸಾ.ರಾ. ಮಹೇಶ್, ವಿಧಾನ ಪರಿಷತ್ ಸದಸ್ಯ ಮಂಜೇಗೌಡ ಸೇರಿ ಹಲವರು ಸಭೆಯಲ್ಲಿ ಭಾಗಿಯಾಗಿದ್ದರು. ಮೈಸೂರು ಜಿಲ್ಲೆಯಲ್ಲಿ ಪಕ್ಷವನ್ನು ಬಲಪಡಿಸುವ ಬಗ್ಗೆ ಸಭೆಯಲ್ಲಿ ಚರ್ಚೆಯಾಯಿತು. ದೇವೇಗೌಡ ಅವರು ಈ ಬಗ್ಗೆ ಹಲವು ಸಲಹೆಗಳನ್ನು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹಾಸನದಲ್ಲಿ ಪಕ್ಷದ ಸಮಾವೇಶ ನಡೆಸುವ ಬಗ್ಗೆ ಶಾಸಕರು, ಮುಖಂಡರು ಮತ್ತು ಕಾರ್ಯಕರ್ತರಿಂದ ಅಭಿಪ್ರಾಯ ಪಡೆಯಲಾಗಿದೆ. ಸಮಾವೇಶವನ್ನು ಯಶಸ್ವಿಗೊಳಿಸುವ ಮತ್ತು ಪಕ್ಷ ಸಂಘಟನೆಯ ಸಾಧ್ಯತೆಗಳನ್ನು ಚರ್ಚಿಸಲಾಗಿದೆ. ಇನ್ನೂ ಹಲವು ಸುತ್ತಿನ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

‘ಎಲ್ಲಿ ನಿಲ್ಲಿಸಿದರೂ ಸ್ಪರ್ಧಿಸುವೆ’: ಎಚ್‌.ಡಿ. ದೇವೇಗೌಡ ಅವರ ನಿವಾಸದಲ್ಲಿ ನಡೆದ ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಸಾ.ರಾ. ಮಹೇಶ್ ಅವರು, ‘ಈ ಹಿಂದೆ ಜಿ.ಟಿ. ದೇವೇಗೌಡ ಅವರು ಪಕ್ಷದಿಂದ ದೂರ ಉಳಿದಾಗ, ಎಚ್‌.ಡಿ.ಕುಮಾರಸ್ವಾಮಿ ಅವರು ತಮ್ಮ ಮನೆಯ ಬಾಗಿಲು ಮುಚ್ಚಿದೆ ಎಂದಿದ್ದರು. ನಾವೆಲ್ಲರೂ ಹೋಗಿ ಜಿ.ಟಿ.ದೇವೇಗೌಡ ಅವರನ್ನು ವಾಪಸ್ ಕರೆತಂದಿದ್ದೆವು. ಈಗ ಅವರನ್ನು ವಾಪಸ್ ಕರೆತರುವ ಮನಸ್ಥಿತಿ ಯಲ್ಲಿ ಯಾರೂ ಇಲ್ಲ’ ಎಂದರು.

ಜಿ.ಟಿ.ದೇವೇಗೌಡ ಶಾಸಕರಾಗಿರುವ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನೀವು ಸ್ಪರ್ಧಿಸುತ್ತೀರಾ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ‘ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತ. ವರಿಷ್ಠರು ಯಾವ ಕ್ಷೇತ್ರ ಸೂಚಿಸಿದರೂ, ಅಲ್ಲಿಂದ ಸ್ಪರ್ಧಿಸುತ್ತೇನೆ’ ಎಂದು ಹೇಳಿದರು.

ಸಾರಿಗೆ ನೌಕರರ ಪ್ರತಿಭಟನೆಗೆ ಬೆಂಬಲ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿ ನೌಕರರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜ.29ರಂದು ನಡೆಸಲಿರುವ ಬೆಂಗಳೂರು ಚಲೋ ಪ್ರತಿಭಟನೆಗೆ ಬೆಂಬಲ ನೀಡಲಾಗುವುದು ಎಂದು ಬಿಎಂಟಿಸಿ ಮಾಜಿ ಉಪಾಧ್ಯಕ್ಷ ಎಂ.ಆರ್. ವೆಂಕಟೇಶ್ ತಿಳಿಸಿದ್ದಾರೆ.

38 ತಿಂಗಳ ಹಿಂಬಾಕಿ ಬಿಡುಗಡೆ ಮಾಡಬೇಕು. ಶಕ್ತಿ ಯೋಜನೆಯ ಬಾಕಿ ಹಣವನ್ನು ನಿಗಮಕ್ಕೆ ಪಾವತಿಸಬೇಕು. ನೌಕರರು ಮತ್ತು ನಿಗಮದ ಆರ್ಥಿಕ ಹಿತಾಸಕ್ತಿ ಕಾಪಾಡಲು ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

‘ರಸ್ತೆ ಗುಂಡಿ ಮುಚ್ಚಿ’



ಸುಂಕದಕಟ್ಟೆಯ ಪೈಪ್‌ಲೈನ್ ರಸ್ತೆಯಲ್ಲಿ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಸಂಚಕಾರ ಬಂದಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿ ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಇದರ ಜೊತೆಗೆ ಅಪಘಾತಗಳು ಸಂಭವಿಸುತ್ತಿವೆ. ದ್ವಿಚಕ್ರ ವಾಹನ ಸವಾರರು ಈ ಗುಂಡಿಯಲ್ಲಿ ಬಿದ್ದು ಕೈ ಕಾಲು ಮುರಿದುಕೊಂಡಿರುವ ಘಟನೆಗಳೂ ನಡೆದಿವೆ. ರಸ್ತೆ ಗುಂಡಿ ಮುಚ್ಚುವಂತೆ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಸ್ಪಂದಿಸುತ್ತಿಲ್ಲ.

ಶಿವಶಂಕರ್, ಸುಂಕದಕಟ್ಟೆ

‘ರಸ್ತೆಯಲ್ಲಿ ಹಾಕಿರುವ ಹೂಳು’




ಯಶವಂತಪುರದ ರಾಘವೇಂದ್ರ ಬಡಾವಣೆಗೆ ಸಂಪರ್ಕ ಕಲ್ಪಿಸುವ ಪೈಪ್‌ಲೈನ್ ರಸ್ತೆಯ ಪಾದಚಾರಿ ಮಾರ್ಗವನ್ನು ಒಂದು ವರ್ಷದ ಹಿಂದೆಯೇ ಅಗೆದು ಹಾಕಲಾಗಿದೆ. ಮೋರಿಯಲ್ಲಿರುವ ಹೂಳನ್ನು ತೆಗೆದು ರಸ್ತೆಗೆ ಹಾಕಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಇದರ ಜೊತೆಗೆ ಆಮೆಗತಿಯಲ್ಲಿ ನಡೆಯುತ್ತಿರುವ ಕಾಮಗಾರಿಯಿಂದ ವಾಹನ ಸಂಚಾರಕ್ಕೆ ಅಡಚಣೆ ಆಗಿದೆ. ಇಡೀ ಪ್ರದೇಶ ದೂಳುಮಯವಾಗಿದ್ದು, ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿ ಈ ಕಾಮಗಾರಿಗೆ ವೇಗ ನೀಡಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಮಹೇಶ್ ಆರ್., ರಾಘವೇಂದ್ರ ಬಡಾವಣೆ

‘ಪಾದಚಾರಿ ಮಾರ್ಗದ ಒತ್ತುವರಿ ತೆರವುಗೊಳಿಸಿ’

ಯಶವಂತಪುರ ಬಿಎಂಟಿಸಿ ಬಸ್ ನಿಲ್ದಾಣದಿಂದ ನವರಂಗ, ವಿಜಯನಗರ ಇನ್ನಿತರ ಕಡೆಗೆ ಸಂಚರಿಸುವ ವಾಹನಗಳು ಒಂದೇ ಸಮನೆ ಬರುತ್ತಿರುತ್ತವೆ. ನಮ್ಮ ಮೆಟ್ರೊ ಸ್ಯಾಂಡಲ್‌ಸೋಪ್ ನಿಲ್ದಾಣದ ಬಳಿ ಈ ಎಲ್ಲ ವಾಹನಗಳು ಡಾ. ರಾಜ್‌ಕುಮಾರ್ ರಸ್ತೆಗೆ ತೆರಳುತ್ತವೆ. ಇಲ್ಲಿನ ಪಾರಿಜಾತ ಗೇಟ್‌ವೇ ಬಳಿ ಇರುವ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಲಾಗಿದೆ. ಇದರಿಂದ ಸಾರ್ವಜನಿಕರು ಮುಖ್ಯರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಪಾದಚಾರಿ ಮಾರ್ಗವನ್ನು ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿರುವುದರಿಂದ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಒತ್ತುವರಿ ತೆರವು ಮಾಡುತ್ತಿಲ್ಲ. ಕೂಡಲೇ ಪಾದಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ಪ್ರಸಾದ್, ರಾಜಾಜಿನಗರ





‘ಬ್ಯಾನರ್ ಹಾವಳಿ ನಿಯಂತ್ರಿಸಿ’

ಬೆಂಗಳೂರು ನಗರದ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ಬ್ಯಾನರ್ ಹಾವಳಿ ಹೆಚ್ಚಾಗಿದೆ. ಬ್ಯಾನರ್ ತೆರವುಗೊಳಿಸುವಂತೆ ಹೈಕೋರ್ಟ್ ಆದೇಶ ನೀಡಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ನಾಯಕರ ಜನ್ಮದಿನ, ನಾಡ ಹಬ್ಬ, ರಾಜ್ಯೋತ್ಸವ ಸೇರಿದಂತೆ ಇತರೆ ಕಾರ್ಯಕ್ರಮಗಳ ಹೆಸರಿನಲ್ಲಿ ಬೀದಿ ದೀಪದ ಕಂಬಗಳಿಗೆ, ಜಂಕ್ಷನ್‌ಗಳಲ್ಲಿ ಹಾಗೂ ಸ್ಕೈವಾಕ್‌ಗಳ ಮೇಲೆ ಭಾರಿ ಗಾತ್ರದ ಕಟೌಟ್ ಹಾಗೂ ಬ್ಯಾನರ್ ಅಳವಡಿಸಲಾಗುತ್ತಿದೆ. ರಸ್ತೆಯ ಪ್ರತಿಯೊಂದು ಸಿಗ್ನಲ್‌ನಲ್ಲಿ ಬ್ಯಾನರ್‌ಗಳು ರಾರಾಜಿಸುತ್ತಿವೆ. ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಬ್ಯಾನರ್ ಹಾಕುವವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ನಗರದ ಸೌಂದರ್ಯ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್ ಎಸ್.

‘ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ’



ನಾಗರಬಾವಿ ಎರಡನೇ ಹಂತದ 80 ಅಡಿ ರಸ್ತೆಯ ದೀಪಾ ಕಾಂಪ್ಲೆಕ್ಸ್ ಹತ್ತಿರ ರಾಯಲ್ ಎನ್‌ಫೀಲ್ಡ್, ಟಿವಿಎಸ್, ಏಥರ್ ಕಂಪನಿಯ ಶೋರೂಂಗಳಿವೆ. ಇದರ ಮುಂಭಾಗದಲ್ಲಿರುವ ಪಾದಚಾರಿ ಮಾರ್ಗದಲ್ಲಿ ಶೋರೂಂ ಸಿಬ್ಬಂದಿ ತಮ್ಮ ಕಂಪನಿಯ ದ್ವಿಚಕ್ರ ವಾಹನಗಳನ್ನು ನಿಲುಗಡೆ ಮಾಡುತ್ತಿದ್ದಾರೆ. ಇದರಿಂದ ವೃದ್ಧರು, ಮಹಿಳೆಯರು ಹಾಗೂ ಮಕ್ಕಳು ಮುಖ್ಯರಸ್ತೆಯಲ್ಲಿ ಓಡಾಡುವ ಪರಿಸ್ಥಿತಿ ಎದುರಾಗಿದೆ. ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿ ಹಾಗೂ ಸಂಚಾರ ವಿಭಾಗದ ಪೊಲೀಸರು ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ಜಿ.ಆರ್.ಕೆ. ನಾಯಕ, ನಾಗರಬಾವಿ

21ರಂದು ರಜತ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯವು 25 ವರ್ಷಗಳನ್ನು ಪೂರೈಸಿರುವ ಪ್ರಯುಕ್ತ ಜ.21ರಂದು ರಜತ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಿಎಂಆರ್ ಸಭಾಂಗಣದಲ್ಲಿ ಅಂದು ಮಧ್ಯಾಹ್ನ 2ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಭಾಗವಹಿಸಲಿದ್ದಾರೆ.

ನಾವೀನ್ಯ, ಉದ್ಯಮಶೀಲತೆ ಮತ್ತು ಸಮಗ್ರ ಶೈಕ್ಷಣಿಕ ಉತ್ಕೃಷ್ಟತೆಗಾಗಿ ಸಿಎಂಆರ್ ಐಟಿಯು ನೂತನವಾಗಿ ನಿರ್ಮಾಣ ಮಾಡಿರುವ ‘ಇನ್‌ಕ್ಯುಬೇಶನ್ ಸೆಂಟರ್’ ಮತ್ತು ಆಡಿಟೋರಿಯಂ ಅನ್ನು ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ದ್ವೇಷ ವಿಚಾರ ಪೋಸ್ಟ್: ಕ್ರಮ

ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಗೃಹ ಸಚಿವರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ದ್ವೇಷ ಮೂಡಿಸುವಂತಹ ವಿಚಾರಗಳನ್ನು ಪೋಸ್ಟ್ ಮಾಡಲಾಗುತ್ತಿದೆ. ಇದರಿಂದ ಸಮಾಜದಲ್ಲಿ ಅಶಾಂತಿ ಉಂಟಾಗಿ ಗಲಭೆಗಳಾಗುತ್ತಿದ್ದು, ತಪ್ಪಿತಸ್ಥರ ವಿರುದ್ಧ ಕೂಡಲೇ ಕಾನೂನು ಕ್ರಮ ಜರುಗಿಸಿ, ಆರಂಭಿಕ ಹಂತದಲ್ಲೇ ಮಟ್ಟ ಹಾಕಬೇಕು ಎಂದು ಗೃಹ ಸಚಿವ ಜಿ.ಪರಮೇಶ್ವರ ಸೂಚನೆ ನೀಡಿದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದ 2ನೇ ದಿನವಾದ ಭಾನುವಾರ ಅಧಿಕಾರಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರ ಮೇಲಿನ ದೌರ್ಜನ್ಯ ತಡೆಗಟ್ಟಿ ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶದಿಂದ ಸ್ಥಾಪಿಸಿರುವ ಡಿಸಿಆರ್‌ಇ ಪೊಲೀಸ್ ಠಾಣೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಅಂತರ್ಜಾತಿ ವಿವಾಹವಾದ ಯುವತಿಯನ್ನು ಆಕೆಯ ತಂದೆಯೇ ಕೊಲೆ ಮಾಡುತ್ತಾನೆ ಎಂದರೆ ಹೇಗೆ ಸಹಿಸುವುದು’ ಎಂದು ಪ್ರಶ್ನಿಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್, ಡಿಜಿಪಿ ಪ್ರಣವ್ ಮೊಹಾಂತಿ, ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿತೇಂದ್ರ, ಗುಪ್ತವಾರ್ತೆ ಎಡಿಜಿಪಿ ರವಿ, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಹಾಜರಿದ್ದರು.

‘ಯಾರು ಎಲ್ಲಿಂದ ಬರ್ತಾರೆ ತಿಳಿದುಕೊಳ್ಳಲು ಆಗುವುದಿಲ್ಲವೇ?’



ಜಿ.ಪರಮೇಶ್ವರ

ರಾಜ್ಯದಲ್ಲಿ ಲಕ್ಷಾಂತರ ಅಕ್ರಮ ಬಾಂಗ್ಲಾ ವಲಸಿಗರು ನೆಲೆಸಿದ್ದಾರೆ ಎಂದು ವರದಿಯಾಗುತ್ತಿದೆ. ಸ್ಥಳೀಯ ಪೊಲೀಸರು ಏನು ಮಾಡುತ್ತಿದ್ದಾರೆ? ಪ್ರತಿಯೊಂದು ಪ್ರದೇಶದ ಮಾಹಿತಿ ಪೊಲೀಸರಿಗೆ ಗೊತ್ತಿರಬೇಕು ಎಂಬ ಉದ್ದೇಶದಿಂದ ‘ಮನೆ ಮನೆಗೆ ಪೊಲೀಸ್’ ಕಾರ್ಯಕ್ರಮ ಜಾರಿಗೆ ತರಲಾಗಿದೆ. ಯಾರು, ಎಲ್ಲಿಂದ ಬಂದಿದ್ದಾರೆ ಎಂದು ಪೊಲೀಸ್ ಠಾಣೆ ಹಂತದಲ್ಲಿ ತಿಳಿದುಕೊಳ್ಳಲು ಆಗುವುದಿಲ್ಲವೆ? ಎಂದು ಜಿ.ಪರಮೇಶ್ವರ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

‘ಸಮಾಜಘಾತುಕರೊಂದಿಗೆ ಕೈಜೋಡಿಸದಂತೆ ಪ್ರತಿ ಸಭೆಯಲ್ಲಿಯೂ ಎಚ್ಚರಿಸುತ್ತಿದ್ದರೂ ಅದು ಮರುಕಳಿಸುತ್ತಿದೆ. ಠಾಣೆಯಲ್ಲಿ ಕುಳಿತು ಅಕ್ರಮ ವ್ಯವಹಾರ ನಡೆಸುವುದನ್ನು ಸಹಿಸುವುದಿಲ್ಲ. ಅಂಥವರ ಅನಿವಾರ್ಯ ಇಲಾಖೆಗೆ ಇಲ್ಲ. ರೌಡಿಗಳ ಹುಟ್ಟುಹಬ್ಬದ ಪಾರ್ಟಿಯಲ್ಲಿ ಪೊಲೀಸ್ ಅಧಿಕಾರಿಗಳು ಪಾಲ್ಗೊಳ್ಳುತ್ತಿದ್ದಾರೆ. ಇದೆಲ್ಲವನ್ನು ನೋಡಿಕೊಂಡು ಸುಮ್ಮನಿರಬೇಕೆ? ಅಧಿಕಾರಿಗಳು ಎಚ್ಚೆತ್ತುಕೊಳ್ಳದಿದ್ದರೆ ಮತ್ತಷ್ಟು ಕಠಿಣ ಪರಿಣಾಮ ಎದುರಿಸಬೇಕಾಗುತ್ತದೆ’ ಎಂದು ಹೇಳಿದರು.

ಅಡಿಗಾಸ್ ಯಾತ್ರಾದ 32ನೇ ವಾರ್ಷಿಕೋತ್ಸವ: ನಟಿ ಅದಿತಿ ಪ್ರಭುದೇವ ಕಿವಿಮಾತು

‘ಪ್ರವಾಸಿ ಸ್ನೇಹಿ ನಡವಳಿಕೆ ಬೆಳೆಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತವು ಪುರಾತನ ಹಾಗೂ ಮಹತ್ವದ ಪ್ರವಾಸಿ ತಾಣಗಳನ್ನು ಹೊಂದಿರುವ ಪ್ರಮುಖ ದೇಶವಾಗಿದ್ದು, ಪ್ರವಾಸೋದ್ಯಮವು ಇಲ್ಲಿ ವಿಪುಲವಾಗಿ ಬೆಳೆದಿದೆ. ಭಾರತಕ್ಕೆ ಬರುವ ಪ್ರವಾಸಿಗರಿಗೆ ಆತಿಥ್ಯ ನೀಡುವಲ್ಲಿ ನಾವು ಇನ್ನಷ್ಟು ಪ್ರವಾಸಿ ಸ್ನೇಹಿ ನಡವಳಿಕೆಗಳನ್ನು ಬೆಳೆಸಿಕೊಳ್ಳಬೇಕು’ ಎಂದು ನಟಿ ಅದಿತಿ ಪ್ರಭುದೇವ ಸಲಹೆ ನೀಡಿದರು.

ಭಾನುವಾರ ನಗರದ ಎಫ್‌ಕೆಸಿಸಿಐ ಸಭಾಂಗಣದಲ್ಲಿ ಆಯೋಜಿಸಿದ್ದ ಅಡಿಗಾಸ್ ಯಾತ್ರಾದ 32ನೇ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

‘ಪ್ರವಾಸೋದ್ಯಮ ಕ್ಷೇತ್ರದಲ್ಲಿ ಜಪಾನ್ ಅಳವಡಿಸಿಕೊಂಡಿರುವ ಮಾದರಿಗಳು ಚೆನ್ನಾಗಿವೆ. ಆ ದೇಶಕ್ಕೆ ಹೋಗುವ ಪ್ರವಾಸಿಗರನ್ನು ಆತ್ಮೀಯವಾಗಿ ಕಾಣುವ ಜತೆಗೆ ಪ್ರವಾಸಿ ತಾಣಗಳ ಕುರಿತ ಎಲ್ಲಾ ರೀತಿಯ ಮಾಹಿತಿ ನೀಡಲಾಗುತ್ತದೆ. ಇಂತಹ ವ್ಯವಸ್ಥೆ ಹಲವು ದೇಶಗಳಲ್ಲಿ ಇರುವುದನ್ನು ಪ್ರವಾಸಕ್ಕೆ ಹೋದಾಗ ನಾನೇ ನೋಡಿದ್ದೇನೆ’ ಎಂದರು.



ಅಡಿಗಾಸ್ ಯಾತ್ರಾದ 32ನೇ ವಾರ್ಷಿಕೋತ್ಸವದಲ್ಲಿ ಸಂಸ್ಥೆಯ ನೂತನ ಲಾಂಛನ ಅನಾವರಣಗೊಳಿಸಲಾಯಿತು ಪ್ರಜಾವಾಣಿ ಚಿತ್ರ

‘ಭಾರತದಲ್ಲಿ ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯ ಒದಗಿಸುವ ಕೆಲಸ ಆಗಬೇಕು. ಹಲವು ಕಡೆ ಸ್ವಚ್ಛತೆಯ ಕೊರತೆ ಎದ್ದು ಕಾಣುತ್ತದೆ. ಕರ್ನಾಟಕದಲ್ಲಿ ವಿಶ್ವದ ಗಮನ ಸೆಳೆಯಬಲ್ಲ ಪ್ರವಾಸಿ ತಾಣಗಳಿದ್ದರೂ ಕೆಲವು ಕಡೆ ಸ್ವಚ್ಛತೆ ಹಾಗೂ ಮೂಲ ಸೌಕರ್ಯಗಳಲ್ಲಿ ಇನ್ನೂ ಹಿಂದುಳಿದಿವೆ’ ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ‘ಪ್ರವಾಸೋದ್ಯಮ ವಲಯ ಈಗ ವಿಪುಲವಾಗಿ ಬೆಳೆದಿದೆ. ಯಾವುದೇ ದೇಶಕ್ಕೆ ಹೋಗಿ ಬರಲು ವ್ಯವಸ್ಥೆಗಳಾಗಿವೆ. ಅಡಿಗಾಸ್ ಯಾತ್ರಾ ಮೂಲಕವೇ ವರ್ಷಕ್ಕೆ ಸಾವಿರಾರು ಮಂದಿ ಪ್ರವಾಸ ಕೈಗೊಳ್ಳುತ್ತಾರೆ. ಉತ್ತರ ಕರ್ನಾಟಕದ ಜನರಿಗೂ ಪ್ರವಾಸದ ಅನುಕೂಲಗಳು ಹೆಚ್ಚು ಸಿಗುವಂತಾಗಬೇಕು’ ಎಂದರು.

ಹರಿಹರದ ಹರ ಪೀಠದ ವಚನಾನಂದ ಸ್ವಾಮೀಜಿ ಮಾತನಾಡಿ, ‘ಪ್ರವಾಸವು ಪ್ರತಿಯೊಬ್ಬರನ್ನೂ ಪ್ರಫುಲ್ಲವಾಗಿ ಇಡಬಲ್ಲದು. ನಾನೇ ಈವರೆಗೂ 86 ದೇಶಗಳಿಗೆ ಪ್ರವಾಸ ಕೈಗೊಂಡಿದ್ದೇನೆ. 32 ವರ್ಷದಿಂದ ಪ್ರವಾಸೋದ್ಯಮ ಕ್ಷೇತ್ರದ ಭಾಗವಾಗಿ ಅಡಿಗಾಸ್ ಕೆಲಸ ಮಾಡುತ್ತಿರುವುದು ಶ್ಲಾಘನೀಯ’ ಎಂದರು.

ಅಡಿಗಾಸ್ ಯಾತ್ರಾ ನಿರ್ದೇಶಕಿ ಆಶಾ ಎನ್ ಅಡಿಗ, ಸಂಸ್ಥಾಪಕ ಕೆ. ನಾಗರಾಜ್ ಅಡಿಗ, ಪತ್ರಕರ್ತ ವಿಶ್ವೇಶ್ವರ ಭಟ್, ವಚನಾನಂದ ಸ್ವಾಮೀಜಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ನಟಿ ಅದಿತಿ ಪ್ರಭುದೇವ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಸಂಸ್ಥೆ ಅಧ್ಯಕ್ಷ ಕೆ. ರಾಧಾಕೃಷ್ಣ ಹೊಳ್ಳ ಉಪಸ್ಥಿತರಿದ್ದರು.

ಅಡಿಗಾಸ್ ಯಾತ್ರಾ ನ್ಯೂಸ್ ವೆಬ್‌ಸೈಟ್ ಅನಾವರಣಗೊಳಿಸಲಾಯಿತು.

ಲಾಲ್‌ಬಾಗ್ ನವೀಕರಣ: ಪ್ರಸ್ತಾವ ಸಲ್ಲಿಕೆ

₹10 ಕೋಟಿ ಅನುದಾನ ಕೋರಿ ಜಿಬಿಎಗೆ ಪ್ರಸ್ತಾವ

• ಖಲೀಲ ಅಹ್ಮದ ಶೇಖ

ಮುಖ್ಯಾಂಶಗಳು
- ದಶಕಗಳಿಂದ ದುರಸ್ತಿ ಕಾಣದ ನಡಿಗೆಪಥಗಳು
- ಸಮಗ್ರ ಅಭಿವೃದ್ಧಿಗೆ ಪ್ರಸ್ತಾವ ಸಲ್ಲಿಕೆ

ಬೆಂಗಳೂರು: 'ಸಸ್ಯಕಾಶಿ' ಲಾಲ್‌ಬಾಗ್ ಉದ್ಯಾನದ ನಡಿಗೆ ಪಥಗಳು, ಪಾದಚಾರಿ ಮಾರ್ಗದ ದುರಸ್ತಿ, ಮುಖ್ಯ-ರಸ್ತೆಗಳ ಡಾಂಬರೀಕರಣ, ಬ್ಯಾಂಡ್ ಸ್ಟ್ಯಾಂಡ್ ಹಾಗೂ ಗುಲಾಬಿ ಉದ್ಯಾನದ ನವೀಕರಣಕ್ಕೆ ತೋಟಗಾರಿಕೆ ಇಲಾಖೆ ಮುಂದಾಗಿದೆ. ಇದಕ್ಕಾಗಿ ₹10 ಕೋಟಿ ಅನುದಾನ ನೀಡುವಂತೆ ಕೋರಿ ಜಿಬಿಎಗೆ ಇಲಾಖೆ ಪ್ರಸ್ತಾವ ಸಲ್ಲಿಸಿದೆ.

ದಶಕಗಳಿಂದ ದುರಸ್ತಿ ಕಾಣದ ಈ ನಡಿಗೆ ಪಥಗಳು ಕಿತ್ತು ಹೋಗಿ, ಸಾಲು ಸಾಲು ಗುಂಡಿಗಳು ಬಿದ್ದಿವೆ. ಪಾದಚಾರಿ ಮಾರ್ಗಗಳು ಸಮತಟ್ಟಾಗಿಲ್ಲದ ಕಾರಣ ವಾಯುವಿಹಾರಿಗಳು, ಪ್ರವಾಸಿಗರು ನಡೆಯುವಾಗ ಎಲ್ಲಿ ಬೀಳುತ್ತೇವೋ ಎಂಬ ಆತಂಕದಲ್ಲೇ ಹೆಜ್ಜೆ ಹಾಕುತ್ತಾರೆ. ಮಳೆಗಾಲದಲ್ಲಂತೂ ಪಾದಚಾರಿ ಮಾರ್ಗಗಳೆಲ್ಲ ಜಾರುಬಂಡಿಗಳಾಗುತ್ತವೆ.

ಹದಗೆಟ್ಟಿರುವ ಪಾದಚಾರಿ ಮಾರ್ಗ-ಗಳಲ್ಲಿಯೇ ವಾಯುವಿಹಾರಿಗಳು ಸಂಚರಿಸಬೇಕಾದ ಅನಿವಾರ್ಯ ಎದುರಾಗಿದೆ. ಪ್ರತ್ಯೇಕ ಪಥ, ಕೆರೆಯ ಉದ್ದಕ್ಕೂ ಜಾಗಿಂಗ್ ಟ್ರ್ಯಾಕ್ ನಿರ್ಮಿಸಬೇಕು ಎಂದು ವಾಯುವಿಹಾರಿಗಳು ಇಟ್ಟಿದ್ದ ಬೇಡಿಕೆಗೆ ತೋಟಗಾರಿಕೆ ಇಲಾಖೆ ಸ್ಪಂದಿಸಿದೆ. 240 ಎಕರೆ ವ್ಯಾಪ್ತಿಯ ಲಾಲ್‌ಬಾಗ್‌ನಲ್ಲಿನ 8 ಕಿ.ಮೀ ನಡಿಗೆ ಪಥ, ಪಾದಚಾರಿ ಮಾರ್ಗಗಳ ಅಭಿವೃದ್ಧಿ, 6.5 ಕಿ.ಮೀ ರಸ್ತೆಗೆ ಡಾಂಬರೀಕಣ ಮಾಡಲು ಯೋಜನೆ ರೂಪಿಸಿದೆ.

'ಬೆಂಗಳೂರು ನಡಿಗೆ ಕಾರ್ಯ-ಕ್ರಮದಡಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲಾಲ್‌ಬಾಗ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ 'ಸಾರ್ವಜನಿಕರು ಬಯಸಿದಂತೆ ಲಾಲ್‌ಬಾಗ್ ಅಭಿವೃದ್ಧಿಗೆ ಜಿಬಿಎ ವತಿಯಿಂದ ₹10 ಕೋಟಿ ಅನುದಾನ ನೀಡಲಾಗುವುದು ಎಂದಿದ್ದರು. ಈ ಹಿನ್ನೆಲೆಯಲ್ಲಿ ಲಾಲ್‌ಬಾಗ್‌ನ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಿ ಜಿಬಿಎಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದರು.

ಲಾಲ್‌ಬಾಗ್‌ನ ಆಕರ್ಷಣೀಯ ಕೇಂದ್ರಗಳಲ್ಲಿ ಒಂದಾಗಿರುವ ಗಾಜಿನ ಮನೆಯ ಮುಂಭಾಗದಲ್ಲಿರುವ ವಾದ್ಯ ರಂಗಮಂಟಪದಲ್ಲಿ (ಬ್ಯಾಂಡ್ ಸ್ಟ್ಯಾಂಡ್) ಬಿರುಕು ಬಿಟ್ಟಿತ್ತು. ಇದನ್ನು ತೆರವುಗೊಳಿಸಿ, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ₹4 ಕೋಟಿ ವೆಚ್ಚದಲ್ಲಿ ಬ್ಯಾಂಡ್ ಸ್ಟ್ಯಾಂಡ್ ಪುನರ್ ನಿರ್ಮಿ-ಸಲಾಗುವುದು. ಇದರ ಸೌಂದರ್ಯಕ್ಕೆ ಯಾವುದೇ ಧಕ್ಕೆ ಆಗದಂತೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಬೆಂಗಳೂರಿನ ಮರ ವಿಜ್ಞಾನ ಸಂಶೋಧನಾ ಸಂಸ್ಥೆ ಹಾಗೂ ತಜ್ಞರ ಸಲಹೆಗಳನ್ನು ಪಡೆ-ದುಕೊಳ್ಳಲಾಗುವುದು' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬ್ರಿಟಿಷರು 1860ರಲ್ಲಿ ಲಾಲ್‌ಬಾಗ್‌ನಲ್ಲಿ ಬ್ಯಾಂಡ್ ಸ್ಟ್ಯಾಂಡ್ ಪ್ರಾರಂಭಿಸಿದರು. ಇಲ್ಲಿ ವಾರಕ್ಕೊಂದು ಬಾರಿ ಇಂಗ್ಲಿಷ್ ವಾದ್ಯ ಸಂಗೀತ ಕಾರ್ಯಕ್ರಮ ನಡೆಯುತ್ತಿತ್ತು. 2000ರಲ್ಲಿ ತೇಗದ ಮರದಿಂದ (ಟೀಕ್‌ವುಡ್) ಬ್ಯಾಂಡ್ ಸ್ಟ್ಯಾಂಡ್ ಅನ್ನು ಪುನರ್ ನಿರ್ಮಿಸಲಾಗಿತ್ತು. ಇದರ ಮೇಲ್ಛಾವಣಿ-ಯನ್ನು ಮರದ ಹಲಗೆಗಳಿಂದ ನಿರ್ಮಿಸಲಾಗಿತ್ತು. ಮಳೆ-ಗಾಳಿಗೆ ಚಾವಣಿ ಸೋರಲು ಪ್ರಾರಂಭಿಸಿತು. ಚಾವಣಿಯಲ್ಲಿ ಮಳೆ ನೀರು ಸಂಗ್ರಹಗೊಂಡ ಪರಿಣಾಮ ಬಿರುಕು ಬಿಟ್ಟು ಹಾಳಾಗಿದೆ. ಈಗ ಪುನರ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ' ಎಂದು ವಿವರಿಸಿದರು.

'ಲಾಲ್‌ಬಾಗ್‌ಗೆ ಹೊಸ ಸಸ್ಯ ಪ್ರಭೇಧಗಳನ್ನು ಪರಿಚಯಿಸುವುದು. ಮೂರು ಶುದ್ಧ ಕುಡಿಯುವ ನೀರಿನ ಘಟಕಗಳು, ಮಳೆಯಿಂದ ಆಶ್ರಯ ಪಡೆಯಲು ತಂಗುದಾಣ ಹಾಗೂ ಕಾಂಪೌಂಡ್‌ಗೆ ಗ್ರಿಲ್ ಅಳವಡಿಸುವುದರ ಜೊತೆಗೆ ಎಲೆಕ್ಟ್ರಿಕ್ ಕಾಮಗಾರಿಗಳನ್ನು ಕೈಗೊಳ್ಳ-ಲಾಗುತ್ತದೆ' ಎಂದರು.

ಕಾಮಗಾರಿಯ ವಿವರ	ವೆಚ್ಚ
ಬ್ಯಾಂಡ್‌ಸ್ಟ್ಯಾಂಡ್ ಪುನರ್‌ನಿರ್ಮಾಣ	₹1.50 ಕೋಟಿ
ರಸ್ತೆ ಡಾಂಬರೀಕರಣ	₹1.50 ಕೋಟಿ
ನಡಿಗೆ ಪಥ, ಪಾದಚಾರಿ ಮಾರ್ಗದ ಅಭಿವೃದ್ಧಿ	₹1 ಕೋಟಿ
ಗುಲಾಬಿ ಉದ್ಯಾನದ ಅಭಿವೃದ್ಧಿ	₹4 ಕೋಟಿ
ಶುದ್ಧ ಕುಡಿಯುವ ನೀರಿನ ಘಟಕಗಳು	₹24 ಲಕ್ಷ
ಲಾಲ್‌ಬಾಗ್‌ಗೆ ಹೊಸ ಸಸ್ಯ ಪ್ರಭೇದಗಳ ಪರಿಚಯ	₹50 ಲಕ್ಷ
ಮಳೆಯಿಂದ ಆಶ್ರಯ ಪಡೆಯಲು ತಂಗುದಾಣ ನಿರ್ಮಾಣ	₹40 ಲಕ್ಷ
ಕಾಂಪೌಂಡ್‌ಗೆ ಅಳವಡಿಸುವ ಗ್ರಿಲ್ ಕಾಮಗಾರಿ	₹40 ಲಕ್ಷ
ಇತರೆ ಎಲೆಕ್ಟ್ರಿಕ್ ಕಾಮಗಾರಿ	₹46 ಲಕ್ಷ
ಒಟ್ಟು	₹10 ಕೋಟಿ


ಲಾಲ್‌ಬಾಗ್ ಆವರಣದಲ್ಲಿರುವ ಗುಲಾಬಿ ಉದ್ಯಾನವನ್ನು ₹4 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಈಗಾಗಲೇ ಈ ಕುರಿತು ರೂಪರೇಷಗಳನ್ನು ಸಿದ್ಧಪಡಿಸಲಾಗುತ್ತಿದೆ
ಎಂ. ಜಗದೀಶ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ

'ವೇಗದ ಚಾಲನೆ: ಡಿಎಲ್ ರದ್ದು'

ಕೆಂಗೇರಿ: ಸಂಚಾರ ನಿಯಮಗಳನ್ನು ಪಾಲಿಸುವ ಮೂಲಕ ಸಂಭಾವ್ಯ ಅವಘಡಗಳನ್ನು ತಪ್ಪಿಸಬಹುದು ಎಂದು ವಿಜಯನಗರ ಸಂಚಾರ ವಿಭಾಗದ ಎಸಿಪಿ ನಿಕಿತಾ ಹೇಳಿದರು. ರಸ್ತೆ ಸುರಕ್ಷತಾ ಸಪ್ತಾಹದ ಭಾಗವಾಗಿ ರಾಜ್ಯ ಸಾರಿಗೆ ಇಲಾಖೆ ಸಹಯೋಗದಲ್ಲಿ ಎಲ್.ವಿ. ಟ್ರಾವೆಲ್ಸ್ ಆಯೋಜಿಸಿದ್ದ 'ಸಡಕ್ ಸುರಕ್ಷಾ ಜೀವನ ರಕ್ಷಾ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕುಡಿದು ವಾಹನ ಚಾಲನೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ಡಿ.ಎಲ್ ರದ್ದು ಮಾಡಲಾಗುತ್ತಿತ್ತು. ಬದಲಾದ ಸಂಚಾರ ಕಾಯ್ದೆಗಳನ್ವಯ ಸಿಗ್ನಲ್ ಜಂಪಿಂಗ್, ಚಾಲನೆಯ ವೇಳೆ ಮೊಬೈಲ್ ಬಳಕೆ, ಅತಿ ವೇಗದ ಚಾಲನೆ ಪ್ರಕರಣಗಳಲ್ಲೂ ಚಾಲನಾ ಪರವಾನಗಿ ರದ್ದು ಮಾಡಲು ಅವಕಾಶವಿದೆ ಎಂದರು.


ರಾಶಿಪೂಜೆ ನೆರವೇರಿಸುವ ಮೂಲಕ ಸಚಿವ ಕೃಷ್ಣ ಬೈರೇಗೌಡ ಹಾಗೂ ಮೀನಾಕ್ಷಿ ದಂಪತಿ ಸುಗ್ಗಿ-ಹುಗ್ಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು

'ಸುಗ್ಗಿಹುಗ್ಗಿ' ಸಾಂಸ್ಕೃತಿಕ ಸಂಭ್ರಮದಲ್ಲಿ ಮಿಂದೆದ್ದ ಜನ

ಕುರಿ–ಎತ್ತುಗಳ ಪ್ರದರ್ಶನ, ಗ್ರಾಮೀಣ ಕ್ರೀಡೆಗಳು, ಜನಪದ ಕಲೆಗಳು

ಪ್ರಜಾವಾಣಿ ವಾರ್ತೆ

ಯಲಹಂಕ: ಜನಪದ ಕಲೆಗಳ ಅನಾವರಣ, ರಾಶಿಪೂಜೆ, ಆಹಾರ ಮೇಳ, ಕುರಿ-ಎತ್ತುಗಳ ಪ್ರದರ್ಶನ, ಚಿತ್ತಾರದ ರಂಗೋಲಿ, ಬಾನಂಗಣದಲ್ಲಿ ಹಾರಾಡಿದ ಗಾಳಿಪಟ, ಗ್ರಾಮೀಣ ಕ್ರೀಡೆಗಳು, ವಸ್ತು ಪ್ರದರ್ಶನ, ಎತ್ತಿನ ಬಂಡಿಯಲ್ಲಿ ಸವಾರಿ...

ಕಂದಾಯ ಸಚಿವ ಕೃಷ್ಣ ಬೈರೇಗೌಡರ ನೇತೃತ್ವದಲ್ಲಿ ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕೆಬಿಜಿ ಸ್ವಯಂ ಸೇವಕರ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ಎರಡು ದಿನಗಳ ಸಂಕ್ರಾಂತಿ 'ಸುಗ್ಗಿ-ಹುಗ್ಗಿ' ಸಾಂಸ್ಕೃತಿಕ ಸಂಭ್ರಮ ಆಚರಣೆಯಲ್ಲಿ ಕಂಡುಬಂದ ದೃಶ್ಯಗಳಿವು.

ಕಬಡ್ಡಿ, ಹಗ್ಗ-ಜಗ್ಗಾಟ, ರಂಗೋಲಿ, ಮಡಕೆ ಹೊಡೆಯುವ ಹಾಗೂ ಮಕ್ಕಳಿಗಾಗಿ ಚಿತ್ರಕಲೆ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕಬ್ಬಿನ ಜಲ್ಲೆ ಮತ್ತು ಭತ್ತದ ತೆನೆಯಿಂದ ನಿರ್ಮಿಸಿದ್ದ ಮನೆ ಹಾಗೂ ವಿವಿಧ ಆಕಾರದ ಬೆಲ್ಲದ ಹಚ್ಚುಗಳು ಆಕರ್ಷಕವಾಗಿದ್ದವು. 30ಕ್ಕೂ ಅಧಿಕ ತಂಡಗಳು ಜನಪದ ಪ್ರದರ್ಶನ ನೀಡಿದವು. ಸಾರ್ವಜನಿಕರಿಗೆ ಎಳ್ಳು-ಬೆಲ್ಲ, ಅವರೇಕಾಯಿ, ಕಬ್ಬು, ಗೆಣಸು ಹಾಗೂ ಸಿಹಿ-ಖಾರ ಪೊಂಗಲ್ ವಿತರಿಸಲಾಯಿತು.

ವಸ್ತು ಪ್ರದರ್ಶನ: ಅವರೆಬೇಳೆ ಮೇಳ, ಗೃಹ ಉಪಯೋಗಿ ವಸ್ತುಗಳು, ಬಟ್ಟೆ, ಸಿರಿಧಾನ್ಯ, ಮಣ್ಣಿನ ಮಡಕೆ, ಪಿಒಪಿ ಬೊಂಬೆಗಳು, ಕೃತಕ ಆಭರಣಗಳು, ಸಿರಿಧಾನ್ಯಗಳು, ತಿಂಡಿ-ತಿನಿಸುಗಳು, ಸಾವಯವ ಪದಾರ್ಥಗಳು ಸೇರಿ ವೈವಿಧ್ಯಮಯ ಉತ್ಪನ್ನಗಳ 80ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ಸಾವಿರಾರು ಜನರು ತಮ್ಮ ಮಕ್ಕಳೊಂದಿಗೆ ಹಳ್ಳಿ ಖಾದ್ಯಗಳನ್ನು ಸವಿದು ಸಂಭ್ರಮಿಸಿದರು.

ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಭೂಮಿ-ಪ್ರಕೃತಿಯನ್ನು ಆರಾಧಿಸುವುದು ನಮ್ಮ ಮೂಲ ಸಂಸ್ಕೃತಿ ಹಾಗೂ ಜನಪದ ಕಲೆಗಳನ್ನು ಉಳಿಸುವ ಹಾಗೂ ಮುಂದಿನ ಪೀಳಿಗೆಗೆ ಕೊಂಡೊಯ್ಯುವು-ದಕ್ಕಾಗಿ ಸುಗ್ಗಿ-ಹುಗ್ಗಿ ಕಾರ್ಯಕ್ರಮವನ್ನು ಪ್ರತಿವರ್ಷ ಆಯೋಜಿಸಲಾಗುತ್ತಿದೆ' ಎಂದು ತಿಳಿಸಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಕೃಷ್ಣ ಬೈರೇಗೌಡ, ಕಾಂಗ್ರೆಸ್ ಮುಖಂಡರಾದ ಎನ್.ಎನ್. ಶ್ರೀನಿವಾಸಯ್ಯ, ಎಂ.ಜಯಗೋಪಾಲ-ಗೌಡ, ಎನ್.ಕೆ. ಮಹೇಶ್‌ಕುಮಾರ್, ಪಿ.ವಿ. ಮಂಜುನಾಥಬಾಬು, ವಿ.ವಿ.ಪಾ-ರ್ತಿಬರಾಜನ್, ವಿ.ಹರಿ, ಆರ್.ಎಂ. ಶ್ರೀನಿವಾಸ್, ಎಚ್.ಎ. ಶಿವಕುಮಾರ್, ಕೆ. ಗೌರೀಶ್, ಪಿ. ರಾಹುಲ್, ಉತ್ತನಹಳ್ಳಿ ಜಯಕುಮಾರ್, ಹನುಮಂತಿ ಉಪಸ್ಥಿತರಿದ್ದರು.



ಇಂಡೆಕ್ಸ್ ಬ್ರೇಲ್ ಪ್ರಿಂಟರ್



ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿ.ವಿ.ಯಲ್ಲಿ ಅಂಧ ವಿದ್ಯಾರ್ಥಿಗಳಿಗೆ ಬ್ರೇಲ್ ತರಬೇತಿ.

ಬ್ರೇಲ್ ಗ್ರಂಥಾಲಯ

ಅಂಧ ವಿದ್ಯಾರ್ಥಿಗಳ ಬೆಳಕಿಂಡಿ

ಕಲಬುರಗಿ ಜಿಲ್ಲೆಯಲ್ಲಿನ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಇರುವ 'ಬ್ರೇಲ್ ಗ್ರಂಥಾಲಯ'ವು ಅಂಧ ವಿದ್ಯಾರ್ಥಿಗಳು ಮುಖ್ಯವಾಹಿನಿಗೆ ಬರುವಲ್ಲಿ ತನ್ನದೇ ಆದ ಕೊಡುಗೆ ನೀಡುತ್ತಿದೆ.



ಲೆಕ್ಸ್ ಏರ್ ಸ್ಕ್ಯಾನರ್ ಸಾಧನ

• ಮನೋಜಕುಮಾರ್ ಗುದ್ದಿ

ಜಗತ್ತನ್ನು ನೋಡುವ ಅವಕಾಶ ಕಳೆದುಕೊಂಡಿರುವ ಅಂಧ ವಿದ್ಯಾರ್ಥಿಗಳಿಗೆ, ದೇಶದ ಯಾವುದೇ ಭಾಷೆಯಲ್ಲಿನ ಸಾಹಿತ್ಯ, ಲೇಖನ, ಪಾಠಗಳನ್ನು ಬ್ರೇಲ್ ಲಿಪಿಗೆ (ಅಂಧಲಿಪಿ) ಪರಿವರ್ತಿಸಿಕೊಡಬಲ್ಲ 'ಬ್ರೇಲ್ ಗ್ರಂಥಾಲಯ'ವು ಕಲಬುರಗಿ ಜಿಲ್ಲೆಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಇದೆ. ಈ ಮೂಲಕ, ಅಂಧ ವಿದ್ಯಾರ್ಥಿಗಳ ಪಾಲಿಗೆ ಇದು ಜಗದ ಬೆಳಕಿಂಡಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ರಾಜ್ಯದ ಯಾವುದೇ ಭಾಗದ ಅಂಧ ವಿದ್ಯಾರ್ಥಿಯಾದರೂ ತನಗೆ ಅಗತ್ಯವಾದ ಪುಸ್ತಕ ಅಥವಾ ಲೇಖನವನ್ನು ಈ ಗ್ರಂಥಾಲಯಕ್ಕೆ ಪಿಡಿಎಫ್ ರೂಪದಲ್ಲಿ ಕಳುಹಿಸಿ ಕೊಟ್ಟರೆ, ಅದನ್ನು ಕ್ಷಣಾರ್ಧದಲ್ಲಿ ಬ್ರೇಲ್ ಲಿಪಿಗೆ ಪರಿವರ್ತಿಸಿ ಕೊಡಬಲ್ಲ ವ್ಯವಸ್ಥೆ ಇಲ್ಲಿದೆ. ಇಂತಹ ಸೌಲಭ್ಯವುಳ್ಳ ಗ್ರಂಥಾಲಯವು ರಾಜ್ಯದ ಯಾವುದೇ ವಿಶ್ವವಿದ್ಯಾಲಯದಲ್ಲಿ ಇಲ್ಲ. ಹೀಗಾಗಿ, ಬೇರೆ ಭಾಗಗಳಿಂದಲೂ ಅಂಧ ವಿದ್ಯಾರ್ಥಿಗಳು ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿರುವ ಈ ಗ್ರಂಥಾಲಯದ ನೆರವು ಪಡೆದುಕೊಳ್ಳುತ್ತಿದ್ದಾರೆ.

ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯುತ್ತಿದ್ದ ಅಂಧ ವಿದ್ಯಾರ್ಥಿಗಳಿಗೆ ಬ್ರೇಲ್ ಲಿಪಿಯಲ್ಲಿ ಇದ್ದುದನ್ನಷ್ಟೇ ಓದಲು ಸಾಧ್ಯವಾಗುತ್ತಿದ್ದುದನ್ನು ವಿಶ್ವವಿದ್ಯಾಲಯದ ಮುಖ್ಯ ಗ್ರಂಥಪಾಲಕ ಪಿ.ಎಸ್.ಕಟ್ಟಿಮನಿ ಗಂಭೀರವಾಗಿ ಪರಿಗಣಿಸಿದರು. ಮುದ್ರಿತ ಬರಹಗಳನ್ನು ಬ್ರೇಲ್ ಲಿಪಿಗೆ ಪರಿವರ್ತಿಸುವ ಲೆಕ್ಸ್ ಏರ್ ಸಾಧನದ ಖರೀದಿ ಪ್ರಸ್ತಾವವನ್ನು 2018ರಲ್ಲಿ ಅಂದಿನ ಕುಲಪತಿ ಪ್ರೊ. ಎಚ್.ಎಂ. ಮಹೇಶ್ವರಯ್ಯ ಅವರ ಮುಂದೆ ಇರಿಸಿದರು. ಅದರಂತೆ, ಅಂಧ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಸಾಧನ ಖರೀದಿಸಿ ಬ್ರೇಲ್ ಗ್ರಂಥಾಲಯ ಆರಂಭಿಸುವುದಕ್ಕೆ ಅಗತ್ಯವಾದ ₹ 9 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಯಿತು. ಅದನ್ನು ಬಳಸಿಕೊಂಡು ವಿಶ್ವವಿದ್ಯಾಲಯದ ಸುಸಜ್ಜಿತ ಗ್ರಂಥಾಲಯದಲ್ಲಿ 'ಇಂಡಿಯನ್ ಬ್ರೇಲ್ ಟ್ರಾನ್ಸ್‌ಲೇಟರ್ ಸಾಫ್ಟ್‌ವೇರ್' ಅಳವಡಿಸಲಾಗಿದೆ.

'ಲೆಕ್ಸ್ ಏರ್ ಸಾಧನವು ಒಂದಿಡೀ ಪುಸ್ತಕವನ್ನು ಬೇಕಾದರೂ ಬ್ರೇಲ್‌ಗೆ ಪರಿವರ್ತಿಸುತ್ತದೆ ಅಥವಾ ಯಾವ ಪುಟದಿಂದ ಯಾವ ಪುಟದವರೆಗೆ ಬೇಕು ಎಂದು ಕಮಾಂಡ್ ಕೊಟ್ಟರೆ ಅಷ್ಟು ಪುಟಗಳನ್ನು ಮಾತ್ರ ಬ್ರೇಲ್‌ಗೆ ಪರಿವರ್ತಿಸುವ ವ್ಯವಸ್ಥೆಯೂ ಇದರಲ್ಲಿದೆ' ಎನ್ನುತ್ತಾರೆ ಪಿ.ಎಸ್.ಕಟ್ಟಿಮನಿ.

ಈ ಗ್ರಂಥಾಲಯದಿಂದ ಇದುವರೆಗೆ 30ಕ್ಕೂ ಅಧಿಕ ಅಂಧ ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ. ಅವರಲ್ಲಿ ಕೆಲವರು ಇದೇ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದು ಅಧ್ಯಯನ ಮುಂದುವರಿಸಿದ್ದಾರೆ. ದಾವಣಗೆರೆ ವಿಶ್ವವಿದ್ಯಾಲಯದ ಕೆಲ ವಿದ್ಯಾರ್ಥಿಗಳು ತಮಗೆ ಬೇಕಾದ ಪಠ್ಯವನ್ನು ಗ್ರಂಥಾಲಯಕ್ಕೆ ಕಳುಹಿಸಿ ಬ್ರೇಲ್‌ನಲ್ಲಿ ತರಿಸಿಕೊಂಡಿದ್ದಾರೆ.

ಅಂಧ ವಿದ್ಯಾರ್ಥಿಗಳು ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕೆ ಬ್ರೇಲ್ ಲಿಪಿ ಅತ್ಯಂತ ಅಗತ್ಯವಾದ ಊರುಗೋಲು. ಆದ್ದರಿಂದಲೇ ದೇಶದ ವಿವಿಧ ಭಾಷೆಗಳಲ್ಲಿನ ಪಠ್ಯ, ಲೇಖನಗಳನ್ನು ಬ್ರೇಲ್‌ಗೆ ಪರಿವರ್ತಿಸಿಕೊಡಲು ಕೇಂದ್ರೀಯ ವಿಶ್ವವಿದ್ಯಾಲಯವು ಯಾವುದೇ ಶುಲ್ಕವನ್ನು ಪಡೆಯುತ್ತಿಲ್ಲ. ವಿದ್ಯಾರ್ಥಿಗಳಿಂದ ಶುಲ್ಕ ಪಡೆಯದಂತೆ ಹಾಲಿ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು ಗ್ರಂಥಾಲಯ ಸಿಬ್ಬಂದಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ. ❖

ಉಪಕರಣ ಖರೀದಿಗೆ ಪ್ರಸ್ತಾವ



ಪಿ.ಎಸ್.ಕಟ್ಟಿಮನಿ

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು ಬ್ರೇಲ್ ಗ್ರಂಥಾಲಯದ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಲು ಮುಂದಾಗಿದೆ. ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ನೆರವಾಗಲು ಅನುವಾಗುವಂತೆ, ಬ್ರೇಲ್ ಲಿಪಿಯನ್ನು ಹೊಂದಿದ ಟ್ಯಾಬ್‌ಗಳನ್ನು ಖರೀದಿಸಲು ಚಿಂತನೆ ನಡೆಸಿದೆ. ಅಲ್ಲದೆ, ಕೈಯಲ್ಲಿ ಉಂಗುರದಂತಹ ಸಾಧನ ಹಾಕಿಕೊಂಡು ಅಥವಾ ಕಿವಿಗೆ ಇಯರ್ ಫೋನ್ ಧರಿಸಿ ತಮಗೆ ಬೇಕೆಂದಾಗ ಬ್ರೇಲ್ ಲಿಪಿಯಲ್ಲಿನ ಅಕ್ಷರಗಳನ್ನು ಕೇಳಲು ಸಾಧ್ಯವಾಗುವಂತಹ ಸಾಧನಗಳನ್ನು ಖರೀದಿಸಿ ಅಂಧ ವಿದ್ಯಾರ್ಥಿಗಳಿಗೆ ಎರವಲು ನೀಡಲು ಉದ್ದೇಶಿಸಿದೆ.

ಅಗತ್ಯವಾದ ಉಪಕರಣಗಳನ್ನು ಖರೀದಿಸಲು ₹ 35 ಲಕ್ಷ ಆರ್ಥಿಕ ನೆರವು ನೀಡುವಂತೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಜಯ್ ಸಿಂಗ್ ಅವರಿಗೆ ಮನವಿ ಸಲ್ಲಿಸಿರುವುದಾಗಿ ವಿಶ್ವವಿದ್ಯಾಲಯದ ಮುಖ್ಯ ಗ್ರಂಥಪಾಲಕ ಪಿ.ಎಸ್. ಕಟ್ಟಿಮನಿ ತಿಳಿಸಿದ್ದಾರೆ.

ಹೀಗೆ ಖರೀದಿಸಿದ ಟ್ಯಾಬ್‌ಗಳನ್ನು ಅಂಧ ವಿದ್ಯಾರ್ಥಿಗಳು ಕೋರ್ಸ್ ಮುಗಿಯುವವರೆಗೂ ತಮ್ಮಲ್ಲಿಯೇ ಇರಿಸಿಕೊಳ್ಳಲು ಅವಕಾಶ ನೀಡಲಾಗುವುದು. ಕೋರ್ಸ್ ಮುಗಿದ ಬಳಿಕ ಮರಳಿ ಪಡೆದು ಮತ್ತೊಬ್ಬರಿಗೆ ಹಂಚಿಕೆ ಮಾಡುವ ಚಿಂತನೆ ಇದೆ.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಶಿಪ್

ಪರ್ಫಾರ್ಮೆನ್ಸ್ ಮಾರ್ಕೆಟಿಂಗ್: ಬ್ರ್ಯಾಂಡ್‌ಹೈ.ಕೊ ಸಂಸ್ಥೆಯು ಪರ್ಫಾರ್ಮೆನ್ಸ್ ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಮಾರ್ಕೆಟಿಂಗ್, ಗೂಗಲ್ ಆ್ಯಡ್ಸ್, ಫೇಸ್‌ಬುಕ್ ಆ್ಯಡ್ಸ್, ಇನ್‌ಸ್ಟಾಗ್ರಾಂ ಆ್ಯಡ್ಸ್, ಮಾರ್ಕೆಟ್ ರಿಸರ್ಚ್ ಮತ್ತು ಸಿಯೊ ಸ್ಟ್ರಾಟಜಿ ವಿಷಯಗಳಲ್ಲಿ ಜ್ಞಾನ ಇರುವ ವಿದ್ಯಾರ್ಥಿಗಳು ಫೆ. 6ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 10,000– ₹ 15,000. ಸಂಪರ್ಕ: https://tinyurl.com/5n7yrxut.

ಹ್ಯೂಮನ್ ರಿಸೋರ್ಸಸ್ (ಎಚ್‌ಆರ್): ಡೇಟಾವಿನ್ಸಿ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಹ್ಯೂಮನ್ ರಿಸೋರ್ಸಸ್ (ಎಚ್‌ಆರ್) ಇಂಟರ್ನಿಗಳನ್ನು ಆಹ್ವಾನಿಸಿದೆ. ಇಂಗ್ಲಿಷ್‌ನಲ್ಲಿ ಬರೆಯುವ ಮತ್ತು ಮಾತನಾಡುವ ಸಾಮರ್ಥ್ಯ ಇರುವವರು ಫೆ. 6ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹ 2,000– ₹ 5,000. ಸಂಪರ್ಕ: https://shorturl.at/yBYPT.

ಬೆಂಗಳೂರು ಕೇಂದ್ರಿತ ಇಂಟರ್ನ್‌ಶಿಪ್

ಕ್ರಿಪ್ಟೊ ಕಂಟೆಂಟ್ ರೈಟರ್: ಟ್ರೇಡ್ ಬ್ರೈನ್ಸ್ ಸಂಸ್ಥೆಯು ಕ್ರಿಪ್ಟೊ ಕಂಟೆಂಟ್ ರೈಟರ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಆರ್ಥಿಕ ಸಾಕ್ಷರತೆ ಮತ್ತು ಹೂಡಿಕೆ ಕುರಿತು ಜ್ಞಾನವುಳ್ಳವರು ಫೆ. 6ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 10,000– ₹ 12,000. ಸಂಪರ್ಕ: https://tinyurl.com/2p8yn8ku.

ಕಂಟೆಂಟ್ ಆ್ಯಂಡ್ ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್: ಸಿಎಕ್ಸ್‌ಒ ಬ್ರ್ಯಾಂಡಿಂಗ್ ಸಂಸ್ಥೆಯು ಕಂಟೆಂಟ್ ಆ್ಯಂಡ್ ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಬ್ರ್ಯಾಂಡಿಂಗ್, ಪ್ರಾಡಕ್ಟ್ ಲೈಫ್‌ಸೈಕಲ್ ಮ್ಯಾನೇಜ್‌ಮೆಂಟ್ (ಪಿಎಲ್‌ಎಂ), ಸರ್ಚ್ ಎಂಜಿನ್ ಆಪ್ಟಿಮೈಸೇಷನ್ (ಎಸ್‌ಇಒ) ಮತ್ತು ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಬಗ್ಗೆ ತಿಳಿದಿರುವವರು ಫೆ. 5ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 9,000– ₹ 21,000. ಸಂಪರ್ಕ: https://shorturl.at/9XyFa.

ಪಾಸಾಗಲು ಆಸೆ, ಓದಲು ಆಸಕ್ತಿ ಇಲ್ಲ!



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

• **ನನಗೀಗ 17 ವರ್ಷ. ಪಿಯುಸಿ ಫೇಲಾಗಿದ್ದೇನೆ. ಮತ್ತೆ ಓದಿ ಪಾಸಾಗುವ ಆಸೆ ಇದೆ. ಆದರೆ ಓದುವುದಕ್ಕೆ ಆಸಕ್ತಿ ಇಲ್ಲ. ಓದಿದ್ದು ನೆನಪಿರುವುದಿಲ್ಲ. ಪಾಲಕರಿಗೆ ನನ್ನ ಬಗ್ಗೆ ಬಹಳ ಬೇಸರವಾಗಿದೆ. ನನಗೆ ಗಂಟೆಗಟ್ಟಲೆ ಮೊಬೈಲ್ ಫೋನ್ ನೋಡುವ ಹುಚ್ಚು. ಊಟ, ತಿಂಡಿ ಸೇರುತ್ತಿಲ್ಲ. ರಾತ್ರಿ ನಿದ್ರೆಯಲ್ಲಿ ಹುಡುಗಿಯರ ಬಗ್ಗೆ ಕನಸುಗಳು ಬೀಳುತ್ತವೆ. ಹುಡುಗಿಯರ ಹತ್ತಿರ ಮಾತಾಡಬೇಕು ಎನ್ನುವ ಆಸೆ ತುಂಬಾ ಇದೆ. ಆದರೆ ಮಾತನಾಡಲಿಕ್ಕೆ ಭಯವಾಗುತ್ತದೆ. ಒಬ್ಬಳಾದರೂ ಗರ್ಲ್ ಫ್ರೆಂಡ್ ಇದ್ದಿದ್ದರೆ ಉತ್ಸಾಹ ಬರುತ್ತಿತ್ತು. ಏನು ಮಾಡಲಿ, ದಾರಿ ತೋರಿಸಿ, ಸರ್.**

-**ಗಿರೀಶ್ ಚಿನ್ನಾಪುರ,** ಬೆಂಗಳೂರು

ರಾತ್ರಿ ಬೀಳುವ ಕನಸುಗಳಿಗಿಂತಲೂ ಹಗಲಲ್ಲಿ ಸಕಾರಾತ್ಮಕ ಕನಸುಗಳನ್ನು ಕಾಣಬೇಕು ಮತ್ತು ಅವನ್ನು ನನಸು ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ಆಗಲೇ ಜೀವನ ಸಾರ್ಥಕವಾಗುತ್ತದೆ. ಪಿಯು ಫೇಲಾಗಿದ್ದರ ಬಗ್ಗೆ ನಿನಗೇನೂ ಅಂಥ ನೋವಿದ್ದ ಹಾಗಿಲ್ಲ. ಅದು ಪರವಾಗಿಲ್ಲ. ಮತ್ತೆ ಓದಿ ಪಾಸಾಗಬಹುದು. ಒಂದು ಸಲವೋ ಎರಡು ಸಲವೋ ಪರೀಕ್ಷೆಯಲ್ಲಿ ನಪಾಸಾದ ಬಹಳಷ್ಟು ಮಂದಿ ಮುಂದೆ ಶ್ರದ್ಧೆಯಿಂದ ಓದಿ, ಒಳ್ಳೆಯ ಕೆಲಸಕ್ಕೆ ಸೇರಿಕೊಂಡು ಉತ್ತಮ ಜೀವನ ಸಾಗಿಸುತ್ತಿದ್ದಾರೆ.

ಮನಸ್ಸು ವಿಚಲಿತಗೊಂಡಾಗ ಸಹಜವಾಗಿಯೇ ಓದಿದ್ದು ನೆನಪಿರುವುದಿಲ್ಲ. ಓದಿನಲ್ಲಿ ಆಸಕ್ತಿ, ಶ್ರದ್ಧೆ ಇಲ್ಲದಿದ್ದರೂ ಅಷ್ಟೇ. ಪರೀಕ್ಷೆಯಲ್ಲಿ ನಪಾಸಾದೆ ಎನ್ನುವ ಬೇಸರ ಇರಬೇಕು. ಮತ್ತೆ ಓದಿ ಪಾಸಾಗುತ್ತೇನೆ ಎನ್ನುವ ಭರವಸೆಯೂ ಬೇಕು. ಅದಕ್ಕಾಗಿ ಮತ್ತೆ ಓದಿನಲ್ಲಿ ಒಂದಿಷ್ಟು ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಒಂದು ದಿನಚರಿಯನ್ನು ಬರೆದುಕೊಳ್ಳಬೇಕು. ಬೆಳಿಗ್ಗೆ ಎಷ್ಟು ಗಂಟೆಗೆ ಏಳಬೇಕು, ನಂತರ ಏನೇನು ಮಾಡಬೇಕು ಎನ್ನುವುದನ್ನು ಬರೆದಿಟ್ಟುಕೊಳ್ಳಬೇಕು. ನಿತ್ಯ ಅದನ್ನು ಚಾಚೂ ತಪ್ಪದೆ ಪಾಲಿಸಬೇಕು. ಹೀಗೆ ನೀನು ಕನಿಷ್ಠ ಮೂರು ತಿಂಗಳಾದರೂ ಮಾಡಬೇಕು.

ಬೆಳಿಗ್ಗೆ ಎರಡು ತಾಸು ಹಾಗೂ ಮಧ್ಯಾಹ್ನದ ಮೇಲೆ ಎರಡು ತಾಸು ಓದಿಗೆ ಮೀಸಲಿಡಬೇಕು. ಓದುವಾಗ ಇಪ್ಪತ್ತೈದು ನಿಮಿಷ ಓದಿದ ನಂತರ ಐದು ನಿಮಿಷ ಕಣ್ಣುಮುಚ್ಚಿ ವಿಶ್ರಾಂತಿ ಮಾಡಬೇಕು. ಮತ್ತೆ ಓದನ್ನು ಮುಂದುವರಿಸಬೇಕು. ಒಮ್ಮೆ ಓದಲು ಶುರುಮಾಡಿದ ಮೇಲೆ ಕುಳಿತಲ್ಲಿಂದ ಏಳಬಾರದು. ಎರಡು ತಾಸು ಓದು ಮುಗಿಸಿದ ನಂತರ ಓದಿದ್ದರಲ್ಲಿ ನೆನಪಿರುವಷ್ಟನ್ನು ಬರೆಯಬೇಕು. ಓದುವುದು ಮತ್ತು ಬರೆಯುವುದನ್ನು ಮಾಡುತ್ತಿರಬೇಕು. ಒಂದು ತಿಂಗಳು ಇಷ್ಟು ಮಾಡಿದರೆ ಸಾಕು. ಮುಂದೆ ಓದಿನಲ್ಲಿ ಆಸಕ್ತಿ ಬಂದಿರುತ್ತದೆ, ಓದಿದ್ದೂ ನೆನಪಿರುತ್ತದೆ. ಪರೀಕ್ಷೆಯಲ್ಲೂ ಪಾಸಾಗಬಹುದು.

ಹದಿಹರೆಯದಲ್ಲಿ ಹುಡುಗಿಯರ ಬಗ್ಗೆ ಕನಸು ಬೀಳುವುದು ಕೆಟ್ಟದ್ದೇನಲ್ಲ. ಕನಸಿನಿಂದಾಗಿ ನಿನಗೆ ಸ್ವಪ್ನಸ್ಖಲನವಾದರೆ ಅದಕ್ಕೆ ಹೆದರಿಕೊಳ್ಳಬೇಕಾಗಿಲ್ಲ. ಇದೆಲ್ಲವೂ ಸಹಜ. ಮೊಬೈಲಿನಲ್ಲಿ ನೀನು ಕಾಮಪ್ರಚೋದಕ ರೀಲ್ಸ್, ವಿಡಿಯೊಗಳನ್ನು ನೋಡುವುದರಿಂದ ತಲೆತುಂಬಾ ಅವೇ ಚಿತ್ರಗಳು, ಧ್ವನಿಗಳು, ದೃಶ್ಯಗಳು ತುಂಬಿರುತ್ತವೆ. ವಯೋಸಹಜ ಕಾಮನೆಗಳು ಮಿತಿಮೀರಿ ನಿನ್ನನ್ನು ಅತಿಕ್ರಮಿಸಿವೆ. ನಿನ್ನ ಸಮಸ್ಯೆಗಳಿಗೆ ಮೊಬೈಲ್ ಫೋನ್ ಮುಖ್ಯ ಕಾರಣವಾಗಿದೆ. ನಮ್ಮ ಅಂಗೈಯೊಳಗಿರುವ ಪುಟ್ಟ ಮೊಬೈಲು ನಮ್ಮನ್ನೇ ಆಳುವಷ್ಟರಮಟ್ಟಿಗೆ ನಾವು ಅದರ ಕೈವಶ ಆಗಬಾರದು. ಅಗತ್ಯವಿದ್ದಷ್ಟು ಉಪಯೋಗವನ್ನು ಮಾತ್ರ ಮಾಡಿಕೊಳ್ಳಬೇಕು. ಮೊಬೈಲಿನ ಮಾಯಾಜಾಲದಿಂದ ಎಷ್ಟು ಬೇಗ ತಪ್ಪಿಸಿಕೊಳ್ಳುತ್ತೀಯೊ ಅಷ್ಟು ಬೇಗ ನೀನು ಕಷ್ಟಗಳಿಂದ ಬಚಾವಾಗಬಹುದು. ಸಂತೋಷದಿಂದ ಕೂಡಿದ ಜೀವನಕ್ಕೆ ಶಕ್ತಿಯುತವಾದ ದೇಹ ಹಾಗೂ ಶಾಂತವಾದ ಮನಸ್ಸು ಬಹಳ ಮುಖ್ಯ. ಆತ್ಮವಿಶ್ವಾಸ ಇದ್ದಾಗ ಹುಡುಗಿಯರ ಹತ್ತಿರ ಮಾತನಾಡುವುದು ಕಷ್ಟವಾಗದು.

ಗರ್ಲ್‌ಫ್ರೆಂಡ್ ಇದ್ದರೆ ಉತ್ಸಾಹ ಬರುತ್ತದೆ ಎನ್ನುವ ನಿನ್ನ ಆಲೋಚನೆ ಅಷ್ಟೇನೂ ಸರಿಯಲ್ಲ. ಈ ಬಗ್ಗೆ ಈಗ ತಲೆಕೆಡಿಸಿಕೊಳ್ಳಬೇಡ. ಮೊದಲು ಪರೀಕ್ಷೆಯನ್ನು ಪಾಸು ಮಾಡು. ನಿನಗೆ ಆಸಕ್ತಿ ಇರುವ ವಿಷಯದಲ್ಲಿ ಚೆನ್ನಾಗಿ ಓದಿ ಒಳ್ಳೆಯ ಕೆಲಸವನ್ನು ಗಳಿಸಿಕೊ. ನಿನ್ನ ಕಾಲ ಮೇಲೆ ನೀನು ನಿಂತುಕೊಂಡಾಗ ಸಹಜವಾಗಿ ನಿನಗೆ ಒಳ್ಳೆಯ ಜೀವನಸಂಗಾತಿ ಸಿಗುತ್ತಾಳೆ. ಸುಖವಾದ ಜೀವನವನ್ನು ಅನುಭವಿಸಬಹುದು. ನಾಳೆಯ ಸುಖಕ್ಕೆ ಇವತ್ತಿನ ಕಷ್ಟ, ಶ್ರದ್ಧೆ ಮುಂತಾದವುಗಳೇ ಅಡಿಪಾಯ.

ಲೇಖನಗಳನ್ನು ಕಳುಹಿಸಬೇಕಾದ ಇ.ಮೇಲ್ ಐ.ಡಿ.
shikshana@prajavani.co.in

ವಿದ್ಯಾರ್ಥಿ ವೇತನ ಕೈಪಿಡಿ

ರಿಸರ್ಚ್ ಫೆಲೋಷಿಪ್

ಬೆಂಗಳೂರಿನ ಭಾರತೀಯ ವಿಜ್ಞಾನ ಅಕಾಡೆಮಿ, ನವದೆಹಲಿಯ ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ಮತ್ತು ಪ್ರಯಾಗರಾಜ್‌ನ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಸಹಯೋಗದಲ್ಲಿ 'ಸಮರ್ ರಿಸರ್ಚ್ ಫೆಲೋಷಿಪ್' ನೀಡಲಾಗುತ್ತಿದೆ.

ವಿಜ್ಞಾನ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಲು ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಈ ಯೋಜನೆಯು ಬೆಂಬಲ ನೀಡುತ್ತದೆ.

ಅರ್ಹತೆ: 10ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ಪ್ರಮುಖ ವಿಷಯಗಳಲ್ಲಿ ಕನಿಷ್ಠ ಶೇ 65ರಷ್ಟು ಅಂಕಗಳನ್ನು ಪಡೆದಿರಬೇಕು. ಸ್ಟೆಮ್ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ) ವಿಭಾಗಗಳಲ್ಲಿ ನಿರ್ದಿಷ್ಟ ವಿಷಯಗಳನ್ನು ಅಧ್ಯಯನ ಮಾಡುತ್ತಿರುವವರಾಗಿರಬೇಕು. ವಿಶ್ವವಿದ್ಯಾಲಯಗಳು/ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರೂ ಅರ್ಜಿ ಸಲ್ಲಿಸಲು ಅರ್ಹರು.

ಅರ್ಜಿ ಸಲ್ಲಿಸಲು ಕೊನೇ ದಿನ: 31-01-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/SASR1

ವೈದ್ಯಕೀಯ ವಿದ್ಯಾರ್ಥಿಗಳಿಗೆ ನೆರವು

ಗ್ಲಾಕ್ಸೊಸ್ಮಿತ್‌ಕ್ಲೈನ್ ಗ್ಲೋಬಲ್ ಕೇಪಬಿಲಿಟಿ ಸೆಂಟರ್ (ಜಿಎಸ್‌ಕೆ ಜಿಸಿಸಿ) ವೈದ್ಯಕೀಯ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿವೇತನ ಇದಾಗಿದೆ.

ಅರ್ಹತೆ: ವಿದ್ಯಾರ್ಥಿಗಳು ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಕೋರ್ಸ್‌ನ ಮೊದಲ ವರ್ಷದಲ್ಲಿ ಕಲಿಯುತ್ತಿರಬೇಕು. 12ನೇ ತರಗತಿ ಬೋರ್ಡ್ ಪರೀಕ್ಷೆಯಲ್ಲಿ ಕನಿಷ್ಠ ಶೇ 65ರಷ್ಟು ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷಕ್ಕಿಂತ ಕಡಿಮೆಯಿರಬೇಕು. ಈ ವಿದ್ಯಾರ್ಥಿವೇತನವು ಭಾರತೀಯ ನಾಗರಿಕರಿಗೆ ಮಾತ್ರ ಲಭ್ಯ.

ಆರ್ಥಿಕ ನೆರವು: ಆಯ್ಕೆಯಾದ ವಿದ್ಯಾರ್ಥಿಗಳಿಗೆ ನಾಲ್ಕೂವರೆ ವರ್ಷಗಳ ಅವಧಿಗೆ ವಾರ್ಷಿಕ ₹ 1 ಲಕ್ಷದವರೆಗೆ ನೆರವು ನೀಡಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೇ ದಿನ: 20-01-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: Short Url: www.b4s.in/praja/GSKGCC1

ಎಸ್‌ಎಸ್‌ಎಲ್‌ಸಿ ಪರೀಕ್ಷೆ ದಿಕ್ಸೂಚಿ — ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

26) ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವು ಯಾವುವು?

ಉತ್ತರ:– **ಅವುಗಳೆಂದರೆ ; 'ದಿವಾನಿ ಅದಾಲತ್' ಎಂಬ ನಾಗರಿಕ ನ್ಯಾಯಾಲಯಗಳು ಮತ್ತು 'ಫೌಜದಾರಿ ಅದಾಲತ್' ಎಂಬ ಅಪರಾಧ ನ್ಯಾಯಾಲಯಗಳು.**

27) ಅಸ್ಪೃಶ್ಯತಾ ನಿವಾರಣೆಯಲ್ಲಿ ಪಾತ್ರವಹಿಸಿದ ಸಮಾಜ ಸುಧಾರಕರನ್ನು ಹೆಸರಿಸಿ

ಉತ್ತರ:– ಸುಧಾರಣಾವಾದಿಗಳು, ಧಾರ್ಮಿಕ ನೇತಾರರು, ಬರಹಗಾರರು ಮತ್ತು ವಿಚಾರವಾದಿಗಳು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ಸ್ವಾಮಿ ವಿವೇಕಾನಂದ, ಡಾ॥ ಬಿ. ಆರ್. ಅಂಬೇಡ್ಕರ್, ಜ್ಯೋತಿ ಬಾಪುಲೆ, ಗಾಂಧೀಜಿ, ಮೊದಲಾದವರು ಅಸ್ಪೃಶ್ಯತೆ ಹಾಗೂ ಅಸಮಾನತೆಯ ವಿರುದ್ಧ ಹೋರಾಟ ನಡೆಸಿದರು.

28). ಪೆಟ್ರೋಲಿಯಂ ದ್ರವರೂಪದ ಚಿನ್ನ ಎಂದು ಕರೆಯಲು ಕಾರಣವೇನು?

ಉತ್ತರ: ಪೆಟ್ರೋಲಿಯಂ ಪ್ರಮುಖವಾದ ಶಕ್ತಿ ಸಂಪನ್ಮೂಲ ಮಾತ್ರವಾಗಿರದೇ ಒಂದು ಮುಖ್ಯ ಕಚ್ಚಾ ವಸ್ತುವೂ ಸಹ ಆಗಿದೆ. ಇದನ್ನು ಕಚ್ಚಾ ವಸ್ತುವನ್ನಾಗಿ ಅವಲಂಬಿಸಿದ ಅನೇಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ವ್ಯವಸಾಯ, ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಪೆಟ್ರೋಲಿಯಂ ಅಮೂಲ್ಯ ಶಕ್ತಿ ಸಂಪನ್ಮೂಲ. ಇದು ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದುದು. ಆದುದರಿಂದ ಇದನ್ನು 'ದ್ರವರೂಪದ ಚಿನ್ನ' ಎಂದು ಕರೆಯಲಾಗಿದೆ.

29). ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.

ಉತ್ತರ: ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನುತ್ತೇವೆ.

30) ಜನಮಂದೆ ಎಂದರೇನು? ಉದಾಹರಣೆ ಕೊಡಿ.

ಉತ್ತರ:– ಯಾವುದೇ ಪೂರ್ವ ಯೋಜನೆ ಇಲ್ಲದೇ ಅನಿಶ್ಚಿತವಾಗಿರುವ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ.

ಉದಾಹರಣೆ: * ಚಲನ ಚಿತ್ರ ಮಂದಿರದ ಹತ್ತಿರ ಟಿಕೇಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ.

31) ದಯಾನಂದ ಸರಸ್ವತಿಯವರು ಭಾರತೀಯರಿಗೆ 'ವೇದಗಳಿಗೆ ಹಿಂದಿರುಗಿ' ಎಂದು ಕರೆ ನೀಡಲು ಕಾರಣವೇನು?

ಉತ್ತರ: ಆರ್ಯಸಮಾಜವನ್ನು ದಯಾನಂದ ಸರಸ್ವತಿಯವರು ಸ್ಥಾಪಿಸಿ ಅದರ ಮೂಲಕ ವೇದಗಳು ಸತ್ಯ ಮತ್ತು ಜ್ಞಾನದ ಮೂಲವಾಗಿರುವ ಹಿನ್ನೆಲೆಯಲ್ಲಿ "ವೇದಗಳಿಗೆ ಹಿಂದಿರುಗಿ" ಎನ್ನುವ ಘೋಷಣೆ ಮಾಡಿದರು.

32) ಯಾವುದನ್ನು ಮೊದಲನೇ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ?

ಉತ್ತರ:– ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ನಾಟಿಕ್ ಪ್ರದೇಶದ ನವಾಬ ಅನ್ವರುದ್ಧೀನನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡಿದ್ದರು. ಈ ಸಂದರ್ಭದಲ್ಲಿ ಫ್ರೆಂಚರು ಮದ್ರಾಸನ್ನು ವಶಪಡಿಸಿಕೊಂಡರು. ನಂತರ ಆದ ಒಪ್ಪಂದವೊಂದರ ಪ್ರಕಾರ ಫ್ರೆಂಚರು ಮದ್ರಾಸನ್ನು ಬ್ರಿಟಿಷರಿಗೆ ಹಿಂತಿರುಗಿಸಿದರು. ಈ ಘಟನೆಯನ್ನು ಮೊದಲನೇ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ.

33) ಎರಡನೇ ಆಂಗ್ಲೋ–ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಅಂತ್ಯವಾಯಿತು?

ಉತ್ತರ:– ಈ ಯುದ್ಧವು ಮಂಗಳೂರಿನ ಶಾಂತಿ ಒಪ್ಪಂದದೊಂದಿಗೆ 1784ರಲ್ಲಿ ಕೊನೆಗೊಂಡಿತು

34) ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.

ಉತ್ತರ:– ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ

1) ಎರಡೂ ಘಟ್ಟಗಳು ದಕ್ಷಿಣ ಭಾರತದಲ್ಲಿವೆ
2) ಎರಡೂ ಘಟ್ಟಗಳು ಕರಾವಳಿ ದಂಡೆಯ ಸಮೀಪದಲ್ಲಿವೆ
3) ವಿವಿಧ ಜೀವ ಮತ್ತು ಸಸ್ಯ ಪ್ರಬೇಧಗಳನ್ನು ಎರಡೂ ಘಟ್ಟಗಳಲ್ಲಿ ನೋಡಬಹುದಾಗಿದೆ.
4) ಎರಡೂ ಘಟ್ಟಗಳು ಕಾಡು ಮತ್ತು ಆಯುರ್ವೇದ ಸಸ್ಯಗಳ ಆಗರಗಳಾಗಿವೆ ಇತ್ಯಾದಿ

ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ವ್ಯತ್ಯಾಸಗಳು

1) ಪಶ್ಚಿಮ ಘಟ್ಟ ಎತ್ತರವಾಗಿದೆ ಆದರೆ ಪಶ್ಚಿಮ ಘಟ್ಟಕ್ಕೆ ಹೋಲಿಸಿದರೆ ಪೂರ್ವ ಘಟ್ಟಗಳು ಅಷ್ಟು ಎತ್ತರವಾಗಿಲ್ಲ
2) ಪಶ್ಚಿಮ ಘಟ್ಟ ನಿರಂತರವಾಗಿದೆ ಆದರೆ ಪಶ್ಚಿಮ ಘಟ್ಟಕ್ಕೆ ಹೋಲಿಸಿದರೆ ಪೂರ್ವ ಘಟ್ಟಗಳು ಅಷ್ಟು ನಿರಂತರವಾಗಿಲ್ಲ
3) ಪಶ್ಚಿಮ ಘಟ್ಟದಲ್ಲಿ ಬಹಳಷ್ಟು ನದಿಗಳು ಹುಟ್ಟುತ್ತವೆ ಆದರೆ ಪೂರ್ವ ಘಟ್ಟದ ಮೂಲಕ ಬಹಳಷ್ಟು ನದಿಗಳು ಸಮುದ್ರವನ್ನು ಸೇರುತ್ತವೆ.
4) ಆಣೈಮಲೆ ಪಶ್ಚಿಮ ಘಟ್ಟದಲ್ಲಿ ಅತಿದೊಡ್ಡ ಶಿಖರವಾದರೆ ಅರ್ಮಕೊಂಡ' ಎಂಬುದು ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರವಾಗಿದೆ

(ಗಮನಿಸಿ:– ನಿಮ್ಮ ಹೆಚ್ಚಿನ ಅಧ್ಯಯನದ ದೃಷ್ಟಿಯಿಂದ ಪಠ್ಯ ಪುಸ್ತಕದಲ್ಲಿರುವ ಮಾಹಿತಿಗಿಂತ ಸ್ವಲ್ಪ ಹೆಚ್ಚಿನ ಮಾಹಿತಿಯನ್ನು ಈ ಪ್ರಶ್ನೆಯ ಉತ್ತರದಲ್ಲಿ ಸೇರಿಸಲಾಗಿದೆ)

35) ವಿಶ್ವಸಂಸ್ಥೆಯ ಉದ್ದೇಶಗಳನ್ನು ಬರೆಯಿರಿ

ಉತ್ತರ :– ವಿಶ್ವ ಸಂಸ್ಥೆಯ ಸನ್ನದು ಈ ಜಾಗತಿಕ ಸಂಸ್ಥೆಯ ಪ್ರಧಾನ ದಾಖಲೆ ಎನಿಸಿದ್ದು ಇದರಲ್ಲಿ 19 ಅಧ್ಯಾಯಗಳಿಗಿದ್ದು 111 ವಿಧಿಗಳನ್ನು ಹೊಂದಿವೆ. " ವಿಶ್ವದ ಜನಸಮುದಾಯವೆನಿಸಿದ ನಾವು ....'' ಎಂಬ ವಾಕ್ಯದೊಂದಿಗೆ ವಿಶ್ವ ಸಂಸ್ಥೆಯ ಪ್ರಸ್ತಾವನೆಯು ಪ್ರಾರಂಭಗೊಳ್ಳುತ್ತದೆ.

ವಿಶ್ವ ಸಂಸ್ಥೆಯ ಧ್ಯೇಯೋದ್ದೇಶಗಳು :

1. ಅಂತಾರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು.
2. ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.
3. ಮಾನವನ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು.
4. ಅಂತಾರಾಷ್ಟ್ರೀಯ ಮಟ್ಟದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಮಾನವೀಯ ನೆಲೆಯ ಸಮಸ್ಯೆಗಳಿಗೆ ಅಂತಾರಾಷ್ಟ್ರೀಯ ಸಹಕಾರದೊಂದಿಗೆ ಪರಿಹಾರ ಕಂಡು ಹುಡುಕುವುದು.
5. ಅಂತಾರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು
6. ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

36) ಚಂಡಮಾರುತಗಳು ಉಂಟಾಗಲು ಕಾರಣಗಳೇನು? ಇದರ ಪರಿಣಾಮಗಳೇನು?

ಉತ್ತರ: ಪೃಥ್ವಿಯ ಮೇಲೆ ಸಂಭವಿಸುವ ನೈಸರ್ಗಿಕ ವಿಕೋಪಗಳಲ್ಲಿ ಆವರ್ತ ಗಾಳಿಗಳು ಅತ್ಯಂತ ಹಾನಿಕಾರಕ ಮತ್ತು ವಿನಾಶಕಾರಕಗಳಾಗಿವೆ. ಈ ಗಾಳಿಗಳನ್ನು ಸಾಮಾನ್ಯವಾಗಿ ಚಂಡಮಾರುತಗಳೆಂದು ಕರೆಯಲಾಗುವುದು.

ಚಂಡಮಾರುತಗಳು ಉಂಟಾಗಲು ಕಾರಣಗಳು: ಚಂಡಮಾರುತಗಳು ಬಂಗಾಳಕೊಲ್ಲಿಯಲ್ಲಿ ಉಗಮಗೊಳ್ಳುತ್ತವೆ. ಮೂರು ಕಡೆಗಳಲ್ಲಿ ಭೂಭಾಗವಿದ್ದು ಭೂಮಿ ಸಾಗರ ಭಾಗಗಳ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — MATHS

ಎಸ್‌ಎಸ್‌ಎಲ್‌ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION : MODEL QUESTIONS

III) Answer all the following:-

3. Define scalar matrix.

Ans:- A Diagonal matrix is said to be scalar matrix if all its diagonal elements are equal.

4. $A\begin{bmatrix}1 & 2\\ 3 & 4\end{bmatrix}$ Find $|2 \quad A|$.

Ans :– $2A=\begin{bmatrix}2 & 4\\ 6 & 8\end{bmatrix}|2 \quad A|=\begin{vmatrix}2 & 4\\ 6 & 8\end{vmatrix}=16-24=-8$

5. If $y=\log(\sin x)$ find $\frac{dy}{dx}$.

Ans :– $\frac{dy}{dx}=\frac{\cos x}{\sin x}=\cot x$ (or) $e^y=\sin x$

$\Rightarrow e^y\frac{dy}{dx}=\cos x \Rightarrow \frac{dy}{dx}=\frac{\cos x}{e^y}$

6. Evaluate $\int(\sin x+\cos x)\,dx$

Ans :– $\int(\sin x+\cos x)=-\cos x+\sin x+c$

(or) $\sin x-\cos x+c$

7. Find the direction cosines of the vector

$\vec{a}=\hat{i}+2j+3k$

Ans :– $|\vec{a}|\sqrt{1+4+9}=\sqrt{14}$

DC's of $\vec{a}$ are $\frac{1}{\sqrt{14}},\frac{2}{\sqrt{14}},\frac{3}{\sqrt{14}}$

8. Find the equation of the plane having intercept 3 on Y axis and parallel to ZOX plane

Ans:- Equation of plane is $y=3$ or $=\frac{y}{3}=1$

9. Define optimal solution in the linear programming problem

Ans:- Any point in the feasible region gives the optimum value of the objective function is called an optimal solution

10. An urn contains 5 red and 2 black balls, two balls are randomly selected. Let X represents the number of black balls, what are the possible values of X?

Ans:- Both the balls are black,

∴ value of X is 2

If one is red then another one is black ball,

∴ value of X is 1

If both the balls are red then, the number of black balls are zero,

∴ value of X is 0

∴ Possible values of X are 0, 1, 2

11. Define binary operation on the set. Verify whether the operation * defined on Z by a * b = ab + 1 is binary or not?

Ans:- A binary operation * on a set A is a function * from A x A to A $\forall a, b\in Z$

then $a * b = ab + 1 \in Z$

∴ * is a binary operation on Z

12. Find the simplest form of $\tan^{-1}\sqrt{3}-\sec^{-1}(-2)$

Ans :– $\frac{\pi}{3}-\left(\pi-\sec^{-1}2\right)=\frac{\pi}{3}-\left(\pi-\frac{\pi}{3}\right)=\frac{\pi}{3}-\frac{2\pi}{3}=-\frac{\pi}{3}$

13. Evaluate $\sin\left\{\frac{\pi}{3}-\sin^{-1}\left(\frac{-1}{2}\right)\right\}$

Ans :– $\sin\left\{\frac{\pi}{3}+\sin^{-1}\left(\frac{1}{2}\right)\right\}=\sin\left\{\frac{\pi}{3}+\frac{\pi}{6}\right\}=\sin\frac{\pi}{2}=1$

14. Find the area of the triangle whose vertices are (3,8) (-4, 2) (5, 1) using determinants.

Ans :– Area $=\frac{1}{2}\begin{vmatrix}3 & 8 & 1\\ -4 & 2 & 1\\ 5 & 1 & 1\end{vmatrix}=\frac{61}{2}$ sq units

15. Check the continuity of the function $f(x)=2x+3$ at $x=1$

Ans:- $\lim_{x\to 1} f(x)=2(1)+3=5;\ f(1)=5$

$\therefore \lim_{x\to 1} f(x)=f(1)=5$

Hence f(x) is continuous at x = 1

16.Find the derivative of $(3x^2-7x+3)^{5/2}$ w.r.t. x.

Ans :– $\frac{dy}{dx}=\frac{5}{2}\left(3x^2-7x+3\right)^{\frac{5}{2}-1}\frac{d}{dx}\left(3x^2-7x+3\right)$

$\frac{dy}{dx}=\frac{5}{2}\left(3x^2-7x+3\right)^{\frac{3}{2}}(6x-7)$

Fill in the blanks by choosing the appropriate answer from those given in the bracket (0, 1, 2, 3, 4, 5)

1. The number of points in R for which the function $f(x)=|x|+|x+1|$ is not differentiable, is__________

Ans:- 2

17. The value of $\hat{i}.(\hat{j}\times\hat{k})-\hat{j}.(\hat{k}\times\hat{i})-\hat{k}.(\hat{j}\times\hat{i})$ is__________

Ans:- 1

18. The sum of the order and degree of the differential equation. $2x^2\left(\frac{d^2y}{dx^2}\right)-3\left(\frac{dy}{dx}\right)+y$ is____

Ans:- 3

19.The total revenue in rupees received from the sale of x unit of a product is given by $R(x)=2x^2-4x+5$,The marginal revenue when x=2 is__________

Ans:- 4

20. If $P(A)=\frac{3}{k}$, $P(A\cap B)=\frac{2}{5}$ and $P(B|A)=\frac{2}{3}$, then k is______

Ans:- 5

(Contd.......)

ಸರ್ಕಾರಿ ಆಸ್ಪತ್ರೆಗಳಿಗೆ 'ಸೌರಶಕ್ತಿ'

3,600 ಸೌರ ವಿದ್ಯುತ್ ಘಟಕಗಳ ಅಳವಡಿಕೆ
• ಶೇ 85ರಷ್ಟು ವಿದ್ಯುತ್ ಉಳಿತಾಯ

• ವರುಣ ಹೆಗಡೆ

ಬೆಂಗಳೂರು: 'ಸೌರ ಸ್ವಾಸ್ಥ್ಯ' ಯೋಜನೆಯಡಿ 3,600 ಆಸ್ಪತ್ರೆಗಳಲ್ಲಿ ಸೌರ ವಿದ್ಯುತ್ ಘಟಕಗಳನ್ನು ಅಳವಡಿಸಲಾಗಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸಾಂಪ್ರದಾಯಿಕ ವಿದ್ಯುತ್ ಮೇಲಿನ ಅವಲಂಬನೆ ಕಡಿಮೆಯಾಗಿದ್ದು, ಕ್ರಮೇಣ ಸೌರ ವಿದ್ಯುತ್‌ಗೆ ತೆರೆದುಕೊಳ್ಳುತ್ತಿವೆ.

ಸೌರ ವಿದ್ಯುತ್ ಬಳಕೆಯಿಂದಾಗಿ ಆಸ್ಪತ್ರೆಗಳ ವಿದ್ಯುತ್ ಬಿಲ್‌ನಲ್ಲಿ ಸರಾಸರಿ ಶೇ 85ರಷ್ಟು ಕಡಿತವಾಗುತ್ತಿದೆ. ಸೆಲ್ಕೊ ಫೌಂಡೇಷನ್ ಸಹಯೋಗದಲ್ಲಿ ಆರೋಗ್ಯ ಇಲಾಖೆಯು 2024ರ ನವೆಂಬರ್‌ನಲ್ಲಿ 'ಸೌರ ಸ್ವಾಸ್ಥ್ಯ' ಯೋಜನೆಯನ್ನು ಪ್ರಾರಂಭಿಸಿತ್ತು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಫೌಂಡೇಷನ್ ಸೌರ ವಿದ್ಯುತ್ ಘಟಕಗಳ ಅಳವಡಿಕೆಗೆ ಆರ್ಥಿಕ ನೆರವು ಒದಗಿಸುತ್ತಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸೌರ ವಿದ್ಯುತ್ ಘಟಕಗಳ ಅಳವಡಿಕೆ ಭರದಿಂದ ಸಾಗಿದೆ.

ಬ್ಯಾಟರಿ ಆಧಾರಿತ ಈ ವ್ಯವಸ್ಥೆಯಿಂದ ದಿನದ 24 ಗಂಟೆಯೂ ಆಸ್ಪತ್ರೆಗಳಿಗೆ ಸೌರ ವಿದ್ಯುತ್ ದೊರೆಯುತ್ತಿದೆ. ಶಸ್ತ್ರಚಿಕಿತ್ಸೆ ಸೇರಿದಂತೆ ವಿವಿಧ ಚಿಕಿತ್ಸೆಗಳ ವೇಳೆ ಎದುರಾಗುತ್ತಿದ್ದ ವಿದ್ಯುತ್ ಸಮಸ್ಯೆ ನೂತನ ವ್ಯವಸ್ಥೆಯಿಂದ ನಿವಾರಣೆಯಾಗಿದೆ.

5 ಸಾವಿರ ಗುರಿ: ಫೌಂಡೇಷನ್ ಜತೆಗೆ ಇಲಾಖೆ ಮಾಡಿಕೊಂಡಿರುವ ಒಪ್ಪಂದದ ಅನುಸಾರ, ಈ ವರ್ಷದ ಅಂತ್ಯಕ್ಕೆ 3,381 ಉಪ ಕೇಂದ್ರಗಳು, 1,500 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿ ಒಟ್ಟು 5 ಸಾವಿರ ಆರೋಗ್ಯ ಕೇಂದ್ರಗಳಿಗೆ ಸೌರ ವಿದ್ಯುತ್ ಉತ್ಪಾದನಾ ಘಟಕ ಅಳವಡಿಸುವ ಗುರಿಯನ್ನು ಇಲಾಖೆ ಹಾಕಿಕೊಂಡಿದೆ. ಇದಕ್ಕೆ ₹120 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಈ ಯೋಜನೆಯಡಿ 119 ತಾಲ್ಲೂಕು ಆಸ್ಪತ್ರೆಗಳಿಗೂ ಸೌರ ವಿದ್ಯುತ್ ಘಟಕಗಳನ್ನು ಅಳವಡಿಸಲಾಗುತ್ತಿದೆ.

'ಉತ್ತಮ ವೈದ್ಯಕೀಯ ಸೇವೆ ಒದಗಿಸಲು ಸೌರ ವಿದ್ಯುತ್ ಸಹಕಾರಿಯಾಗಲಿದೆ. ನವೀಕರಿಸಬಹುದಾದ ಇಂಧನ ಬಳಕೆಗೆ ಉತ್ತೇಜನ ನೀಡುವುದರಿಂದ ಪರಿಸರ ಸಂರಕ್ಷಣೆಯೂ ಸಾಧ್ಯವಾಗಲಿದೆ. ಸರ್ಕಾರಿ ಆಸ್ಪತ್ರೆಗಳಿಗೆ ಸೌರ ವಿದ್ಯುತ್ ಘಟಕಗಳ ಅಳವಡಿಕೆಯಿಂದಾಗಿ ವಿದ್ಯುತ್‌ಗೆ ಮಾಡುತ್ತಿದ್ದ ವೆಚ್ಚ ಇಳಿಕೆಯಾಗಲಿದೆ. ದುಬಾರಿ ಬೆಲೆಯ ಡಿಸೇಲ್ ಜನರೇಟರ್‌ಗಳಿಂದಲೂ ಮುಕ್ತವಾಗಲಿವೆ' ಎಂದು ಸೆಲ್ಕೊ ಫೌಂಡೇಷನ್‌ನ ಪ್ರತಿನಿಧಿ ತಿಳಿಸಿದರು.



ನವೀಕರಿಸಬಹುದಾದ ಇಂಧನ ಬಳಕೆಯಲ್ಲಿ ಕರ್ನಾಟಕವು ಮಾದರಿಯಾಗಿದೆ. ಆರೋಗ್ಯ ಕೇಂದ್ರಗಳಿಗೆ ತಡೆರಹಿತ ವಿದ್ಯುತ್ ಪೂರೈಸಲು ಈ ವ್ಯವಸ್ಥೆ ಸಹಕಾರಿಯಾಗಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

₹100 ಕೋಟಿ ಉಳಿತಾಯ ನಿರೀಕ್ಷೆ

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಸೌರ ಫಲಕಗಳು 4 ಕಿಲೋವಾಟ್‌ನಿಂದ 5 ಕಿಲೋವಾಟ್ ಸಾಮರ್ಥ್ಯ ಹೊಂದಿರಲಿವೆ. ತಾಲ್ಲೂಕು ಆಸ್ಪತ್ರೆಗಳಿಗೆ 10 ಕಿಲೋವಾಟ್ ಸಾಮರ್ಥ್ಯದ ಸೌರ ಫಲಕಗಳನ್ನು ಅಳವಡಿಸಲಾಗುತ್ತಿದೆ. ಇದರಿಂದಾಗಿ ಸಾಂಪ್ರದಾಯಿಕ ವಿದ್ಯುತ್ ಮೇಲಿನ ಅವಲಂಬನೆ ಕಡಿಮೆಯಾಗುತ್ತಿದೆ. 5,000 ಆರೋಗ್ಯ ಕೇಂದ್ರಗಳಿಗೆ ಸೌರ ಫಲಕಗಳನ್ನು ಅಳವಡಿಸಿದ ಬಳಿಕ, ಮುಂದಿನ 10 ವರ್ಷಗಳಲ್ಲಿ ಸರ್ಕಾರದ ಬೊಕ್ಕಸಕ್ಕೆ ₹100 ಕೋಟಿಯಷ್ಟು ಉಳಿತಾಯವಾಗಲಿದೆ ಎಂದು ಅಂದಾಜಿಸಲಾಗಿದೆ.



ಬೆಂಗಳೂರು ವೈದ್ಯಕೀಯ ಕಾಲೇಜು ಕಟ್ಟಡದ ತಾರಸಿ ಮೇಲೆ ಅಳವಡಿಸಿರುವ ಸೌರ ಫಲಕ

ಆಸ್ಪತ್ರೆ ಸಿಬ್ಬಂದಿಗೆ ತರಬೇತಿ

ಸೌರ ಸ್ವಾಸ್ಥ್ಯ ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಲ್ಲಿ ಆರಂಭಿಸಿರುವ ಸೌರ ವಿದ್ಯುತ್ ಉತ್ಪಾದನಾ ಘಟಕಗಳ ಮೇಲೆ 'ರಿಮೋಟ್ ಮಾನಿಟರಿಂಗ್ ಸಿಸ್ಟಮ್' ಮೂಲಕ ನಿರಂತರ ನಿಗಾ ಇಡಲಾಗುತ್ತಿದೆ. ಇದರಿಂದಾಗಿ ಘಟಕಗಳಲ್ಲಿ ಸಮಸ್ಯೆ ಕಾಣಿಸಿಕೊಂಡಲ್ಲಿ ಕೂಡಲೇ ನಿವಾರಣೆ ಮಾಡಲು ಸಾಧ್ಯವಾಗಲಿದೆ. 'ಸೌರ ಇ-ಮಿತ್ರಾ' ಮೊಬೈಲ್ ಆ್ಯಪ್ ಮೂಲಕವೂ ಸೋಲಾರ್ ಸಾಧನಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.

ಸೌರ ಫಲಕಕ್ಕೆ ಹಾನಿ ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಂಡಾಗ ಈ ಆ್ಯಪ್ ಮೂಲಕವೇ ವೈದ್ಯಕೀಯ ಸಿಬ್ಬಂದಿ ದೂರು ನೀಡಬಹುದಾಗಿದೆ. ಕೇಂದ್ರೀಕೃತ ವ್ಯವಸ್ಥೆಯಡಿ ಸೇವಾದಾರರು ಈ ದೂರನ್ನು ಪರಿಶೀಲಿಸಿ, ಸ್ಥಳೀಯ ನಿರ್ವಾಹಕರಿಗೆ ಸಮಸ್ಯೆ ಪರಿಹರಿಸಲು ಸೂಚಿಸುತ್ತಾರೆ. ಸೌರ ವಿದ್ಯುತ್ ಘಟಕಗಳನ್ನು ನಿರ್ವಹಿಸುವ ಬಗ್ಗೆ ಆಸ್ಪತ್ರೆ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ರಾಯಚೂರಿನಲ್ಲಿರುವ ಸೌರ ವಿದ್ಯುತ್ ಘಟಕ ನಿರ್ವಹಣೆ ತರಬೇತಿ ಕೇಂದ್ರವು ಇದರ ದುರಸ್ತಿ ಮತ್ತು ಸಿಬ್ಬಂದಿ ತರಬೇತಿ ಜವಾಬ್ದಾರಿ ಹೊಂದಿದೆ.

'ಉಪ್ಪು ತಿಂದವರು ನೀರು ಕುಡಿಯಲೇಬೇಕು'

ಮೈಸೂರು: 'ಉಪ್ಪು ತಿಂದವರು ನೀರು ಕುಡಿಯಲೇಬೇಕು. ನಾವು ಯಾರ ರಕ್ಷಣೆಯನ್ನೂ ಮಾಡುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮದ್ಯ ಮಾರಾಟ ಸನ್ನದು ನೀಡಲು ₹25 ಲಕ್ಷ ಲಂಚ ಪಡೆಯುತ್ತಿದ್ದ ಬೆಂಗಳೂರು ಅಬಕಾರಿ ಜಿಲ್ಲೆ–8ರ ಅಬಕಾರಿ ಉಪ ಆಯುಕ್ತ (ಡಿ.ಸಿ) ಜಗದೀಶ್ ನಾಯ್ಕ ಸೇರಿ ಮೂವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿರುವ ಬಗ್ಗೆ ಮೇಲಿನಂತೆ ಅವರು ಪ್ರತಿಕ್ರಿಯಿಸಿದರು.

ಭಾನುವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಆಡಿಯೊದಲ್ಲಿ ಸಚಿವರ ಹೆಸರು ಪ್ರಸ್ತಾಪವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ' ಎಂದರು.

'ಬಿಜೆಪಿ ಸರ್ಕಾರದಲ್ಲಿ ಶೇ 40ರಷ್ಟು ಭ್ರಷ್ಟಾಚಾರವಿದೆ ಎಂದು ಗುತ್ತಿಗೆದಾರರು ಹೇಳಿದ್ದರು. ಅಂತಹ ಬಿಜೆಪಿಯವರು ನಮ್ಮ ಮೇಲೇನು ಆರೋಪಿಸುವುದು' ಎಂದು ಪ್ರಶ್ನಿಸಿದರು.

'ವೀರಭೂಮಿ' ಉದ್ಘಾಟನೆ ಇಂದು

ಪ್ರಜಾವಾಣಿ ವಾರ್ತೆ

ನಂದಗಡ (ಬೆಳಗಾವಿ ಜಿಲ್ಲೆ): ಸಂಗೊಳ್ಳಿ ರಾಯಣ್ಣ ಹಾಗೂ ಅವರ ಸಹಚರರನ್ನು ಗಲ್ಲಿಗೇರಿಸಿದ ಖಾನಾಪುರ ತಾಲ್ಲೂಕಿನ ನಂದಗಡದಲ್ಲಿ ನಿರ್ಮಿಸಿದ 'ವೀರಭೂಮಿ' ಮತ್ತು ಇತರ ಕಾಮಗಾರಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಬೆಳಿಗ್ಗೆ 11 ಗಂಟೆಗೆ ಉದ್ಘಾಟಿಸಲಿದ್ದಾರೆ.

ಇದರೊಂದಿಗೆ ವಸ್ತು ಸಂಗ್ರಹಾಲಯ ಮತ್ತು ಕೆರೆಯ ಮಧ್ಯೆ ನಿರ್ಮಿಸಿರುವ ರಾಯಣ್ಣನ ಪ್ರತಿಮೆಯನ್ನೂ ಲೋಕಾರ್ಪಣೆ ಮಾಡುವರು. ಮಧ್ಯಾಹ್ನ 12ಕ್ಕೆ ನಂದಗಡದ ಎನ್‌.ಆರ್‌.ಇ ಸಂಸ್ಥೆಯ ಮೈದಾನದಲ್ಲಿ ಸಮಾವೇಶ ನಡೆಯಲಿದೆ. ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಸಚಿವ ಶಿವರಾಜ ತಂಗಡಗಿ ಸೇರಿ ಹಲವು ಗಣ್ಯರು ಪಾಲ್ಗೊಳ್ಳುವರು.

ಏನಿದು ವೀರಭೂಮಿ: ರಾಯಣ್ಣನನ್ನು ನೇಣಿಗೇರಿಸಿದ ಮರ ಹಾಗೂ ಸುತ್ತಲಿನ ಪ್ರದೇಶವನ್ನು ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಿ 'ವೀರಭೂಮಿ' ಎಂಬ ಪ್ರೇಕ್ಷಣೀಯ ಸ್ಥಳ ರೂಪಿಸಲಾಗಿದೆ.

ಸುತ್ತಲೂ ಕೋಟೆ ಕಟ್ಟಲಾಗಿದ್ದು, ಒಳಗೆ ರಾಯಣ್ಣ ಹಾಗೂ ರಾಣಿ ಚನ್ನಮ್ಮ ಅವರ ಬದುಕು, ಹೋರಾಟ, ತ್ಯಾಗಗಳನ್ನು ಪ್ರತಿಬಿಂಬಿಸುವ ಪ್ರತಿಮೆಗಳನ್ನು ನಿರ್ಮಿಸಲಾಗಿದೆ.

200 ವರ್ಷಗಳ ಹಿಂದಿನ ಯಶೋಗಾಥೆಯನ್ನು ವಾಸ್ತವಿಕ ನೆಲಗಟ್ಟಿನಲ್ಲಿ ಮೂರ್ತಿ ಶಿಲ್ಪ, ಉಬ್ಬುಶಿಲ್ಪ, ಚಿತ್ರ ಫಲಕ, ಮಾಹಿತಿ ಫಲಕ, ಕಿರುಚಿತ್ರ, ಕಥಾಚಿತ್ರ ಹಾಗೂ ವಿಶ್ಲೇಷಣಾ ಫಲಕ, ರೊಬೋಟಿಕ್ ತಂತ್ರಜ್ಞಾನ, ಡೈಮೆನ್ಷನ್ ಚಿತ್ರಮಂದಿರ ಹಾಗೂ ಧ್ವನಿ ಪ್ರಭಾವಗಳೊಂದಿಗೆ ನೋಡುಗರ ಮನಸ್ಸಿನಲ್ಲಿ ಮೇಲೆ ಪ್ರಭಾವ ಬೀರುವಂತೆ ಮಾಡಲಾಗಿದೆ.

ರಾಯಣ್ಣನ ಕಾರ್ಯಸ್ಥಾನಗಳಾಗಿದ್ದ ಹಂಡಿ ಬಡಗನಾಥ ಮಠ, ಸಂಪಗಾವಿ ತಾಲ್ಲೂಕು ಕಚೇರಿ, ಕುಲಕರ್ಣಿ ಮತ್ತು ರಾಯಣ್ಣನ ಸಂಘರ್ಷ, ಸುರಪುರದ ಅರಮನೆ, ರಹಸ್ಯ ಚಟುವಟಿಕೆ, ಕವಳಿ ಗುಡ್ಡ ಮುಂತಾದವು ರೋಬೋಟಿಕ್ ತಂತ್ರಜ್ಞಾನದಲ್ಲಿ ಮೂಡಿಬಂದಿವೆ.



ಖಾನಾಪುರ ತಾಲ್ಲೂಕಿನ ನಂದಗಡದಲ್ಲಿ ನಿರ್ಮಿಸಿದ ರಾಯಣ್ಣನ 'ವೀರಭೂಮಿ'ಯನ್ನು ಸಚಿವ ಶಿವರಾಜ ತಂಗಡಗಿ ಭಾನುವಾರ ಪರಿಶೀಲಿಸಿದರು

'ಅಬಕಾರಿ ಸನ್ನದು ನೀಡಲು ₹2,500 ಕೋಟಿ ಲಂಚ'

ಒಂದನೇ ಪುಟದಿಂದ...

'ಮೈಕ್ರೊ ಬ್ರುವರಿ ಸನ್ನದು ಪಡೆಯಲು ಸಚಿವರಿಗೆ ₹1.50 ಕೋಟಿ ನೀಡಬೇಕು ಎಂದು ಅಧಿಕಾರಿಯೊಬ್ಬರು ಹೇಳುವ ಆಡಿಯೊ ನಮ್ಮಲ್ಲಿದೆ. ಇದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಪಾಲಿದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಸನ್ನದು ಪಡೆದುಕೊಳ್ಳಲು ಎಷ್ಟೆಷ್ಟು ಲಂಚ ನೀಡಬೇಕು ಎಂಬುದರ ಬಗ್ಗೆ ಇಬ್ಬರು ವ್ಯಕ್ತಿಗಳು ಚರ್ಚಿಸುವ ಆಡಿಯೊ ಅನ್ನು ಅವರು ಸುದ್ದಿಗೋಷ್ಠಿಯಲ್ಲಿ ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು.

'ಅಬಕಾರಿ ಇಲಾಖೆಯು 750 ಸಿಎಲ್‌–7, 650 ಸಿಎಲ್‌–2 ಮತ್ತು ಹಲವು ಸಿಎಲ್‌–9 ಸನ್ನದುಗಳನ್ನು ಹರಾಜು ಮಾಡಲು ಮುಂದಾಗಿದೆ. ಪ್ರತಿಯೊಂದು ಸನ್ನದಿಗೆ ₹1.50 ಕೋಟಿ ಲಂಚದಂತೆ, ಒಟ್ಟು ₹2,500 ಕೋಟಿ ಆಗಲಿದೆ. ಈ ಹಣವೆಲ್ಲಾ ಬಿಹಾರ, ಮಹಾರಾಷ್ಟ್ರ ಚುನಾವಣೆಗೆ ಹೋಗಿದೆ. ಇನ್ನಷ್ಟು ಹಣ ಅಸ್ಸಾಂಗೆ ಹೋಗಲಿದೆ' ಎಂದು ಆರೋಪಿಸಿದರು.

'ಅಬಕಾರಿ ಸಚಿವ ಅಥವಾ ಅವರ ಮಗನಿಗೆ ಲಂಚದ ಹಣ ನೀಡಬೇಕು ಎಂದು ಅಧಿಕಾರಿಗಳೇ ಹೇಳಿದ್ದಾರೆ. ಲೋಕಾಯುಕ್ತ ಪೊಲೀಸರಿಗೂ ಸಿಕ್ಕಿಬಿದ್ದಿದ್ದಾರೆ. ಮೊದಲು ಪೊಲೀಸರು ಇಂತಹ ಕೃತ್ಯಕ್ಕೆ ಇಳಿದರು. ಈಗ ಅಬಕಾರಿ ಪೊಲೀಸರೂ ಅದೇ ಹಾದಿ ಹಿಡಿದಿದ್ದಾರೆ. ಸ್ವತಃ ಮುಖ್ಯಮಂತ್ರಿ ಅವರೇ ಈ ಬಗ್ಗೆ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಪೊಲೀಸ್ ಇಲಾಖೆಯನ್ನು ಮುಖ್ಯಮಂತ್ರಿಯೇ ಬೆತ್ತಲು ಮಾಡಿದ್ದಾರೆ. ರಾಜ್ಯದ ಆಡಳಿತದ ಸ್ಥಿತಿ ಹದಗೆಟ್ಟಿದೆ ಎಂಬುದಕ್ಕೆ ಇವೆಲ್ಲಕಿಂತ ಬೇರೆ ಸಾಕ್ಷ್ಯ ಬೇಕೆ' ಎಂದೂ ಪ್ರಶ್ನಿಸಿದರು.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್‌.ರವಿಕುಮಾರ್ ಸುದ್ದಿಗೋಷ್ಠಿಯಲ್ಲಿ ಭಾಗಿಯಾಗಿದ್ದರು.

ಆಡಿಯೊದಲ್ಲಿ ಏನಿದೆ...?

'ಮೈಕ್ರೊ ಬ್ರುವರಿ ಲೈಸನ್ಸ್ ಪಡೆಯಲು ಸಚಿವರಿಗೆ ₹1.50 ಕೋಟಿ ಆಗುತ್ತದೆ. ಅವರಿಗಾದರೂ ತಲುಪುತ್ತದೆ ಅಥವಾ ಅವರ ಮಗನಿಗಾದರೂ ಹೋಗುತ್ತದೆ. ಇನ್ನು ಕಮಿಷನರ್, ಡೆಪ್ಯುಟಿ ಕಮಿಷನರ್, ಸೂಪರಿಂಟೆಂಡೆಂಟ್, ಪಿ.ಸಿಗಳಿಗೆಲ್ಲಾ ಕೊಡಬೇಕು' ಎಂದು ವ್ಯಕ್ತಿಯೊಬ್ಬರು ಹೇಳಿರುವುದು ಆಡಿಯೊದಲ್ಲಿ ದಾಖಲಾಗಿದೆ.

ಮುಂದುವರಿದು, 'ನೋಡಿ ಹಣ ನೀಡದಿದ್ದರೆ ನಿಮಗೆ ಲೈಸನ್ಸ್ ಸಿಗುವುದಿಲ್ಲ. ಹಣ ಕೊಡದಿದ್ದರೆ ಸುಮ್ಮನೆ ಅಲೆದಾಡಿಸುತ್ತಾರೆ. ಸುಮ್ಮನೆ ಅದು ಸರಿ ಇಲ್ಲ, ಇದು ಸರಿ ಇಲ್ಲ ಎಂದು ತಕರಾರು ಮಾಡುತ್ತಾರೆ' ಎಂದು ಆ ವ್ಯಕ್ತಿ ವಿವರಿಸಿದ್ದಾರೆ.

ಮತ್ತೊಬ್ಬ ವ್ಯಕ್ತಿ, 'ಕಡಿಮೆ ಆಗುವುದಿಲ್ಲವಾ' ಎಂದು ಪ್ರಶ್ನಿಸುತ್ತಾರೆ. ಆಗ ಮೊದಲ ವ್ಯಕ್ತಿ, 'ಅಯ್ಯೋ, ಆಗುವುದಿಲ್ಲ. ಕಡಿಮೆ ಎಂದು ಹೇಳಿದರೆ, ನಾವೇ ದುಡ್ಡು ಹೊಡೆದಿದ್ದೇವೆ ಎಂದು ಕಮಿಷನರ್ ಅಂದುಕೊಳ್ಳುತ್ತಾರೆ. ಅವರ ಲೆಕ್ಕಾಚಾರವೇ ಬೇರೆ ಇರುತ್ತದೆ. ಪ್ರಭಾವಿಗಳ ಬೆಂಬಲವಿದ್ದರೆ ಕಡಿಮೆ ಆಗಬಹುದು' ಎನ್ನುತ್ತಾರೆ. ಅಲ್ಲಿಗೆ ಆಡಿಯೊ ಮುಗಿಯುತ್ತದೆ.

'ನನ್ನ ಹೆಸರು ದುರ್ಬಳಕೆ'

ಒಂದನೇ ಪುಟದಿಂದ...

'ಅಬಕಾರಿ ಸೂಪರಿಂಟೆಂಡೆಂಟ್ ತಮ್ಮಣ್ಣ ಅವರು ಮಾತನಾಡಿದ ಆಡಿಯೊ ಇದೆಯಂತೆ. ಪ್ರಕರಣದಲ್ಲಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸೂಚಿಸಿದ್ದೇನೆ. ಇಲಾಖೆಯಲ್ಲಿನ ಭ್ರಷ್ಟಾಚಾರ ನಿಯಂತ್ರಣಕ್ಕೆ ಹಲವು ಬದಲಾವಣೆಗಳನ್ನು ಮಾಡಲಾಗಿದೆ' ಎಂದು ಹೇಳಿದರು.

'ಬಿಜೆಪಿ ಮುಖಂಡರು ಆರೋಪಿಸುವ ಮುನ್ನ ಸತ್ಯಾಸತ್ಯತೆ ತಿಳಿಯಬೇಕು' ಎಂದರು.

'ನಾವು ಪ್ರಬಲ ವಿರೋಧಪಕ್ಷ'

'ಬಿಜೆಪಿಯು ಪ್ರಬಲ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಿದೆ. ಈ ಸರ್ಕಾರದ ಸಾವಿರಾರು ಕೋಟಿ ಮೊತ್ತದ ಹಲವು ಹಗರಣಗಳನ್ನು ಬಯಲಿಗೆ ಎಳೆದಿದ್ದೇವೆ' ಎಂದು ಅಶೋಕ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಸಿದ್ದರಾಮಯ್ಯ ಅವರ ಪತ್ನಿಗೆ ಮುಡಾ ನೀಡಿದ್ದ 14 ನಿವೇಶನಗಳನ್ನು ವಾಪಸ್ ಕೊಡಿಸಿದ್ದು ನಾವು. ಮುಡಾದಲ್ಲಿ ನಡೆದಿದ್ದ ಸಾವಿರಾರು ಕೋಟಿ ರೂಪಾಯಿಯ ಅಕ್ರಮ ಬಗ್ಗೆ ನಮ್ಮಿಂದಾಗಿಯೇ ತನಿಖೆ ನಡೆಯುತ್ತಿದೆ. ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆಯಾಗಿದ್ದ ಪ್ರಕರಣದಲ್ಲೂ, ಸರ್ಕಾರ ಹಣ ವಸೂಲಿ ಮಾಡಿದ್ದು ನಮ್ಮಿಂದಾಗಿಯೇ' ಎಂದರು.

'ಗೃಹಲಕ್ಷ್ಮಿ ಯೋಜನೆಯ ಹಣದಲ್ಲಿ ಸಚಿವರು ಸದನದಲ್ಲಿ ತಪ್ಪೊಪ್ಪಿಕೊಳ್ಳುವಂತೆ ಮತ್ತು ₹5,000 ಕೋಟಿಯ ಲೆಕ್ಕ ಸಿಗುವಂತೆ ಮಾಡಿದ್ದೂ ನಾವೇ. ಈಗ ಅಬಕಾರಿ ಸನ್ನದು ಹಗರಣವನ್ನೂ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ' ಎಂದು ಉತ್ತರಿಸಿದರು.

ಉಡುಪಿಯ ಕೃಷ್ಣ ಮಠದಲ್ಲಿ ಅದ್ದೂರಿ ಪರ್ಯಾಯ ಮಹೋತ್ಸವ

ಶೀರೂರು ಶ್ರೀ ಸರ್ವಜ್ಞ ಪೀಠಾರೋಹಣ

ಪ್ರಜಾವಾಣಿ ವಾರ್ತೆ

ಉಡುಪಿ: ಶೀರೂರು ಮಠಾಧೀಶ ವೇದವರ್ಧನತೀರ್ಥ ಶ್ರೀಪಾದರು ಭಾನುವಾರ ಬೆಳಗಿನ ಜಾವದ ಶುಭ ಮುಹೂರ್ತದಲ್ಲಿಸರ್ವಜ್ಞ ಪೀಠಾರೋಹಣ ಮಾಡುವ ಮೂಲಕ ಪ್ರಥಮ ಪರ್ಯಾಯ ಆರಂಭಿಸಿದರು.

ಪರ್ಯಾಯ ಪೂಜಾಧಿಕಾರವನ್ನು ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರು ಶೀರೂರು ಶ್ರೀಗಳಿಗೆ ಹಸ್ತಾಂತರಿಸಿದರು. ಮುಂದಿನ ಎರಡು ವರ್ಷಗಳು ವೇದವರ್ಧನತೀರ್ಥ ಶ್ರೀಪಾದರು ಶ್ರೀಕೃಷ್ಣನ ಪೂಜೆ ಮಾಡಲಿದ್ದಾರೆ.

ನಗರದ ಜೋಡುಕಟ್ಟೆಯಿಂದ ಅದ್ದೂರಿ ಮೆರವಣಿಗೆಯ ಮೂಲಕ ಕೃಷ್ಣಮಠ ಪ್ರವೇಶಿಸಿದ ಶೀರೂರು ಶ್ರೀಗಳನ್ನು ಸುಗುಣೇಂದ್ರತೀರ್ಥ ಶ್ರೀಪಾದರು ಹಾಗೂ ಪುತ್ತಿಗೆ ಕಿರಿಯ ಶ್ರೀ ಸುಶ್ರೀಂದ್ರತೀರ್ಥ ಶ್ರೀಪಾದರು ಸ್ವಾಗತಿಸಿದರು.

ಶ್ರೀಕೃಷ್ಣ ದೇವರ ನೈರ್ಮಲ್ಯ ವಿಸರ್ಜನಾ ಪೂಜಾದಿಗಳನ್ನು ಮುಗಿಸಿದ ಪುತ್ತಿಗೆ ಉಭಯ ಶ್ರೀಪಾದರು, ವೇದವರ್ಧನತೀರ್ಥ ಶ್ರೀಪಾದರಿಗೆ ಶ್ರೀಕೃಷ್ಣ ಮುಖ್ಯಪ್ರಾಣ ದೇವರ ದರ್ಶನ ಮಾಡಿಸಿದರು.

ಬಳಿಕ ಚಂದ್ರಶಾಲೆಯಲ್ಲಿ ಶ್ರೀಗಂಧ ಲೇಪನಮಾಡಿ, ಮಧ್ವಾಚಾರ್ಯರ ಸನ್ನಿಧಿಯಲ್ಲಿ ಅಕ್ಷಯಪಾತ್ರೆ ಹಾಗೂ ಬೆಳ್ಳಿಯ ಸಟ್ಟುಗವನ್ನು ಹಸ್ತಾಂತರಿಸಿ, ಸರ್ವಜ್ಞ ಪೀಠದಲ್ಲಿ ಕೂರಿಸಿ ಶುಭ ಹಾರೈಸಿದರು. ಈ ವೇಳೆ ಮೈಸೂರು–ಕೊಡಗು ಕ್ಷೇತ್ರದ ಸಂಸದ, ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಇದ್ದರು.

ಶ್ರೀ ಕೃಷ್ಣ ಮುಖ್ಯಪ್ರಾಣ ದೇವರ ದರ್ಶನ ಪಡೆದ ಶೀರೂರು ಶ್ರೀಗಳು, ಇತರ ಮಠಾಧೀಶರೊಂದಿಗೆ ಅರಳು ಗದ್ದಿಗೆ ಸಾಂಪ್ರದಾಯಿಕ ದರ್ಬಾರ್ ನಡೆಸಿದರು.

ಬಳಿಕ ದರ್ಬಾರ್‌ನಲ್ಲಿ ಕೃಷ್ಣಾಪುರ ಮಠದ ವಿದ್ಯಾಸಾಗರತೀರ್ಥ ಶ್ರೀಪಾದರು, ಪಲಿಮಾರು ಮಠದ ಹಿರಿಯ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರು, ಪೇಜಾವರ ಮಠಾಧೀಶ ವಿಶ್ವಪ್ರಸನ್ನತೀರ್ಥ ಶ್ರೀಪಾದರು, ಕಾಣಿಯೂರು ಮಠದ ವಿದ್ಯಾವಲ್ಲಭತೀರ್ಥ ಶ್ರೀಪಾದರು, ಸೋದೆ ಮಠದ ವಿಶ್ವವಲ್ಲಭತೀರ್ಥ ಶ್ರೀಪಾದರು, ಅದಮಾರು ಮಠದ ಕಿರಿಯಶ್ರೀ ಈಶಪ್ರಿಯತೀರ್ಥ ಶ್ರೀಪಾದರು, ಫಲಿಮಾರು ಮಠದ ಕಿರಿಯ ಶ್ರೀವಿದ್ಯಾರಾಜೇಶ್ವರತೀರ್ಥ ಶ್ರೀಪಾದರು ಪಾಲ್ಗೊಂಡಿದ್ದರು.

ದರ್ಬಾರ್ ಮುಗಿದ ಬಳಿಕ ಶೀರೂರು ಶ್ರೀಗಳು ಪ್ರಥಮ ಪರ್ಯಾಯದ ಮೊದಲ ಕೃಷ್ಣ ಪೂಜೆ ನೆರವೇರಿಸಿದರು. ನೂರಾರು ಭಕ್ತರು ಅದಕ್ಕೆ ಸಾಕ್ಷಿಯಾದರು.

ತಿಮ್ಮಪ್ಪನ ಗುಡ್ಡದಲ್ಲಿ ಕಲ್ಲುಗಣಿಗಾರಿಕೆ

ಮೂರು ಸಾವಿರ ಎಕರೆಯ ಕುರುಚಲು ಕಾಡಿನ ಜೀವವೈವಿಧ್ಯಕ್ಕೆ ಕಂಟಕ ಆರೋಪ

● ಸಿ.ಶಿವಾನಂದ

ಮುಖ್ಯಾಂಶಗಳು

- ಹಗರಿಬೊಮ್ಮನ ಹಳ್ಳಿಯಿಂದ 10 ಕಿ.ಮೀ ದೂರದ ಗುಡ್ಡ
- ಆರು ತಿಂಗಳಿಂದ ನಡೆಯುತ್ತಿರುವ ಕಲ್ಲು ಗಣಿಗಾರಿಕೆ
- ಹಲವು ವನ್ಯಜೀವಿಗಳ ಆವಾಸಸ್ಥಾನ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಜೀವವೈವಿಧ್ಯದ ತಾಣವಾಗಿರುವ ತಾಲ್ಲೂಕಿನ ಆನೇಕಲ್ಲು ಗ್ರಾಮ ಸಮೀಪದ ಐತಿಹಾಸಿಕ ಗುಡ್ಡದ ತಿಮ್ಮಪ್ಪನ ದೇವಸ್ಥಾನದ ಅರಣ್ಯ ಪ್ರದೇಶದಲ್ಲಿ ಸ್ಫೋಟಕಗಳನ್ನು ಬಳಸಿ ಕಲ್ಲು ಗಣಿಗಾರಿಕೆ ನಡೆಸಲಾಗುತ್ತಿದೆ.

ಹೊಸಪೇಟೆ ಪ್ರಾದೇಶಿಕ ವಲಯಕ್ಕೆ ಸೇರಿದ ದಶಮಾಪುರ ಗಸ್ತು ಕಾಯ್ದಿಟ್ಟ ಅರಣ್ಯ ಪ್ರದೇಶ ಇದಾಗಿದ್ದು, ಮೂರು ಸಾವಿರ ಎಕರೆ ಪ್ರದೇಶದಲ್ಲಿ ಕುರುಚಲು ಕಾಡು ಇದೆ. ಗಣಿಗಾರಿಕೆಯಿಂದ ಪರಿಸರಕ್ಕೆ ಹಾನಿ ಜೊತೆಗೆ, ವನ್ಯಜೀವಿಗಳಿಗೆ ತೊಂದರೆಯಾಗುತ್ತಿದೆ.

ಈ ಪ್ರದೇಶದಲ್ಲಿ ಅಪರೂಪದ ಸೈಕಾಸ್ ಪ್ರಭೇದದ ಸಸ್ಯಗಳು, ಔಷಧೀಯ ಗುಣದ ಕಾರೆಹಣ್ಣು, ಬಿಕ್ಕೆಹಣ್ಣು, ಕವಳೆಹಣ್ಣುಗಳ ಗಿಡಗಳು ನೈಸರ್ಗಿಕವಾಗಿ ಬೆಳೆದಿವೆ.

ಚಿರತೆ, ಕರಡಿ, ತೋಳ, ನರಿ, ಚಿಪ್ಪು ಹಂದಿ, ಮುಳ್ಳು ಹಂದಿ, ಕಾಡು ಹಂದಿ, ಕಾಡು ಬೆಕ್ಕು, ಕೊಂಡುಕುರಿ, ಪುನುಗು ಬೆಕ್ಕು, ಉಡ ಸೇರಿದಂತೆ ಹಲವು ಕಾಡುಪ್ರಾಣಿಗಳ ಆವಾಸ ಸ್ಥಾನ ಇದಾಗಿದೆ. ವಲಸೆ ಬಾನಾಡಿಗಳು, ಹಲವು ಬಗೆಯ ಚಿಟ್ಟೆಗಳೂ ಕಂಡು ಬರುತ್ತವೆ.

‘ಇಲ್ಲಿ ಕಲ್ಲುಗಣಿಗಾರಿಕೆ ಸ್ಥಗಿತಗೊಂಡರೆ ಮಾತ್ರ ಜೀವವೈವಿಧ್ಯದ ಉಳಿವು ಸಾಧ್ಯ’ ಎನ್ನುತ್ತಾರೆ ಪರಿಸರ ಪ್ರೇಮಿ ಕೊಟ್ರೇಶ್ ತಳವಾರ.

ಈ ಪ್ರದೇಶದಲ್ಲಿ ಆರು ತಿಂಗಳಿನಿಂದ ಕಲ್ಲುಗಣಿಗಾರಿಕೆ ನಡೆಯುತ್ತಿದೆ. ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂಬುದು ಪರಿಸರವಾದಿಗಳ ಒತ್ತಾಯ.



ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಆನೇಕಲ್ಲು ಗ್ರಾಮ ಸಮೀಪದ ಗುಡ್ಡದ ತಿಮ್ಮಪ್ಪನ ದೇವಸ್ಥಾನದ ಬಳಿ ಕಲ್ಲು ಗಣಿಗಾರಿಕೆಗಾಗಿ ಸ್ಫೋಟಿಸಲಾಯಿತು

ತಿಮ್ಮಪ್ಪನ ಗುಡ್ಡದ ಬಳಿ ಕಲ್ಲುಗಣಿಗಾರಿಕೆಗೆ ಅನುಮತಿ ನೀಡಿಲ್ಲ. ಈ ಕುರಿತು ಪರಿಶೀಲನೆಗೆ ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳನ್ನು ಕಳುಹಿಸಲಾಗುವುದು

ಆರ್.ಕವಿತಾ, ತಹಶೀಲ್ದಾರ್

ತಾಲ್ಲೂಕಿನಲ್ಲಿ 14 ಸಾವಿರ ಎಕರೆ ಅರಣ್ಯ ಇದೆ. ಆದರೆ ಅರಣ್ಯ ಇಲಾಖೆ ಕಚೇರಿ ಇಲ್ಲ. ಕಚೇರಿ ಸ್ಥಾಪಿಸಿ ಅರಣ್ಯ ಮತ್ತು ವನ್ಯಜೀವಿಗಳನ್ನು ರಕ್ಷಿಸಬೇಕು

ಜಿ.ಪ್ರವೀಣ್‌ಕುಮಾರ್, ಹಂಪಾಪಟ್ಟಣ ನಿವಾಸಿ

ಒಪಿಎಸ್ ಜಾರಿಗೊಳಿಸದಿದ್ದರೆ ಬಂದ್

ಕರ್ನಾಟಕ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಹಳೇ ಪಿಂಚಣಿ ಯೋಜನೆ (ಒಪಿಎಸ್) ಮರು ಜಾರಿ ಕುರಿತು ಸರ್ಕಾರ ನಿರ್ಧಾರ ಕೈಗೊಳ್ಳದಿದ್ದರೆ, ಅನಿವಾರ್ಯವಾಗಿ ರಾಜ್ಯವ್ಯಾಪಿ ಸರ್ಕಾರಿ ಕಚೇರಿ ಬಂದ್ ಮಾಡಿ ಪ್ರತಿಭಟನೆ ನಡೆಸಬೇಕಾದಿತು’ ಎಂದು ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಎಚ್ಚರಿಸಿದರು.

ನಗರದಲ್ಲಿ ಭಾನುವಾರ ನಡೆದ ‘ಅಖಿಲ ಕರ್ನಾಟಕ ಎನ್‌ಪಿಎಸ್ ನೌಕರರ ಸಂಘ’ದ 2ನೇ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

‘ನಮ್ಮ ಹೋರಾಟ ಪ್ರವಾಹದ ರೀತಿ ಇರಬೇಕು. ಹೋರಾಟದ ಕಾರಣಕ್ಕೆ ನನ್ನನ್ನು ಅಮಾನತು ಮಾಡಿದರೂ, ಬಂಧಿಸಿದರೂ ಹೆದರುವುದಿಲ್ಲ. ಯಾರ ಬೆದರಿಕೆಗಳಿಗೂ ನಾನು ಬಗ್ಗುವುದಿಲ್ಲ’ ಎಂದು ಅವರು ಇಲ್ಲಿ ಹೇಳಿದರು.

‘ರಾಜಸ್ಥಾನ, ಛತ್ತೀಸಗಢ, ಹಿಮಾಚಲ ಪ್ರದೇಶ, ಪಂಜಾಬ್, ಜಾರ್ಖಂಡ್ ರಾಜ್ಯಗಳಲ್ಲಿ ಹಳೆ ಪಿಂಚಣಿ ಯೋಜನೆ ಜಾರಿ ಆಗಿದೆ. ತೆಲಂಗಾಣ, ಆಂಧ್ರಪ್ರದೇಶಗಳಲ್ಲಿ ಗ್ಯಾರಂಟಿ ಪೆನ್ಷನ್ ಸ್ಕೀಮ್ ಜಾರಿ ಆಗಿದೆ. ನಮ್ಮಲ್ಲೂ ಒಪಿಎಸ್ ಜಾರಿಯಾಗಲೇಬೇಕು’ ಎಂದು ಆಗ್ರಹಿಸಿದರು.

‘ಸಂಧಾನವಾದರೂ ಸರಿ, ಸಮರವಾದರೂ ಸರಿ ಒಪಿಎಸ್ ಜಾರಿಯಾಗಲೇಬೇಕು. ಇದಕ್ಕಾಗಿ ಹೋರಾಟ ನಿರಂತರವಾಗಿರಲಿದೆ’ ಎಂದು ಎಕೆಎನ್‌ಪಿಎಸ್ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ನಾಗನಗೌಡ ಎಂ.ಎ. ಹೇಳಿದರು.

ಎನ್‌ಪಿಎಸ್ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಶಿವಣ್ಣ, ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ವೀರೇಶ್ ಎಸ್. ಒಡೇನಪುರ, ತಮಿಳುನಾಡಿನ ಎನ್‌ಪಿಎಸ್‌ನ ಸಂಚಾಲಕರಾದ ಫೆಡ್ರಿಕ್, ಸೆಲ್ವಕುಮಾರ್ ಸೇರಿದಂತೆ ಎಕೆಎನ್‌ಪಿಎಸ್ ಹಾಗೂ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.



ಎನ್‌ಪಿಎಸ್ ನೌಕರರ ಸಂಘದ ಕಾರ್ಯಕಾರಿಣಿ ಸಭೆಯನ್ನು ಸಿ.ಎಸ್. ಷಡಾಕ್ಷರಿ ಹಾಗೂ ಮುಖಂಡರು ದೀಪ ಬೆಳಗಿಸಿ ಉದ್ಘಾಟಿಸಿದರು —ಪ್ರಜಾವಾಣಿ ಚಿತ್ರ

ಬಂದ್ ವೇಳೆ ಅಧಿಕಾರಿಗಳೇನಾದರೂ ಕಚೇರಿಗೆ ಹೋಗಿ ಕುಳಿತರೆ ಕೊರಳಪಟ್ಟಿ ಹಿಡಿದು ಹೊರದಬ್ಬಬೇಕು. ಈ ವಿಷಯದಲ್ಲಿ ಮುಲಾಜಿಲ್ಲ. ಇದರಲ್ಲಿ ನಮ್ಮ ಬದುಕಿದೆ

ಸಿ.ಎಸ್.ಷಡಾಕ್ಷರಿ, ಅಧ್ಯಕ್ಷ, ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕ

‘ಸಂವಿಧಾನದ ಅನ್ವಯ ಅಧಿವೇಶನ’

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಮೈಸೂರು: ‘ಅಧಿವೇಶನ ಕರೆದಿರುವುದು ರಾಜಕೀಯ ದುರ್ಬಳಕೆ’ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ಹೊಸ ವರ್ಷದಲ್ಲಿ ಜಂಟಿ ಅಧಿವೇಶನ ಕಡ್ಡಾಯವಾಗಿ ಕರೆಯಬೇಕೆಂದು ಸಂವಿಧಾನ ಸ್ಪಷ್ಟವಾಗಿ ಹೇಳಿದೆ. ಅದಕ್ಕಾಗಿ ಕರೆದಿದ್ದೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಮ–ನರೇಗಾ ಮೂಲಕ ಗ್ರಾಮೀಣರಿಗೆ ಉದ್ಯೋಗ ಖಾತ್ರಿ ಇತ್ತು. ಶಿಕ್ಷಣ, ಮಾಹಿತಿ ಹಾಗೂ ಆಹಾರ ಭದ್ರತೆ ತಂದಿದ್ದು ಯುಪಿಎ ಸರ್ಕಾರ. ಅದನ್ನು ಹಾಳು ಮಾಡಲು ಹೊರಟಿಸುವುದನ್ನು ಖಂಡಿಸಲು ವಿಶೇಷ ಅಧಿವೇಶನ ಕರೆಯಲಾಗಿದೆ’ ಎಂದು ಹೇಳಿದರು.

ಸರ್ಪದ ಚಿತ್ರವಿರುವ ಅವಶೇಷ ಪತ್ತೆ

ಪ್ರಜಾವಾಣಿ ವಾರ್ತೆ

ಗದಗ: ಐತಿಹಾಸಿಕ ಲಕ್ಕುಂಡಿ ಕೋಟೆ ವೀರಭದ್ರೇಶ್ವರ ದೇವಸ್ಥಾನ ಆವರಣದಲ್ಲಿ ಉತ್ಖನನ ವೇಳೆ ಸರ್ಪದ ಚಿತ್ರವಿರುವ ಅವಶೇಷ, ತಾಮ್ರದ ಘಂಟೆ, ಮಣ್ಣಿನ ಧೂಪದಾರತಿಯ ವಸ್ತು ಗೋಚರಿಸಿವೆ.


38 ಕಾರ್ಮಿಕರು ಒಂದೂವರೆ ಅಡಿ ಆಳದವರೆಗೆ ಮಣ್ಣು ತೆಗೆದಿದ್ದು, ಚೌಕ ಆಕಾರದ ಒಟ್ಟು 4 ರಚನೆಗಳ ಪೈಕಿ ಒಂದರಲ್ಲಿ ಈ ಪುರಾತನ ವಸ್ತುಗಳು ದೊರೆತಿವೆ.

ಹಳೆಯ ಪ್ರೌಢಶಾಲಾ ಕಟ್ಟಡ ತೆರವುಗೊಳಿಸಿದಾಗ, ಅದರ ಹಿಂದೆ ಕೋಟೆ ಗೋಡೆಯು ಕಂಡಿದೆ. ಗೋಡೆಯಲ್ಲಿ ಒಂದು ಶಿವಲಿಂಗದ ಮೂರ್ತಿಯೂ ಪತ್ತೆಯಾಗಿದೆ. ಅದು ಪುರಾತನ ಕಾಲದ್ದೊ ಅಥವಾ ಇತ್ತೀಚಿನದ್ದೊ ಎನ್ನುವ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ.

ಶನಿವಾರ ಪತ್ತೆಯಾದ ಶಿವಲಿಂಗದ ಪೀಠ ಅಥವಾ ಪಾಣಿಬಟ್ಟಲು, ಭಾನುವಾರ ಪತ್ತೆಯಾದ ಪ್ರಾಚ್ಯ ಅವಶೇಷಗಳು ಯಾವ ಕಾಲಕ್ಕೆ ಸೇರಿವೆ ಎಂಬುದು ತಜ್ಞರ ಸಂಶೋಧನೆಯ ಬಳಿಕವಷ್ಟೇ ತಿಳಿಯಲಿದೆ ಎಂದು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ಇತಿಹಾಸ ತಜ್ಞೆ ಹನುಮಾಕ್ಷಿ ಗೋಗಿ ಮಾತನಾಡಿ, ‘ಈ ಕೋಟೆಯು 300 ವರ್ಷಗಳಷ್ಟು ಹಳೆಯದಾಗಿದ್ದು, ವೀರಭದ್ರೇಶ್ವರ ದೇವಾಲಯದ ರಕ್ಷಣೆಗಾಗಿ ನಿರ್ಮಿಸಿರಬಹುದು’ ಎಂದು ಅಭಿಪ್ರಾಯಪಟ್ಟಿದ್ದಾರೆ.

‘ಎಂಟು ತಾಣಗಳು ಸಂರಕ್ಷಿತ ಸ್ಮಾರಕ’



ಎಚ್‌.ಕೆ. ಪಾಟೀಲ

ಲಕ್ಕುಂಡಿ ಗ್ರಾಮದ 16 ತಾಣಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕಗಳು ಎಂದು ಘೋಷಿಸಲಾಗಿದೆ. ಜತೆಗೆ ಇನ್ನೂ ಎಂಟು ದೇವಸ್ಥಾನಗಳನ್ನು ಫೆಬ್ರುವರಿ ಅಂತ್ಯದೊಳಗೆ ಸಂರಕ್ಷಿತ ಸ್ಮಾರಕಗಳಾಗಿ ಘೋಷಣೆ ಮಾಡಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ ಹೇಳಿದರು.

‘ಇನ್ನೂ 20 ದೇವಸ್ಥಾನಗಳ ಸೇರ್ಪಡೆ ಸಂಬಂಧ ತಿಂಗಳಲ್ಲಿ ಪ್ರಸ್ತಾವ ಸಲ್ಲಿಸುವಂತೆ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಸೂಚಿಸಲಾಗಿದೆ’ ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

ಲಕ್ಕುಂಡಿಯಲ್ಲಿ ಸಿಕ್ಕಿದ್ದ ನಿಧಿಯನ್ನು ಸರ್ಕಾರಕ್ಕೆ ಒಪ್ಪಿಸಿದ ಪ್ರಜ್ವಲ್ ರಿತ್ತಿ ಕುಟುಂಬಕ್ಕೆ ಉದ್ಯೋಗ ಮತ್ತು ಮನೆ ನೀಡುವ ಕುರಿತು ಆದೇಶದ ಪತ್ರಗಳನ್ನು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹಸ್ತಾಂತರಿಸಲಾಗುವುದು ಎಂದರು.



ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ಭಾನುವಾರ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮುಸ್ಲಿಂ ಸಮುದಾಯದ 121 ಜೋಡಿಗಳು ದಾಂಪತ್ಯಕ್ಕೆ ಕಾಲಿರಿಸಿದವು

121 ಮುಸ್ಲಿಂ ಜೋಡಿಯ ವಿವಾಹ

ಪ್ರಜಾವಾಣಿ ವಾರ್ತೆ

ಮಾನ್ವಿ (ರಾಯಚೂರು ಜಿಲ್ಲೆ): ಪಟ್ಟಣದ ಅಕ್ಬರಿ ಮಸೀದಿಯಲ್ಲಿ ಭಾನುವಾರ ಪ್ರಥಮ ದರ್ಜೆ ಸಿವಿಲ್ ಗುತ್ತಿಗೆದಾರ ಸೈಯದ್ ಅಕ್ಬರ್ ಪಾಷಾ ಅವರು ತಮ್ಮ ಪುತ್ರನ ಮದುವೆ ಅಂಗವಾಗಿ ದಾರುಸ್ಸಲಾಂ ಫೌಂಡೇಶನ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸಾಮೂಹಿಕ ಮದುವೆಯಲ್ಲಿ ಮುಸ್ಲಿಂ ಸಮುದಾಯದ 121 ಜೋಡಿಗಳು ದಾಂಪತ್ಯಕ್ಕೆ ಪದಾರ್ಪಣೆ ಮಾಡಿದವು.

ರಾಜ್ಯದಲ್ಲೇ ಇದೇ ಮೊದಲ ಬಾರಿಗೆ ಮುಸ್ಲಿಂ ಸಮುದಾಯದ ಅತಿ ಹೆಚ್ಚಿನ ಸಂಖ್ಯೆಯ ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮವಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ರಾಯಚೂರು, ಕೊಪ್ಪಳ, ಯಾದಗಿರಿ, ಬಳ್ಳಾರಿ, ಬಾಗಲಕೋಟೆ, ವಿಜಯಪುರ, ಉತ್ತರ ಕನ್ನಡ ಜಿಲ್ಲೆಯ ಮುಸ್ಲಿಂ ವಧು–ವರರು ದಾಂಪತ್ಯ ಜೀವನಕ್ಕೆ ಪದಾರ್ಪಣೆ ಮಾಡಿದರು.

ಗವಿಮಠದ ಮಹಾದಾಸೋಹಕ್ಕೆ ಅರ್ಪಿಸಿದ ಅಕ್ಕಿ ಹೊತ್ತು 16 ಕಿ.ಮೀ ನಡೆದ ಯುವಕ

50 ಕೆ.ಜಿ. ಅಕ್ಕಿಚೀಲ ಹೊತ್ತು ಪಾದಯಾತ್ರೆ

● ಪ್ರಮೋದ ಕುಲಕರ್ಣಿ

ಕೊಪ್ಪಳ: ಗವಿಮಠದ ಜಾತ್ರಾ ಮಹೋತ್ಸವದ ಮಹಾ-ದಾಸೋಹಕ್ಕಾಗಿ ತಾಲ್ಲೂಕಿನ ತಾಳಕನಕಾಪುರದ ನಿವಾಸಿ, 31 ವರ್ಷದ ಯುವಕ ಸಣ್ಣದುರ್ಗಪ್ಪ ಪರಿವಾರ್ 50 ಕೆ.ಜಿ. ತೂಕದ ಅಕ್ಕಿಚೀಲದ ಮೂಟೆಯನ್ನು ಹೊತ್ತು 16 ಕಿ.ಮೀ. ಪಾದಯಾತ್ರೆ ಮಾಡಿದ್ದಾರೆ.

ಮಹಾದಾಸೋಹ ಜ. 1ರಂದು ಪ್ರಾರಂಭವಾಗಿ ಭಾನುವಾರ ಮುಕ್ತಾಯವಾಯಿತು. ಹರಟುವಾಗ ಸ್ನೇಹಿತರು ಹಾಕಿದ ಸವಾಲು ಸ್ವೀಕರಿಸಿದ ಯುವಕ ಐದು ತಾಸು, ಅಕ್ಕಿಯ ಮೂಟೆಯನ್ನು ಹೊತ್ತು ಗವಿಮಠ ತಲುಪಿದರು.

ತಾಳಕನಕಾಪುರದಿಂದ ಭಾನುವಾರ ಬೆಳಿಗ್ಗೆ 6.40ಕ್ಕೆ ಪಾದಯಾತ್ರೆ ಆರಂಭಿಸಿದ ಯುವಕ ನಿರಂತರ 13 ಕಿ.ಮೀ. ನಡೆದು ಕೊಪ್ಪಳ ಸಮೀಪ ಬಂದಾಗ ಭಾರ ಇಳಿಸಿ ಎಳನೀರು ಸೇವಿಸಿದರು. ಹತ್ತು ನಿಮಿಷ ವಿಶ್ರಾಂತಿ ಪಡೆದು ಉಳಿದ ಮೂರು ಕಿ.ಮೀ. ಕ್ರಮಿಸಿದ್ದು, ಬೆಳಿಗ್ಗೆ 11.40ರ ಸುಮಾರಿಗೆ ಗವಿಮಠವನ್ನು ತಲುಪಿದರು.



50 ಕೆ.ಜಿ. ತೂಕದ ಮೂಟೆ ಹೊತ್ತು ಸಣ್ಣದುರ್ಗಪ್ಪ ಗವಿಮಠಕ್ಕೆ ಬಂದ ಕ್ಷಣ —ಪ್ರಜಾವಾಣಿ ಚಿತ್ರ

ಒಂದೆಡೆ ಬಿಸಿಲು, ಮತ್ತೊಂದೆಡೆ ರಸ್ತೆಯಲ್ಲಿ ವಾಹನ ಸಂಚಾರದ ಅಡೆತಡೆಗಳನ್ನು ದಾಟಿ ಜೊತೆಯಲ್ಲಿದ್ದ ಸ್ನೇಹಿತರು ಹಾಗೂ ಗವಿಮಠದ ಮೇಲಿನ ಭಕ್ತಿಯಿಂದಾಗಿ ಮೂಟೆ ಹೊರುವ ಸಂಕಲ್ಪ ಪೂರ್ಣಗೊಳಿಸಿದ್ದಾರೆ. ವಿಷಯ ತಿಳಿದ ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಸಣ್ಣದುರ್ಗಪ್ಪ ಅವರನ್ನು ಸನ್ಮಾನಿಸಿದರು.

ಸಣ್ಣದುರ್ಗಪ್ಪ ಹಿಂದೆ ತಮ್ಮೂರಿನಿಂದ ಮೂರ್ನಾಲ್ಕು ಕಿ.ಮೀ. ದೂರವಿರುವ ಗ್ರಾಮಗಳಿಗೆ ರಸಗೊಬ್ಬರದ ಚೀಲಗಳನ್ನು ಹೊತ್ತು ಇದೇ ರೀತಿಯ ಸಾಹಸ ಮಾಡಿದ್ದರು.

‘ಮೂಟೆ ಹೊತ್ತು ಹೋಗಲು ಸಾಧ್ಯವಿಲ್ಲ ಎಂದು ನಮ್ಮೂರಿನಲ್ಲಿ ಗೇಲಿಮಾಡಿದ್ದರು. ಸವಾಲನ್ನು ಸ್ವೀಕರಿಸಲು ರಾತ್ರೋ ರಾತ್ರಿ ನಿರ್ಧರಿಸಿ ಬೆಳಿಗ್ಗೆ ಪಾದಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿದ್ದೇನೆ’ ಎಂದು ಹೇಳಿದಾಗ ಮೊಗದಲ್ಲಿ ಸಂತಸವಿತ್ತು.

28 ಲಕ್ಷ ಜನರಿಗೆ ದಾಸೋಹ

ಗವಿಮಠದ ಜಾತ್ರೆಯ ಮಹಾದಾಸೋಹದ 18 ದಿನಗಳಲ್ಲಿ ಕನಿಷ್ಠ 28ರಿಂದ 30 ಲಕ್ಷ ಭಕ್ತರು ಊಟ ಮಾಡಿದ್ದಾರೆ. ‘ಈ ಬಾರಿ ಜಾತ್ರೆಯ ಆರಂಭದಿಂದ ಕೊನೆ ದಿನದ ತನಕವೂ ಸತತವಾಗಿ ಭಕ್ತರು ಬಂದಿದ್ದಾರೆ. 18ರಿಂದ 20 ಲಕ್ಷ ಜೋಳದ ರೊಟ್ಟಿಗಳು ಖರ್ಚಾಗಿವೆ’ ಎಂದು ಗವಿಮಠದ ದಾಸೋಹದ ಉಸ್ತುವಾರಿ ರಾಮನಗೌಡರ್ ತಿಳಿಸಿದ್ದಾರೆ.

ಅಧಿವೇಶನ ಬಳಿಕ ಸಂದೇಶ: ಡಿಕೆಶಿ ಬಣ ವಿಶ್ವಾಸ

ರಾಹುಲ್ ಗಾಂಧಿ ಅವರ ಭೇಟಿಗೆ ಭಾನುವಾರವೂ ಸಿಗದ ಅವಕಾಶ

• ಡಿ.ಕೆ. ಶಿವಕುಮಾರ್ ಬೆಂಗಳೂರಿಗೆ ಇಂದು ವಾಪಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಕಾಂಗ್ರೆಸ್ ಸರ್ಕಾರದ ಅಧಿಕಾರ ಹಸ್ತಾಂತರ ಗೊಂದಲ ಬಗೆಹರಿಸುವ ಸಂಬಂಧ ಫೆಬ್ರುವರಿ ಮೊದಲ ವಾರದಲ್ಲಿ ಹೈಕಮಾಂಡ್‌ನಿಂದ ಸಂದೇಶ ಬರಲಿದೆ ಎಂಬ ಅಮಿತ ವಿಶ್ವಾಸದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಣ ತಾಳಿದೆ.

ಎರಡೂವರೆ ವರ್ಷಗಳ ಹಿಂದೆ ಕೊಟ್ಟ ಮಾತಿನಂತೆ ಅಧಿಕಾರ ಹಂಚಿಕೆ ಬಗ್ಗೆ ಸ್ಪಷ್ಟ ಸಂದೇಶವನ್ನು ಹೊತ್ತು ತರಲೇಬೇಕು ಎಂದು ನವದೆಹಲಿಯಲ್ಲಿ ವಾಸ್ತವ್ಯ ಹೂಡಿರುವ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಉನ್ನತ ನಾಯಕ ರಾಹುಲ್ ಗಾಂಧಿ ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡುವ ಅಭಿಲಾಷೆ ವ್ಯಕ್ತಪಡಿಸಿದ್ದರು. ಆದರೆ, ಭಾನುವಾರವೂ ಉಭಯ ನಾಯಕರ ಭೇಟಿ ಆಗಲಿಲ್ಲ.

ಶಿವಕುಮಾರ್ ಅವರು ಬೆಂಗಳೂರಿಗೆ ಸೋಮವಾರ ನಿರ್ಗಮಿಸಲಿದ್ದಾರೆ. ಅಸ್ಸಾಂ ಚುನಾವಣೆಗೆ ಪಕ್ಷದ ಹಿರಿಯ ವೀಕ್ಷಕರಾಗಿರುವ ಅವರು ಮಂಗಳವಾರ ಬೆಳಿಗ್ಗೆ ಗುವಾಹಟಿಗೆ ತೆರಳಲಿದ್ದಾರೆ. ಅಲ್ಲಿ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮತ್ತೆ ನವದೆಹಲಿಗೆ ಬರಲಿದ್ದಾರೆ. ಆಗ ರಾಹುಲ್ ಅವರನ್ನು ಕಂಡು ಮತ್ತೊಮ್ಮೆ ತಮ್ಮ ಮಹದಾಸೆಯನ್ನು ಹೇಳಿಕೊಳ್ಳುವ ಇರಾದೆಯಲ್ಲಿದ್ದಾರೆ.

'ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವ ಉದ್ದೇಶದಿಂದ ಇಲ್ಲಿಗೆ ಬಂದಿದ್ದೇನೆ' ಎಂದು ಶುಕ್ರವಾರ ಮಧ್ಯಾಹ್ನ ಹೇಳಿಕೆ ಕೊಟ್ಟಿದ್ದ ಶಿವಕುಮಾರ್ ಅವರು ಅಸ್ಸಾಂ ಚುನಾವಣಾ ಪೂರ್ವಸಿದ್ಧತಾ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಿಂದ ರಾಹುಲ್ ಬೇಗನೇ ನಿರ್ಗಮಿಸಿದ್ದರಿಂದ ಭೇಟಿ ಸಾಧ್ಯವಾಗಿರಲಿಲ್ಲ. ರಾಷ್ಟ್ರೀಯ ನಾಯಕನನ್ನು ಶನಿವಾರ ಭೇಟಿ ಮಾಡುವ ತವಕದಲ್ಲಿದ್ದರು. ಮಾಜಿ ಸಚಿವ ಭೀಮಣ್ಣ ಖಂಡ್ರೆ ಅಂತಿಮ ದರ್ಶನ ಪಡೆಯುವ ಸಂಬಂಧ ಶನಿವಾರ ಮಧ್ಯಾಹ್ನ ಬೀದರ್‌ಗೆ ತೆರಳಿದ್ದರು. ಅಲ್ಲಿಂದ ರಾತ್ರಿಯೇ ನವದೆಹಲಿಗೆ ಬಂದಿದ್ದ ಅವರು ಭಾನುವಾರದಿಂದ ಶತಪ್ರಯತ್ನ ನಡೆಸಿದರೂ ರಾಹುಲ್ ಭೇಟಿ ಭಾಗ್ಯ ಸಿಗಲಿಲ್ಲ. ಲೋಕಸಭೆಯ ವಿರೋಧ ಪಕ್ಷದ ನಾಯಕ ದೆಹಲಿಯಲ್ಲೇ ಇದ್ದರು. ರಾಹುಲ್ ಅವರು ಸೋಮವಾರ ಕೇರಳಕ್ಕೆ ತೆರಳಲಿದ್ದಾರೆ.

ಭಾನುವಾರ ಮಧ್ಯಾಹ್ನ ಕರ್ನಾಟಕ ಭವನಕ್ಕೆ ಬಂದ ಉಪ ಮುಖ್ಯಮಂತ್ರಿಯವರು ಖುಷಿಯಿಂದಲೇ ಪತ್ರಕರ್ತರ ಜತೆಗೆ ಹರಟಿದರು. ಮನರೇಗಾ ಹೋರಾಟದ ಕುರಿತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ನೇತೃತ್ವದಲ್ಲಿ ಸಂಜೆ ನಡೆದ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳ ಸಭೆಗೆ ಕರ್ನಾಟಕ ಭವನದಿಂದಲೇ 'ಜೂಮ್' ಮೂಲಕ ಪಾಲ್ಗೊಂಡರು.

'ಮೈಸೂರು ವಿಮಾನ ನಿಲ್ದಾಣದಲ್ಲಿ ರಾಹುಲ್ ಜತೆಗೆ ಶಿವಕುಮಾರ್ ಅವರು ಎರಡು ಬಾರಿ ಚರ್ಚಿಸಿದ್ದರು. ಎರಡೂವರೆ ವರ್ಷಗಳ ಹಿಂದೆ ಹೈಕಮಾಂಡ್ ನಾಯಕರು ಕೊಟ್ಟ ಮಾತನ್ನು ನೆನಪಿಸಿದ್ದರು. ತಮ್ಮ ಮನದಿಂಗಿತ ಹೇಳಿಕೊಂಡಿದ್ದರು. ಈ ಮಾತುಗಳನ್ನು ತಾಳ್ಮೆಯಿಂದಲೇ ಕೇಳಿಸಿಕೊಂಡಿದ್ದ ರಾಹುಲ್ ಅವರು ದೆಹಲಿಗೆ ಬಂದು ಭೇಟಿ ಮಾಡುವಂತೆ ಸಲಹೆ ನೀಡಿದ್ದರು. ವಿವಾದ ಬಗೆಹರಿಸಲು ರಾಷ್ಟ್ರೀಯ ನಾಯಕರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಫೆಬ್ರುವರಿ ಮೊದಲ ವಾರದಲ್ಲಿ ಹೈಕಮಾಂಡ್‌ನಿಂದ ಸಂದೇಶ ಬರಲಿದೆ' ಎಂದು ಶಿವಕುಮಾರ್ ಬಣ ವಿಶ್ವಾಸ ವ್ಯಕ್ತಪಡಿಸಿದೆ.

'ರಾಜ್ಯ ಕಾಂಗ್ರೆಸ್‌ನ ಬಣ ಜಗಳ ಬಗೆಹರಿಸಲು ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಡಿಸೆಂಬರ್‌ನಲ್ಲಿ ಪ್ರಾಥಮಿಕ ಹಂತದ ಚರ್ಚೆ ನಡೆಸಿದ್ದಾರೆ. ಈ ಮೂವರು ನಾಯಕರು ಮತ್ತೊಮ್ಮೆ ಸಭೆ ಸೇರಿ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಆ ಬಳಿಕ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರನ್ನು ಕರೆಸಿ ಮಾತುಕತೆ ನಡೆಸಲಿದ್ದಾರೆ. ಸಂಧಾನ ಸೂತ್ರ ಹೆಣೆದು ರಾಜ್ಯಕ್ಕೆ ವೀಕ್ಷಕರನ್ನು ಕಳುಹಿಸಲಿದ್ದಾರೆ. ರಾಜ್ಯದ ನಾಯಕರ ತೀರ್ಮಾನವನ್ನು ಶಾಸಕಾಂಗ ಪಕ್ಷದ ಸಭೆಯಲ್ಲೇ ತಿಳಿಸಲಿದ್ದಾರೆ. ಈ ಎಲ್ಲ ಪ್ರಕ್ರಿಯೆಗಳು 3-4 ದಿನಗಳಲ್ಲಿ ಮುಗಿದು ಹೋಗಲಿದೆ. ಆದರೆ, ಮೂವರು ಉನ್ನತ ನಾಯಕರು ಸಭೆ ಸೇರಲು ಮುಹೂರ್ತವನ್ನು ಮಾಡಬೇಕಷ್ಟೇ' ಎಂದು ಹೈಕಮಾಂಡ್ ಜತೆಗೆ ನಿಕಟ ಸಂಬಂಧ ಹೊಂದಿರುವ ನಾಯಕರೊಬ್ಬರು ತಿಳಿಸಿದರು.

ಸುರ್ಜೇವಾಲ ಭೇಟಿ ಮಾಡಿದ ಜಮೀರ್: ಇನ್ನೊಂದೆಡೆ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹರಿಯಾಣದಲ್ಲಿ ಭೇಟಿ ಮಾಡಿ ಸಮಾಲೋಚಿಸಿದರು. ಇದೇ ವೇಳೆ ರಾಜ್ಯದ ರಾಜಕೀಯ ವಿದ್ಯಮಾನಗಳ ಬಗ್ಗೆಯೂ ಪ್ರಮುಖವಾಗಿ ಪ್ರಸ್ತಾಪವಾಯಿತು ಎಂದು ಸಚಿವರ ಆಪ್ತ ಮೂಲಗಳು ತಿಳಿಸಿವೆ.

'ಕಾಲ ಎಲ್ಲದಕ್ಕೂ ಉತ್ತರ ಕೊಡಲಿದೆ'

'ನಾವು ದೆಹಲಿಗೆ ಬರುವುದೇ ಸರ್ಕಾರದ ಕೆಲಸಕ್ಕೆ, ಪಕ್ಷದ ಕೆಲಸಕ್ಕೆ ಹಾಗೂ ನಮ್ಮ ರಾಜಕಾರಣಕ್ಕೆ. ಹೈಕಮಾಂಡ್ ನಾಯಕರನ್ನು ಭೇಟಿ ಆಗಿರುವ ಬಗ್ಗೆ ಬಹಿರಂಗವಾಗಿ ಹೇಳುವುದಿಲ್ಲ. ಎಲ್ಲದಕ್ಕೂ ಕಾಲವೇ ಉತ್ತರ ನೀಡಲಿದೆ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಾವು ರಾಜಕಾರಣಿಗಳು. ಏನು ರಾಜಕಾರಣ ಮಾಡಬೇಕೋ ಅದೆಲ್ಲವನ್ನೂ ಮಾಡುತ್ತೇವೆ. ರಾಜಕಾರಣ ಮಾಡುವುದರಲ್ಲಿ ತಪ್ಪಿಲ್ಲ' ಎಂದರು.

'ಪ್ರತಿ ಕ್ಷೇತ್ರದಲ್ಲಿ 5 ಕಿ.ಮೀ. ಪಾದಯಾತ್ರೆ'

ನವದೆಹಲಿ: 'ಮನರೇಗಾ ಹೆಸರು ಬದಲಾವಣೆ ವಿರೋಧಿಸಿ ಪ್ರತಿ ಕ್ಷೇತ್ರದಲ್ಲಿಯೂ ಐದು ಕಿ.ಮೀ. ಪಾದಯಾತ್ರೆ ನಡೆಸಲಾಗುವುದು. ಪಂಚಾಯಿತಿ ಮಟ್ಟದಲ್ಲಿ ನಿರ್ಣಯ ತೆಗೆದುಕೊಳ್ಳಲಾಗುವುದು' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.


ಡಿ.ಕೆ. ಶಿವಕುಮಾರ್

ಭಾನುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಹೋರಾಟದ ರೂಪುರೇಷೆ ನಿರ್ಧರಿಸಲು ಎಲ್ಲ ಪಿಸಿಸಿ ಅಧ್ಯಕ್ಷರುಗಳ ಸಭೆ ಕರೆಯಲಾಗಿತ್ತು. ರಾಜ್ಯದಿಂದ ನಾನು ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಸಭೆಯಲ್ಲಿ ಭಾಗವಹಿಸಿದ್ದೆವು. ಪಾದಯಾತ್ರೆ ವಿಚಾರ ಹಾಗೂ ಹೋರಾಟ ಮಾದರಿ ಬಗ್ಗೆ ಈ ಮೊದಲೇ ತಿಳಿಸಲಾಗಿತ್ತು. ಭಾನುವಾರದ ಸಭೆಯಲ್ಲಿ ತೀರ್ಮಾನ ಮಾಡಲಾಯಿತು' ಎಂದರು.

'ಮನರೇಗಾ ಹೆಸರು ಬದಲಾವಣೆ ವಿರೋಧಿಸಿ ನಾವು ಹೋರಾಟ ಮಾಡುತ್ತೇವೆ. ಪಂಚಾಯಿತಿ ಸದಸ್ಯರ ಸಭೆ ಆಗಾಗ್ಗೆ ನಡೆಸಲಾಗಿದೆ. ಶಾಸಕರ, ವಿಧಾನಪರಿಷತ್ ಸದಸ್ಯರ, ಪಕ್ಷದ ಪದಾಧಿಕಾರಿಗಳ, ಸಂಸದರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಸಭೆ ನಡೆಸಲಾಗಿದೆ. ಸಂಘಟನಾ ಕಾರ್ಯದರ್ಶಿ, ರಾಜ್ಯ ಉಸ್ತುವಾರಿಯವರು ರಾಜ್ಯಕ್ಕೆ ಭೇಟಿ ನೀಡುವ ಸೂಚನೆ ನೀಡಿದ್ದಾರೆ' ಎಂದರು.

ನಾಲ್ಕು ಚುಕ್ಕೆ ಜಿಂಕೆ ಸಾವು: ರೋಗ ಶಂಕೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ತಾಲ್ಲೂಕಿನ ಇಂದಿರಾ ಪ್ರಿಯದರ್ಶಿನಿ ಕಿರುಮೃಗಾಲಯದಲ್ಲಿ ನಾಲ್ಕು ಚುಕ್ಕೆ ಜಿಂಕೆಗಳು ಮೃತಪಟ್ಟಿದ್ದು, 'ಹೆಮರಾಜಿಕ್ ಸೆಪ್ಟಿಸೆಮಿಯಾ' ಎಂಬ ಸಾಂಕ್ರಾಮಿಕ ರೋಗಕ್ಕೆ ಬಲಿಯಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ನಾಲ್ಕು ದಿನಗಳಿಂದ ಜಿಂಕೆಗಳ ಸಾವು ಸಂಭವಿಸುತ್ತಿದ್ದು, ಮೃಗಾಲಯವನ್ನು ಬಂದ್ ಮಾಡಲಾಗಿದೆ. ಜ.19ರಂದು ಮೃಗಾಲಯ ಸಾರ್ವಜನಿಕ ವೀಕ್ಷಣೆಗೆ ಲಭ್ಯ ಇರುವುದಿಲ್ಲ.

ಜ.16ರಂದು ಚುಕ್ಕೆ ಜಿಂಕೆ ಮೃತಪಟ್ಟಿತ್ತು. ಜ.17ರಂದು ಎರಡು, ಭಾನುವಾರ ಒಂದು ಜಿಂಕೆ ಸಾವಿಗೀಡಾಗಿದೆ. ಉಳಿದ ಜಿಂಕೆಗಳಿಗೆ ರೋಗ ಹರಡದಂತೆ ತಡೆಯಲು ಅರಣ್ಯ ಇಲಾಖೆ ಸುರಕ್ಷತಾ ಕ್ರಮ ವಹಿಸಿದೆ. ಚಿಕಿತ್ಸೆ ಬೆಳಗಾವಿ, ಬೆಂಗಳೂರಿನಿಂದ ತಜ್ಞರು ಧಾವಿಸುತ್ತಿದ್ದಾರೆ. ಮೃಗಾಲಯದಲ್ಲಿ 94 ಹೆಣ್ಣು 58 ಗಂಡು ಹಾಗೂ 18 ಮರಿಗಳು ಸೇರಿ 170 ಜಿಂಕೆಗಳಿದ್ದವು.

'ಜಿಂಕೆಗಳ ಸಾವಿನ ಹಿನ್ನೆಲೆಯಲ್ಲಿ ಮೃಗಾಲಯದ ಪ್ರಕಾರ ಮುನ್ನೆಚ್ಚರಿಕೆ ವಹಿಸಲಾಯಿತು. ಪ್ರಾಣಿ ಆರೋಗ್ಯ ಸಲಹಾ ಸಮಿತಿ ಸದಸ್ಯರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಸಾವಿನ ಕಾರಣ ಅರಿಯಲು ರಕ್ತ, ಅಂಗಾಂಗಗಳ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಹರ್ಷವರ್ಧನ 'ಪ್ರಜಾವಾಣಿ'ಗೆ ತಿಳಿಸಿದರು.

'ಜಿಂಕೆಗಳ ರೋಗ ಲಕ್ಷಣಗಳನ್ನು ಗಮನಿಸಿ 'ಹೆಮರಾಜಿಕ್ ಸೆಪ್ಟಿಸೆಮಿಯಾ' ಇರಬಹುದು ಎಂದು ಶಂಕಿಸಲಾಗಿದೆ. ಉಳಿದ ಜಿಂಕೆಗಳಿಗೆ ರೋಗ ನಿರೋಧಕ ಔಷಧ ನೀಡಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಹುಣಸೂರು ದರೋಡೆ ಪ್ರಕರಣ ಬಿಹಾರದಲ್ಲಿ ಇಬ್ಬರ ಬಂಧನ

ಬಾಗಲ್ಪುರ/ದರ್ಭಾಂಗ (ಪಿಟಿಐ): ಮೈಸೂರು ಜಿಲ್ಲೆ ಹುಣಸೂರಿನಲ್ಲಿ ನಡೆದಿದ್ದ ₹10 ಕೋಟಿ ಮೌಲ್ಯದ ಚಿನ್ನಾಭರಣ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಹಾರದ ಎಸ್‌ಟಿಎಫ್ ಸಹಯೋಗದಲ್ಲಿ ಕರ್ನಾಟಕದ ಪೊಲೀಸರು ಬಾಗಲ್ಪುರ ಹಾಗೂ ದರ್ಭಾಂಗದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಇಬ್ಬರು ದರೋಡೆಕೋರರನ್ನು ಬಂಧಿಸಿದ್ದಾರೆ.

ಬಂಧಿತರನ್ನು ದರ್ಭಾಂಗದ ಹೃಷಿಕೇಶ್ ಸಿಂಗ್, ಬಾಗಲ್ಪುರದ ಪಂಕಜ್ ಕುಮಾರ್ ಅಲಿಯಾಸ್ ಸತುಅ ಎಂದು ಗುರುತಿಸಲಾಗಿದೆ. ಬಂಧಿತರು ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ನಡೆದಿದ್ದ ಚಿನ್ನ, ವಜ್ರದ ಅಂಗಡಿಯ ದರೋಡೆ ಪ್ರಕರಣದಲ್ಲಿ ಪ್ರಮುಖ ಆರೋಪಿಗಳು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ದರ್ಭಾಂಗ, ಬಾಗಲ್ಪುರ ಜಿಲ್ಲೆಯ ವಿವಿಧ ಠಾಣೆಗಳ ಪೊಲೀಸರ ಸಹಯೋಗದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಬಿಹಾರ ಪೊಲೀಸರು ತಿಳಿಸಿದ್ದಾರೆ.

2025ರ ಡಿ.28ರಂದು ಇಬ್ಬರು ಆರೋಪಿಗಳ ವಿರುದ್ಧ ಹುಣಸೂರು ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತಾ(ಬಿಎನ್‌ಎಸ್), ಶಸ್ತ್ರಾಸ್ತ್ರ ಕಾಯ್ದೆ ಉಲ್ಲಂಘನೆ ಅಡಿ ಪ್ರಕರಣ ದಾಖಲಾಗಿತ್ತು.

'ಬಂಧಿತರಿಂದ ಒಂದು ಚಿನ್ನದ ಸರ, ₹1 ಲಕ್ಷ ಮೌಲ್ಯದ ಚಿನ್ನದ ಉಂಗುರ, ಮೋಟಾರ್ ಸೈಕಲ್ ಹಾಗೂ ಆಭರಣ ಸಂಗ್ರಹಿಸಿಡುವ ಪೆಟ್ಟಿಗೆಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

16 ಪ್ರಕರಣ ದಾಖಲು

ಆರೋಪಿ ಪಂಕಜ್ ವಿರುದ್ಧ ಬಿಹಾರ, ಜಾರ್ಖಂಡ್, ಕರ್ನಾಟಕ, ರಾಜಸ್ಥಾನದ ವಿವಿಧ ಠಾಣೆಗಳಲ್ಲಿ ಕೊಲೆಯತ್ನ, ದರೋಡೆ, ಶಸ್ತ್ರಾಸ್ತ್ರ ಕಾಯ್ದೆ ಉಲ್ಲಂಘನೆ ಸೇರಿದಂತೆ 16 ಪ್ರಕರಣಗಳು ದಾಖಲಾಗಿವೆ. ಹೃಷಿಕೇಶ್ ಸಿಂಗ್ ವಿರುದ್ಧ ಬಿಹಾರದ ಪೂರ್ನಿಯಾ, ನೌಗಚಿಯಾ ಹಾಗೂ ಮೈಸೂರಿನ ಹುಣಸೂರು ಠಾಣೆಯಲ್ಲಿ ಕೊಲೆ, ದರೋಡೆ ಹಾಗೂ ಶಸ್ತ್ರಾಸ್ತ್ರ ಕಾಯ್ದೆ ಉಲ್ಲಂಘನೆ ಸೇರಿದಂತೆ 4 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೈಪುರ ಸಾಹಿತ್ಯ ಉತ್ಸವದ ನಾಲ್ಕನೇ ದಿನ ಹಲವು ಗಂಭೀರ ಚರ್ಚೆ

ಗಿಗ್ ಕಾರ್ಮಿಕರ ಸಮಸ್ಯೆಗಳ ಪ್ರತಿಧ್ವನಿ

• ಬಿ.ವಿ.ಶ್ರೀನಾಥ್



ಜೈಪುರ ಸಾಹಿತ್ಯ ಉತ್ಸವದಲ್ಲಿ ಗಿಗ್ ಆರ್ಥಿಕತೆ ಕುರಿತ ಗೋಷ್ಠಿಯಲ್ಲಿ ಲೇಖಕಿಯರಾದ ವಂದನಾ ವಾಸುದೇವನ್, ಕೇತಕಿ ಕಾರ್ಣಿಕ್ ಮತ್ತು ಅರ್ಥಶಾಸ್ತ್ರಜ್ಞ ರಾಕೇಶ್ ಮೋಹನ್ ಭಾಗವಹಿಸಿದ್ದರು

ಜೈಪುರ: ಜೈಪುರ ಸಾಹಿತ್ಯ ಉತ್ಸವದಲ್ಲಿ ನಾಲ್ಕನೇ ದಿನವಾದ ಭಾನುವಾರ ಗಿಗ್ ಕಾರ್ಮಿಕರು ಮತ್ತು ಭಾರತದ ಸಾರ್ವಜನಿಕ ಆರೋಗ್ಯ ಕ್ಷೇತ್ರದ ಬಗ್ಗೆ ಗಂಭೀರ ಚರ್ಚೆಗಳು ನಡೆದವು.

ಲೇಖಕಿಯರಾದ ವಂದನಾ ವಾಸುದೇವನ್ ಮತ್ತು ಕೇತಕಿ ಕಾರ್ಣಿಕ್ ಮತ್ತು ಅರ್ಥಶಾಸ್ತ್ರಜ್ಞ ರಾಕೇಶ್ ಮೋಹನ್ ಅವರು ಗಿಗ್ ಕಾರ್ಮಿಕರು ಮತ್ತು ಗಿಗ್ ಆರ್ಥಿಕತೆಯ ಬಗ್ಗೆ ಒಳನೋಟ ಬೀರಿದರು.

'ಭಾರತದಲ್ಲಿ ಅನೌಪಚಾರಿಕ ಆರ್ಥಿಕತೆ ಪ್ರಧಾನ ಪಾತ್ರ ವಹಿಸುತ್ತಿದ್ದು, ಗಿಗ್ ಕಾರ್ಮಿಕರೂ ಇದೇ ವರ್ಗಕ್ಕೆ ಸೇರುತ್ತಾರೆ. ಆದರೆ, ಈ ವಲಯದ ಇತರರಿಗೆ ಇರುವ ಸ್ವಾತಂತ್ರ್ಯ ಗಿಗ್ ಕಾರ್ಮಿಕರಿಗೆ ಇಲ್ಲ. ವರ್ಷವೊಂದಕ್ಕೆ ಗಿಗ್ ಕಾರ್ಮಿಕರಿಗೆ ಸರಾಸರಿ 38 ದಿನಗಳ ಕೆಲಸ ಮಾತ್ರ ಸಿಗುತ್ತಿದೆ. ಈ ವಲಯದಲ್ಲಿ ಇರುವವರ ಭವಿಷ್ಯದ ಬಗ್ಗೆ ಆತಂಕವಾಗುತ್ತದೆ' ಎಂದು ವಂದನಾ ವಾಸುದೇವನ್ ಹೇಳಿದರು.

'ನಿರಂತರವಾಗಿ ಡಿಜಿಟಲ್ ನಿಗಾದಲ್ಲಿ ಕೆಲಸ ಮಾಡುವ ಕಾರ್ಮಿಕರು ಖಿನ್ನತೆ, ಒತ್ತಡಗಳಿಗೆ ಗುರಿಯಾಗುತ್ತಿದ್ದಾರೆ' ಎಂದು ಅವರು ವಿವರಿಸಿದರು.

'ತಂತ್ರಜ್ಞಾನದ ಸಾಧ್ಯತೆಗಳ ಬಗ್ಗೆ ನಕಾರಾತ್ಮಕ ಧೋರಣೆ ತಳೆಯುವ ಅಗತ್ಯವಿಲ್ಲ. ಇದರಿಂದ ಅನೇಕ ರೀತಿಯಲ್ಲಿ ಉದ್ಯೋಗ ಸೃಷ್ಟಿ ಆಗುತ್ತಿವೆ' ಎನ್ನುವುದು ರಾಕೇಶ್ ಮೋಹನ್ ಅವರ ಅಭಿಪ್ರಾಯ.

ಗಿಗ್ ಕಾರ್ಮಿಕರ ಕೆಲಸ ಅಲ್ಪ ಅವಧಿಯದ್ದಾದರೂ ಹಲವು ರೀತಿಯ ಸಮಸ್ಯೆಗಳನ್ನು, ಅಪಾಯಗಳನ್ನು ಎದುರಿಸಬೇಕು. ಕನಿಷ್ಠ ಇವರಿಗೆ ಸಾಮಾಜಿಕ ಭದ್ರತೆ, ಸುರಕ್ಷತೆ, ಸೌಲಭ್ಯ ಕಲ್ಪಿಸುವ ಕೆಲಸ ಆಗಬೇಕು ಎನ್ನುವ ಅಭಿಪ್ರಾಯ ಸಂವಾದದಲ್ಲಿ ಮೂಡಿತು.

ಆರೋಗ್ಯ ಕ್ಷೇತ್ರದಲ್ಲಿ ಉತ್ತರದಾಯಿತ್ವ ಸಮಸ್ಯೆ: ಭಾರತದ ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿನ ಸಮಸ್ಯೆಗಳ ಕುರಿತ ಗೋಷ್ಠಿಯಲ್ಲಿ ದಿ ಲ್ಯಾನ್ಸೆಟ್ ಪತ್ರಿಕೆಯ ಮುಖ್ಯ ಸಂಪಾದಕ ರಿಚರ್ಡ್ ಹಾರ್ಟನ್, ವೈದ್ಯ ವಿಕ್ರಮ್ ಪಟೇಲ್, ಪ್ರಾಧ್ಯಾಪಕ ತರುಣ್ ಖನ್ನಾ ಮತ್ತು ಮಹಿಳಾ ಹಕ್ಕು ಹೋರಾಟಗಾರ್ತಿ ಪೂನಂ ಮುತ್ರೇಜಾ ಭಾಗವಹಿಸಿದ್ದರು.

'ಭಾರತದ ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಉತ್ತರದಾಯಿತ್ವದ ಸಮಸ್ಯೆ ಮತ್ತು ಗುಣಮಟ್ಟದ ಕೊರತೆ ಇದೆ. ಖಾಸಗಿ ಆಸ್ಪತ್ರೆಗಳ ವಲಯಕ್ಕೆ ಯಾವುದೇ ನಿಯಂತ್ರಣ ಇಲ್ಲವಾಗಿದೆ' ಎಂದು ವಿಕ್ರಮ್ ಪಟೇಲ್ ವ್ಯಾಖ್ಯಾನಿಸಿದರು.

'ಲ್ಯಾನ್ಸೆಟ್ ಪತ್ರಿಕೆಯು ಭಾರತದಲ್ಲಿ ಜನರ ಆರೋಗ್ಯ ಕ್ಷೇತ್ರವನ್ನು ಪುನರ್ ರೂಪಿಸುವ ಬಗ್ಗೆ ಹಲವು ವರ್ಷಗಳ ಹಿಂದೆಯೇ ವರದಿ ಪ್ರಕಟಿಸಿದೆ. ಆದರೆ, ಈ ದಿಸೆಯಲ್ಲಿ ಯಾವುದೇ ಕೆಲಸ ಆಗಲಿಲ್ಲ' ಎಂದು ಪೂನಂ ಮುತ್ರೇಜಾ ಹೇಳಿದರು.

'ಸಾರ್ವಜನಿಕ ಆರೋಗ್ಯ ಸೇವೆಗಳ ವಲಯದಲ್ಲಿ ಜನರ ಭಾಗೀದಾರಿಕೆ ಅಗತ್ಯವಾಗಿದೆ. ಇದನ್ನು ಸಾಧ್ಯವಾಗಿಸಲು ಭಾರತೀಯರು ಹೋರಾಡಬೇಕಿದೆ' ಎಂದು ರಿಚರ್ಡ್ ಹಾರ್ಟನ್ ನುಡಿದರು.

ಭಾರತದ ಕಳಪೆ ಸಾರ್ವಜನಿಕ ಆರೋಗ್ಯ ಸೇವೆಗಳ ವ್ಯವಸ್ಥೆಯಲ್ಲಿ ಮಹಿಳೆ ಅತಿ ಹೆಚ್ಚು ಸಂತ್ರಸ್ತಳು ಎನ್ನುವ ಅಭಿಪ್ರಾಯ ವ್ಯಕ್ತವಾಯಿತು.

ಭಾರಿ ಜನಸಂದಣಿ

ಭಾನುವಾರದ ಉತ್ಸವದಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಸಂವಾದ ಗೋಷ್ಠಿ ನಡೆಯಿತು. ಅದನ್ನು ನೋಡಲು ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು. ಈ ಬಾರಿಯ ಉತ್ಸವದಲ್ಲಿ ಅತಿ ಹೆಚ್ಚು ಜನ ಸೇರಿದ್ದ ಗೋಷ್ಠಿ ಅದಾಗಿತ್ತು. ಜನ ನಿಲ್ಲಲೂ ಸ್ಥಳ ಇರಲಿಲ್ಲ. ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವುದೂ ಕಷ್ಟವಾಗಿತ್ತು. ಆದರೆ, ನ್ಯಾ.ಚಂದ್ರಚೂಡ್ ಮಾತು ಆರಂಭಿಸಿದ ನಂತರ ಎಲ್ಲರೂ ನಿಶ್ಶಬ್ದದಿಂದ ಕೇಳಿಸಿಕೊಂಡರು. ಅವರ ಮಾತು ಮೆಚ್ಚಿ ಆಗಾಗ್ಗೆ ಚಪ್ಪಾಳೆ ಹೊಡೆದರು.

ವಿಚಾರಣಾಧೀನ ಕೈದಿ ಜಾಮೀನಿಗೆ ಅರ್ಹ: ಚಂದ್ರಚೂಡ್

ಪ್ರಜಾವಾಣಿ ವಾರ್ತೆ



> ಸರ್ಕಾರಗಳು ರಾಷ್ಟ್ರೀಯ ಭದ್ರತೆಯ ವಿಚಾರವನ್ನು ಮುಂದಿಟ್ಟಾಗ ನ್ಯಾಯಾಲಯ ಏನೂ ಮಾಡಲಾಗುವುದಿಲ್ಲ
> **ಡಿ.ವೈ.ಚಂದ್ರಚೂಡ್,** ನಿವೃತ್ತ ಸಿಜೆಐ

ಜೈಪುರ: 'ವಿಚಾರಣೆಯ ಮೂಲಕ ಅಪರಾಧಿ ಎಂದು ಸಾಬೀತಾಗುವವರೆಗೂ ಆರೋಪಿಗಳು ನಿರಪರಾಧಿಯಾಗಿರುತ್ತಾರೆ ಮತ್ತು ಅವರು ಜಾಮೀನಿಗೆ ಅರ್ಹರಾಗಿರುತ್ತಾರೆ' ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಭಾನುವಾರ ತಿಳಿಸಿದರು.

ಜೈಪುರ ಸಾಹಿತ್ಯ ಉತ್ಸವ 2026ರ 'ನ್ಯಾಯ ಎಂದರೇನು?' ಎನ್ನುವ ಗೋಷ್ಠಿಯಲ್ಲಿ ವೀರ್ ಸಾಂಘ್ವಿ ಅವರೊಂದಿಗಿನ ಸಂವಾದದಲ್ಲಿ ಭಾಗವಹಿಸಿದ್ದ ಚಂದ್ರಚೂಡ್ ಅವರು, ದೆಹಲಿ ಗಲಭೆ ಸಂಚು ಪ್ರಕರಣದ ಆರೋಪಿ ಉಮರ್ ಖಾಲಿದ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನಿರಾಕರಿಸಿರುವುದರ ಕುರಿತ ಪ್ರಶ್ನೆಗೆ ಉತ್ತರಿಸಿದರು.

'ಒಬ್ಬ ವ್ಯಕ್ತಿ 5 ವರ್ಷ ಇಲ್ಲವೇ 7 ವರ್ಷ ವಿಚಾರಣಾಧೀನ ಕೈದಿಯಾಗಿ ಜೈಲು ಶಿಕ್ಷೆ ಅನುಭವಿಸಿ, ನಂತರ ನಿರ್ದೋಷಿ ಎಂದು ಬಿಡುಗಡೆಯಾದರೆ ಅವರಿಗಾದ ಕಾಲದ ನಷ್ಟವನ್ನು ಹೇಗೆ ತುಂಬಿಕೊಡುವುದು' ಎಂದರು.

'ಸರಣಿ ಅತ್ಯಾಚಾರ, ಕೊಲೆ ಎಸಗಿದ, ದೇಶ ತೊರೆಯುವ ಸಾಧ್ಯತೆ ಇರುವ, ವಿಚಾರಣೆಯ ಹಂತದಲ್ಲಿ ಸಾಕ್ಷ್ಯನಾಶ ಮಾಡುವ ಸಾಧ್ಯತೆ ಇರುವ ಆರೋಪಿಗಳಿಗೆ ಜಾಮೀನು ನಿರಾಕರಿಸಬಹುದು. ಇವುಗಳ ಹೊರತಾಗಿ ಉಳಿದ ಆರೋಪಿಗಳು ಜಾಮೀನಿಗೆ ಅರ್ಹರು' ಎಂದು ಚಂದ್ರಚೂಡ್ ವಿವರಿಸಿದರು.

'ಸಂವಿಧಾನದ ನಿಯಮಗಳು ಪರಮೋಚ್ಚವಾಗಿದ್ದು, ಸರ್ಕಾರದ ನಿಯಮಗಳು ಸಂವಿಧಾನದ ಅಡಿಯಲ್ಲಿ ಬರುತ್ತವೆ. ಜನರ ಬದುಕುವ ಹಕ್ಕು ತ್ವರಿತ ವಿಚಾರಣೆಯ ಹಕ್ಕನ್ನೂ ಒಳಗೊಂಡಿದೆ. ತ್ವರಿತ ವಿಚಾರಣೆ ಸಾಧ್ಯವಾಗದಿದ್ದಾಗ ಜಾಮೀನು ನೀಡಬೇಕು' ಎಂದರು.

ಭಾರತದ ಮುಖ್ಯನ್ಯಾಯಮೂರ್ತಿಯಾಗಿ ತಮ್ಮ 24 ತಿಂಗಳ ಅವಧಿಯಲ್ಲಿ 21 ಸಾವಿರ ಜಾಮೀನು ಅರ್ಜಿಗಳನ್ನು ಇತ್ಯರ್ಥಪಡಿಸಿದ್ದಾಗಿ ತಿಳಿಸಿದ ಅವರು, ಪವನ್ ಖೇಡ ಮತ್ತು ತೀಸ್ತಾ ಸೆಟಲ್ವಾಡ್ ಅವರಿಗೆ ಜಾಮೀನು ಮಂಜೂರು ಮಾಡಿದ್ದನ್ನು ವಿವರಿಸಿದರು.

ನ್ಯಾಯಾಲಯದಲ್ಲಿನ ಭ್ರಷ್ಟಾಚಾರದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಸಮಾಜದ ಭಾಗವಾದ ನ್ಯಾಯಾಂಗದಲ್ಲಿಯೂ ಭ್ರಷ್ಟಾಚಾರ ಇರುವುದು ನಿಜ. ಆದರೆ, ಅದನ್ನು ಅತಿರಂಜಿಸಿ ಹೇಳಲಾಗುತ್ತಿದೆ' ಎಂದ ಅವರು, 'ಸರ್ಕಾರವು ಈ ದಿಸೆಯಲ್ಲಿ ವಾಗ್ದಂಡನೆ ನಿಯಮಗಳನ್ನು ಬದಲಿಸಬೇಕು' ಎಂದು ಸಲಹೆ ನೀಡಿದರು.

'ಕೊಲಿಜಿಯಂ 3 ವರ್ಷಗಳ ಅವಧಿ ಹೊಂದಿರಬೇಕು. ಈ ವ್ಯವಸ್ಥೆಯಲ್ಲಿ ಸರ್ಕಾರಗಳು ಹಿಡಿತ ಸಾಧಿಸಲು ಅವಕಾಶ ಇರಬಾರದು' ಎಂದರು.

ವೈವಾಹಿಕ ಅತ್ಯಾಚಾರವನ್ನು ಅಪರಾಧದ ವ್ಯಾಪ್ತಿಗೆ ತರುವ ಬಗ್ಗೆ ತಮ್ಮ ಅವಧಿಯಲ್ಲಿ ತೀರ್ಪು ನೀಡಲು ಸಾಧ್ಯವಾಗದೇ ಇರುವುದು ಪಶ್ಚಾತ್ತಾಪದ ವಿಚಾರ. ಇದರಲ್ಲಿ ಕಾನೂನು ಬದಲಾಗಬೇಕಿದೆ. ಸುಪ್ರೀಂ ಕೋರ್ಟ್ ಅನ್ನು ಜನರ ಕೋರ್ಟ್ ಆಗಿ ಮಾಡಿದ್ದೆ. ಈ ಬಗ್ಗೆ ತೃಪ್ತಿ ಇದೆ ಎಂದರು.

ವರುಣ: 20 ಎಕರೆ ಭೂ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಮೈಸೂರು: ತಾಲ್ಲೂಕಿನ ವರುಣ ಹೋಬಳಿಯ ಗುಡುಮಾದನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಜಾಗದಲ್ಲಿ ಸಾಗುವಳಿ ಮಾಡುತ್ತಿದ್ದ ಕೃಷಿ ಭೂ ಒತ್ತುವರಿಯನ್ನು ಭಾನುವಾರ ತಹಶೀಲ್ದಾರ್ ಕೆ.ಎಂ. ಮಹೇಶ್‌ಕುಮಾರ್ ಮತ್ತು ಸಿಬ್ಬಂದಿ ತೆರವುಗೊಳಿಸಿದರು.

ಸರ್ವೆ 68 ಮತ್ತು 60ರ 20 ಎಕರೆ ಭೂಮಿಯನ್ನು 'ನಿಮ್ಹಾನ್ಸ್' ಮಾದರಿ ಆಸ್ಪತ್ರೆ ನಿರ್ಮಾಣಕ್ಕೆ ಮಂಜೂರು ಮಾಡಲಾಗಿತ್ತು. ಇಲ್ಲಿ ಅನಧಿಕೃತವಾಗಿ ರೈತರು ಸಾಗುವಳಿ ಮಾಡುತ್ತಿದ್ದರು. ಜಿಲ್ಲಾಡಳಿತ ಹಿಂದೆ ತೆರವಿಗೆ ಮುಂದಾಗಿದ್ದಾಗ ವಿರೋಧ ವ್ಯಕ್ತವಾಗಿತ್ತು. ಡಿ.31ರಂದು ಜಮೀನು ಪರಿಶೀಲನೆಗೆ ತೆರಳಿದ್ದ ಗ್ರಾಮ ಆಡಳಿತ ಅಧಿಕಾರಿ, ಗ್ರಾಮ ಸಹಾಯಕನಿಗೆ ಪುಟ್ಟಸ್ವಾಮಿ ಅವರು ಅವಾಚ್ಯವಾಗಿ ನಿಂದಿಸಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು.

ಈ ಕಾರಣದಿಂದ ಪೊಲೀಸ್ ಭದ್ರತೆಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಜೆಸಿಬಿ ಬಳಸಿ ಬಾಳೆತೋಟ ತೆರವು ಮಾಡಲಾಯಿತು. ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಶೇಖರ್ ಪಾಲ್ಗೊಂಡಿದ್ದರು.

'ಬಿಎಂಸಿ: ಬಿಜೆಪಿಗೆ ಮೇಯರ್ ಸ್ಥಾನ ನೀಡಲು ಶಿಂದೆ ಬಣ ಬಯಸುತ್ತಿಲ್ಲ'

ಮುಂಬೈ(ಪಿಟಿಐ): 'ಬೃಹನ್ ಮುಂಬೈ ಮಹಾನಗರ ಪಾಲಿಕೆ(ಬಿಎಂಸಿ)ಯಲ್ಲಿ ಬಿಜೆಪಿಯ ಮೇಯರ್ ಇರುವುದನ್ನು ಏಕನಾಥ ಶಿಂದೆ ಹಾಗೂ ಅವರ ಪಕ್ಷದ ಚುನಾಯಿತ ಸದಸ್ಯರು ಬಯಸುತ್ತಿಲ್ಲ' ಎಂದು ಶಿವಸೇನಾ(ಯುಬಿಟಿ) ರಾಜ್ಯಸಭಾ ಸಂಸದ ಸಂಜಯ್ ರಾವುತ್ ಭಾನುವಾರ ಹೇಳಿದ್ದಾರೆ.


ಸಂಜಯ್ ರಾವುತ್

ಬಿಎಂಸಿಗೆ ಚುನಾವಣೆಯ ಫಲಿತಾಂಶ ಬಳಿಕ, ಶಿಂದೆ ನೇತೃತ್ವದ ಶಿವಸೇನಾ ತನ್ನ ನೂತನ ಚುನಾಯಿತ ಸದಸ್ಯರನ್ನು ಹೋಟೆಲ್‌ವೊಂದಕ್ಕೆ ಸ್ಥಳಾಂತರಿಸಿದೆ. ಈ ಬೆಳವಣಿಗೆ ಬೆನ್ನಲ್ಲೇ ರಾವುತ್ ಈ ಹೇಳಿಕೆ ನೀಡಿದ್ದಾರೆ.

'ತೆರೆಮರೆಯಲ್ಲಿ ಸಾಕಷ್ಟು ಬೆಳವಣಿಗೆಗಳು ನಡೆಯುತ್ತಿವೆ. ಕಾರ್ಪೊರೇಟರ್‌ಗಳನ್ನು ಹೋಟೆಲ್‌ನಲ್ಲಿ ಕೂಡಿಹಾಕಿದ್ದರೂ, ಸಂದೇಶ ರವಾನಿಸಲು ಹಾಗೂ ಸ್ವೀಕರಿಸಲು ಬೇರೆ ಮೂಲಗಳು ಇವೆ' ಎಂದು ಹೇಳಿದ್ದಾರೆ. ಹೀಗಾಗಿ, ರಾವುತ್ ಹೇಳಿಕೆ ಈಗ ಹಲವು ಊಹಾಪೋಹಗಳಿಗೆ ಕಾರಣವಾಗಿದೆ.

ಪರಭಣಿ: ಒಂದು ಮತದಿಂದ ಗೆಲುವು

ಛತ್ರಪತಿ ಸಂಭಾಜಿನಗರ: ಪರಭಣಿ ಮಹಾ ನಗರಪಾಲಿಕೆ ಚುನಾವಣೆಯಲ್ಲಿ ಶಿವಸೇನಾ(ಯುಬಿಟಿ) ಅಭ್ಯರ್ಥಿ ವೆಂಕಟ ದಹಾಳೆ ಅವರು ಕೇವಲ ಒಂದು ಮತ ಅಂತರದಿಂದ ಗೆದ್ದಿದ್ದಾರೆ. ದಹಾಳೆ 4,312 ಮತ ಪಡೆದಿದ್ದು, ಪ್ರತಿಸ್ಪರ್ಧಿ ಬಿಜೆಪಿಯ ಪ್ರಸಾದ್ ನಗರೆ 4,311 ಮತಗಳನ್ನು ಪಡೆದಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಒಂದು ಗ್ರಾಮ– ಒಂದು ಚುನಾವಣೆ

ಒಂದನೇ ಪುಟದಿಂದ...

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ವಿಳಂಬದ ವಿರುದ್ಧ ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್ ಮೊರೆ ಹೋಗಿತ್ತು. ನಂತರ ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಸದಸ್ಯರ ಸಂಖ್ಯೆ ನಿಗದಿಪಡಿಸಲು ಸರ್ಕಾರ ರಚಿಸಿದ್ದ ಆಯೋಗದ ಶಿಫಾರಸುಗಳನ್ನು ಅಂಗೀಕರಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅಧಿಸೂಚನೆ ಹೊರಡಿಸಿತ್ತು. ಆದರೆ, ಮೀಸಲಾತಿ ನಿಗದಿ ಅಂತಿಮಗೊಳಿಸಿರಲಿಲ್ಲ.

ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವಂತೆ ಸ್ಥಳೀಯ ಸಂಸ್ಥೆಗಳನ್ನು ಪ್ರತಿನಿಧಿಸುವ ವಿಧಾನಪರಿಷತ್ ಸದಸ್ಯರು, ಗ್ರಾಮೀಣ ಸ್ಥಳೀಯ ಸಂಸ್ಥೆಗಳ ವಿವಿಧ ಸಂಘಟನೆಗಳ ಜನಪ್ರತಿನಿಧಿಗಳೂ ಸರ್ಕಾರದ ಮೇಲೆ ಒತ್ತಡ ಹಾಕಿದ್ದರು. ಈ ವಿಷಯ ವಿಧಾನಮಂಡಲದ ಅಧಿವೇಶನದಲ್ಲೂ ಚರ್ಚೆಯಾಗಿತ್ತು.

ವಿಶ್ವ ಬ್ಯಾಂಕ್ ವರದಿ ಉಲ್ಲೇಖಿಸಿ ಕೇಂದ್ರ ಸರ್ಕಾರದ ವಿರುದ್ಧ ಟೀಕೆ


ವಾಯುಮಾಲಿನ್ಯ: ತುರ್ತು ಕ್ರಮಕ್ಕೆ 'ಕೈ' ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಗಂಗಾ ನದಿ ಬಯಲು ಪ್ರದೇಶ ಹಾಗೂ ಹಿಮಾಲಯ ತಪ್ಪಲು ಪ್ರದೇಶಗಳಲ್ಲಿ ವಾಯು ಮಾಲಿನ್ಯದಿಂದ ಆಗುತ್ತಿರುವ ಅನಾಹುತಗಳ ಕುರಿತು ವಿಶ್ವಬ್ಯಾಂಕ್ ಪ್ರಕಟಿಸಿರುವ ವರದಿಯನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷ ಕೇಂದ್ರ ಸರ್ಕಾರದ ವಿರುದ್ಧ ಭಾನುವಾರ ವಾಗ್ದಾಳಿ ನಡೆಸಿದೆ.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ವಾಯು ಮಾಲಿನ್ಯದಿಂದ ಆಗುತ್ತಿರುವ ಪರಿಣಾಮಗಳನ್ನು ಎಲ್ಲಿಯವರೆಗೆ ನಿರಾಕರಿಸಲಿದೆ? ಈ ವಿಚಾರವನ್ನು ಯಾವಾಗ ಗಂಭೀರವಾಗಿ ತೆಗೆದುಕೊಳ್ಳಲಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

ವಿಶ್ವ ಬ್ಯಾಂಕ್ ಇತ್ತೀಚೆಗೆ 'ಎ ಬ್ರೀತ್ ಆಫ್ ಚೇಂಜ್' ಎಂಬ ವರದಿ ಪ್ರಕಟಿಸಿದೆ. ಇಂಡೊ– ಗಂಗಾ ನದಿ ಬಯಲು ಪ್ರದೇಶ ಹಾಗೂ ಹಿಮಾಲಯ ತಪ್ಪಲು ಪ್ರದೇಶಗಳಲ್ಲಿ (ಐಜಿಪಿ-ಎಚ್‌ಎಫ್) ವಾಯುಮಾಲಿನ್ಯದಿಂದ ಆಗುತ್ತಿರುವ ಪರಿಣಾಮಗಳ ಕುರಿತು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ.



> ಹಣಕಾಸು ಹೊರೆ ಹಾಗೂ ಭೌಗೋಳಿಕ ವ್ಯಾಪ್ತಿ ದೃಷ್ಟಿಯಲ್ಲಿ ಇಟ್ಟುಕೊಂಡು ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮದ (ಎನ್‌ಸಿಎಪಿ) ವಿಸ್ತರಣೆ ಇಂದಿನ ತುರ್ತು
> **ಜೈರಾಮ್ ರಮೇಶ್**
> ಪ್ರಧಾನ ಕಾರ್ಯದರ್ಶಿ, ಕಾಂಗ್ರೆಸ್

ಭಾರತ, ಬಾಂಗ್ಲಾದೇಶ, ಭೂತಾನ್, ನೇಪಾಳ ಮತ್ತು ಪಾಕಿಸ್ತಾನ ಈ ಐಜಿಪಿ-ಎಚ್‌ಎಫ್ ವ್ಯಾಪ್ತಿಯಲ್ಲಿನ ದೇಶಗಳಾಗಿವೆ. ವಾಯುಮಾಲಿನ್ಯದ ಪರಿಣಾಮ ಈ ದೇಶಗಳಲ್ಲಿ ಒಂದು ವರ್ಷದಲ್ಲಿ 10 ಲಕ್ಷದಷ್ಟು ಜನರು ಅಕಾಲಿಕವಾಗಿ ಮರಣ ಹೊಂದುತ್ತಿದ್ದಾರೆ ಎಂದು ಈ ವರದಿಯಲ್ಲಿ ವಿವರಿಸಲಾಗಿದೆ.

'ಐಜಿಪಿ–ಎಚ್‌ಎಫ್ ವ್ಯಾಪ್ತಿಯಲ್ಲಿ ವಾಯು ಮಾಲಿನ್ಯ ತಡೆಗಟ್ಟಲು ವಿಶ್ವಬ್ಯಾಂಕ್ ವರದಿಯಲ್ಲಿ ಹಲವಾರು ಕ್ರಮಗಳನ್ನು ಸೂಚಿಸಲಾಗಿದೆ. ಕಲ್ಲಿದ್ದಲು ಬಳಸಿ ವಿದ್ಯುತ್ ಉತ್ಪಾದಿಸುವ ಘಟಕಗಳು ಹೊರಸೂಸುವ ಹೊಗೆಯನ್ನು ನಿಯಂತ್ರಿಸಬೇಕು, ಹಳೆಯ ಘಟಕಗಳನ್ನು ಸ್ಥಗಿತಗೊಳಿಸಬೇಕು ಎಂಬಂತಹ ಸಲಹೆಗಳನ್ನು ನೀಡಲಾಗಿದ್ದು, ಇವುಗಳ ಬಗ್ಗೆ ಸರ್ಕಾರ ಗಮನ ಹರಿಸಬೇಕು' ಎಂದು ಜೈರಾಮ್ ರಮೇಶ್ ಒತ್ತಾಯಿಸಿದ್ದಾರೆ.

'ವಾಯು ಮಾಲಿನ್ಯ(ನಿಯಂತ್ರಣ) ಕಾಯ್ದೆ ಹಾಗೂ ರಾಷ್ಟ್ರೀಯ ವಾಯು ಗುಣಮಟ್ಟ ಮಾನದಂಡಗಳನ್ನು (ಎನ್‌ಎಎಕ್ಯೂಎಸ್) ಪರಿಷ್ಕರಿಸುವಂತೆ ಕಾಂಗ್ರೆಸ್ ಒತ್ತಾಯಿಸುತ್ತಲೇ ಬಂದಿದೆ' ಎಂದೂ ಅವರು ಹೇಳಿದ್ದಾರೆ.

ವರದಿಯಲ್ಲಿ ಏನಿದೆ?

- ಐಜಿಪಿ-ಎಚ್‌ಎಫ್ ವ್ಯಾಪ್ತಿಯಲ್ಲಿ ಬರುವ ದೇಶಗಳಲ್ಲಿ ಈಗಲೂ ಅಡುಗೆ ಮತ್ತು ಕಾಯಿಸುವುದಕ್ಕೆ ಸೌದೆಗಳನ್ನು ಬಳಸಲಾಗುತ್ತದೆ. ಉದ್ದಿಮೆಗಳಲ್ಲಿ ಪಳೆಯುಳಿಕೆ ಇಂಧನಗಳ ಅವೈಜ್ಞಾನಿಕ ಬಳಕೆ ಇದೆ. ಇದರಿಂದ ವಾಯುಮಾಲಿನ್ಯ ಹೆಚ್ಚುತ್ತಿದೆ
- ಇಂತಹ ಇಂಧನಗಳನ್ನು ಬಳಸಿದಾಗ ಹೊರಹೊಮ್ಮುವ ಹೊಗೆಯನ್ನು ಸಂಸ್ಕರಿಸುವ ತಂತ್ರಜ್ಞಾನವನ್ನು ಬಳಕೆ ಮಾಡಲಾಗುತ್ತಿಲ್ಲ
- ಐಜಿಪಿ–ಎಚ್‌ಎಫ್ ವ್ಯಾಪ್ತಿಯಲ್ಲಿ ನೂರು ಕೋಟಿಯಷ್ಟು ಜನರು ಕಲುಷಿತ ಗಾಳಿಯನ್ನೇ ಉಸಿರಾಡುತ್ತಿದ್ದಾರೆ. ಇದರಿಂದ ಪ್ರತಿ ವರ್ಷ ಅಂದಾಜು 10 ಲಕ್ಷ ಜನರು ಅಕಾಲಿಕವಾಗಿ ಸಾಯುತ್ತಿದ್ದಾರೆ
- ವಾಯುಮಾಲಿನ್ಯದಿಂದಾಗಿ ಆರ್ಥಿಕವಾಗಿಯೂ ನಷ್ಟವಾಗುತ್ತಿದೆ. ಇಂತಹ ನಷ್ಟವು ಆಯಾ ಪ್ರದೇಶಗಳ ವಾರ್ಷಿಕ ಜಿಡಿಪಿಯ ಶೇ10ರಷ್ಟಾಗಲಿದೆ

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಇತರರ ಸುಖವನ್ನು ಬಯಸುವುದೇ ನಾವು ಸುಖ ಪಡೆಯುವುದಕ್ಕಿರುವ ಸುಲಭ ಮಾರ್ಗ.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಸಂಗಾತಿ ಆಯ್ಕೆಯಲ್ಲಿ ಸ್ವಾತಂತ್ರ್ಯ ಗಟ್ಟಿ ಭರವಸೆ ನೀಡುವ ಮಸೂದೆ

'ಕರ್ನಾಟಕ ಮದುವೆ ಮತ್ತು ಸಂಗಾತಿ ಆಯ್ಕೆಯ ಸ್ವಾತಂತ್ರ್ಯ, ಗೌರವ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ತಡೆಗಟ್ಟುವಿಕೆ ಮತ್ತು ನಿಷೇಧ ಮಸೂದೆ– 2026' ಅನ್ನು ರಾಜ್ಯ ಸರ್ಕಾರವು ಇತ್ತೀಚೆಗೆ ರೂಪಿಸಿದೆ. ಪ್ರಸ್ತಾವಿತ ಮಸೂದೆಯು ಮರ್ಯಾದೆಗೇಡು ಹತ್ಯೆಗಳು ಮತ್ತು ಸಂಬಂಧಿತ ಹಿಂಸಾಚಾರಗಳು ಕೇವಲ ಭೂತಕಾಲದ ಅವಶೇಷಗಳಲ್ಲ, ಪ್ರಚಲಿತ ಸಮಾಜದಲ್ಲೂ ಮುಂದುವರಿದ ಹೀನಕೃತ್ಯಗಳು ಎಂಬುದನ್ನು ಒತ್ತಿ ಹೇಳುತ್ತದೆ. ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಮಾನ್ಯ ಪಾಟೀಲ ಎಂಬ ಯುವತಿಯ ಮರ್ಯಾದೆಗೇಡು ಹತ್ಯೆ ಮತ್ತು ಇಂತಹದ್ದೇ ಹಲವು ಅಮಾನವೀಯ ಮತ್ತು ನಾಗರಿಕ ಸಮಾಜ ತಲೆತಗ್ಗಿಸುವ ಪ್ರಕರಣಗಳಿಂದಾಗಿ ಪ್ರತ್ಯೇಕ ಕಾಯ್ದೆಯ ಅಗತ್ಯವನ್ನು ಸರ್ಕಾರ ಮನಗಂಡಿದೆ. ಮಸೂದೆಯ ಮೂಲತತ್ತ್ವವು ಸಂವಿಧಾನದ ಪ್ರತಿಪಾದನೆಯನ್ನು ಖಚಿತಪಡಿಸುತ್ತದೆ. ಇದು, ವೈಯಕ್ತಿಕ ಜೀವನ ಮತ್ತು ವಿವಾಹದ ವಿಷಯದಲ್ಲಿ ವ್ಯಕ್ತಿಯ ಸ್ವಾಯತ್ತತೆಯನ್ನು ಬಲು ಸ್ಪಷ್ಟವಾಗಿ ಗುರ್ತಿಸುತ್ತದೆ. ವೈಯಕ್ತಿಕ ಸ್ವಾತಂತ್ರ್ಯವನ್ನು ಸಾಮಾಜಿಕ ನಿಯಂತ್ರಣಕ್ಕಿಂತಲೂ ಮೇಲಿರಿಸುತ್ತದೆ ಮತ್ತು ಸಂಗಾತಿ ಆಯ್ಕೆಯ ವಿಚಾರದಲ್ಲಿ ಕುಟುಂಬ, ಜಾತಿ ಅಥವಾ ಕುಲದ ಒಪ್ಪಿಗೆ ಅನಗತ್ಯ ಎಂಬುದನ್ನು ಬಲವಾಗಿ ಪ್ರತಿಪಾದಿಸುತ್ತದೆ. ಹಾಗೆ ಮಾಡುವ ಮೂಲಕ, ಬೊಮ್ಮಾಯಿ ನೇತೃತ್ವದ ಸರ್ಕಾರ 2022ರಲ್ಲಿ ರೂಪಿಸಿದ್ದ, ಮದುವೆ ಮತ್ತು ಮತಾಂತರಗಳು ಸರ್ಕಾರದ ಪರಿಶೀಲನೆಗೆ ಒಳಪಡಬೇಕು ಎಂದು ಸಾರಿದ್ದ 'ಮತಾಂತರ ನಿಷೇಧ ಕಾಯ್ದೆ'ಯನ್ನು ಈ ಮಸೂದೆಯು ಪ್ರಜ್ಞಾಪೂರ್ವಕವಾಗಿ ಮೀರಿ ನಿಲ್ಲುತ್ತದೆ. ಅಂತರ ಪರಿಶೀಲನೆಯನ್ನು ರಕ್ಷಣೆಯ ಬದಲು ಅಪಾಯದ ಮೂಲವಾಗಿ ಪರಿಗಣಿಸುವ ಈ ಮಸೂದೆ ದಂಪತಿಯನ್ನು ಕೌಟುಂಬಿಕ ಹಾಗೂ ಆಡಳಿತಾತ್ಮಕ ಹಸ್ತಕ್ಷೇಪದಿಂದ ಮುಕ್ತವಾಗಿಸುವ ಆಶಯ ಹೊಂದಿದೆ.



ಮರ್ಯಾದೆಗೇಡು ಹತ್ಯೆಯು ಅಮಾನವೀಯವಾದುದು. ಸಮಾಜದ ಸ್ವಾಸ್ಥ್ಯ ಕೆಡಿಸುವ ಇಂತಹ ಹೀನಕೃತ್ಯ ಎಸಗುವವರಿಗೆ ಕಾನೂನಿನ ಸಂಕೋಲೆ ತೊಡಿಸಲು ಹೊರಟಿರುವ ರಾಜ್ಯ ಸರ್ಕಾರದ ಕ್ರಮ ಶ್ಲಾಘನೀಯ.

ಕಾನೂನಿನ ಚೌಕಟ್ಟಿನಲ್ಲಿ ನೋಡುವುದಾದರೆ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಕೊರತೆಗಳನ್ನು ತುಂಬುವ ಕೆಲಸವನ್ನು ಈ ಮಸೂದೆ ಮಾಡಿದೆ. ಬಿಎನ್‌ಎಸ್, ಕೊಲೆ, ಹಿಂಸೆ ಮತ್ತು ಬೆದರಿಕೆಯಂತಹ ಕೃತ್ಯಗಳನ್ನು, ಅವುಗಳ ಉದ್ದೇಶ ಪರಿಗಣಿಸದೆ ಶಿಕ್ಷಿಸಿದರೆ, ಹೊಸ ಮಸೂದೆಯು ಮದುವೆ ಅಥವಾ ಸಂಬಂಧವನ್ನು ಜಾತಿ, ಬುಡಕಟ್ಟು, ಸಮುದಾಯ, ಧರ್ಮ, ಸಂಪ್ರದಾಯಕ್ಕೆ ಅಗೌರವ ತಂದಿದೆ ಅಥವಾ ಕುಟುಂಬದ ಇಚ್ಛೆಗೆ ವಿರುದ್ಧವಾದದ್ದು ಎಂದು ವಿರೋಧಿಸುವುದು ಕಾನೂನುಬಾಹಿರ ಎಂದು ವ್ಯಾಖ್ಯಾನಿಸುತ್ತದೆ. ಇಂತಹ ಕೃತ್ಯಕ್ಕೆ ಕಠಿಣ ಶಿಕ್ಷೆಯನ್ನು ಕಡ್ಡಾಯಗೊಳಿಸುವ ಪ್ರಸ್ತಾವ ಹೊಂದಿರುವ ಈ ಮಸೂದೆಯು ಅಪರಾಧಿಗಳಿಗೆ ಸಾಮಾಜಿಕ 'ರಕ್ಷಣೆ' ಸಿಗದಂತೆ ನೋಡಿಕೊಳ್ಳುವ ಗುರಿಯನ್ನೂ ಹೊಂದಿದೆ. ಮರ್ಯಾದೆಗೇಡು ಹತ್ಯೆಯಂತಹ ಅಪರಾಧಗಳನ್ನು ತಡೆಗಟ್ಟಲು ಪ್ರತಿ ಜಿಲ್ಲೆಯಲ್ಲಿ ವಿಶೇಷ ಘಟಕ ರಚಿಸಬೇಕು, ಈ ಘಟಕಗಳು ದೂರು ಸ್ವೀಕರಿಸಬೇಕು, ಸಹಾಯ ಮತ್ತು ರಕ್ಷಣೆ ನೀಡಲು 24 ಗಂಟೆಗಳ ಸಹಾಯವಾಣಿ ಸ್ಥಾಪಿಸಬೇಕು ಮತ್ತು ಕಾಯ್ದೆಯ ಅನುಷ್ಠಾನಕ್ಕೆ ಜಿಲ್ಲಾಧಿಕಾರಿ ನೇತೃತ್ವದ ಮೇಲ್ವಿಚಾರಣಾ ಸಮಿತಿ ಇರಬೇಕು ಎಂಬ ಪ್ರಸ್ತಾವನೆಗಳನ್ನೂ ಹೊಂದಿರುವ ಮಸೂದೆಯು, ಕೇವಲ ಶಿಕ್ಷೆ ನೀಡಲು ಸೀಮಿತವಾದ ಬಿಎನ್‌ಎಸ್‌ಗಿಂತಲೂ ಭಿನ್ನವಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಗೆ ಹೋಲಿಸಿದರೂ ಪ್ರಸ್ತಾವಿತ ಮಸೂದೆ ಭಿನ್ನವಾಗಿರುವುದು ಗಮನಾರ್ಹ. ಸಂತ್ರಸ್ತರು ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿದ್ದರೆ ಮಾತ್ರ ಆ ಕಾಯ್ದೆಯು ಅನ್ವಯವಾಗುತ್ತದೆ. ಆದರೆ, ಈ ಮಸೂದೆಯಲ್ಲಿ ಜಾತಿ ತಟಸ್ಥವಾಗಿದ್ದು, ವ್ಯಕ್ತಿಗಳು ತಮ್ಮ ಸಂಗಾತಿಯ ಆಯ್ಕೆಗಾಗಿ ಹಿಂಸೆ, ಭೀತಿಗೆ ಒಳಗಾಗಬಾರದು ಎಂಬ ಕಳಕಳಿಯೇ ಮುಖ್ಯವಾಗಿದೆ.

ಎಲ್ಲಕ್ಕಿಂತಲೂ ಮುಖ್ಯವಾಗಿ, ಎಸ್‌ಸಿ, ಎಸ್‌ಟಿ ಕಾಯ್ದೆಯ ಅನುಭವವು ರಾಜ್ಯಕ್ಕೆ ಕೆಲವು ಪಾಠಗಳನ್ನು ಕಲಿಸಿದೆ. ಕಠಿಣ ನಿಬಂಧನೆಗಳ ಹೊರತಾಗಿಯೂ, ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆ ಇದೆ. ದುರ್ಬಲ ತನಿಖೆ, ಕಳಪೆ ಅಭಿಯೋಜನೆ ಮತ್ತು ಸಾಕ್ಷಿಗಳ ಮೇಲಿನ ಸಾಮಾಜಿಕ ಒತ್ತಡ ಇದಕ್ಕೆ ಕಾರಣ. ಹೊಸ ಕಾನೂನುಗಳು, ಎಷ್ಟೇ ಸದುದ್ದೇಶದಿಂದ ಕೂಡಿದ್ದರೂ, ಪರಿಣಾಮಕಾರಿಯಾಗಿ ಜಾರಿ ಆಗದಿದ್ದರೆ ಬದಲಾವಣೆ ಸಾಧ್ಯವಿಲ್ಲ. ಈ ಮಸೂದೆಯು ನೈತಿಕ ಹೇಳಿಕೆಗಳ ಗುಚ್ಛವಾಗದೆ ಹೆಚ್ಚಿನದಾಗಬೇಕಾದರೆ, ಸರ್ಕಾರವು ತನಿಖೆ ವೃತ್ತಿಪರವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಸಾಕ್ಷಿಗಳಿಗೆ ರಕ್ಷಣೆ ಒದಗಿಸಬೇಕು ಮತ್ತು ತ್ವರಿತಗತಿಯಲ್ಲಿ ವಿಚಾರಣೆ ನಡೆಯುವಂತೆ ಕಾಳಜಿ ವಹಿಸಬೇಕು. ಇಲ್ಲದಿದ್ದರೆ ಸಂಗಾತಿ ಆಯ್ಕೆಯ ಸ್ವಾತಂತ್ರ್ಯದ ಭರವಸೆ ಕಾಗದದ ಮೇಲೆ ಪ್ರಬಲವಾಗಿ ಉಳಿಯುತ್ತದೆ. ಆದರೆ, ಆಚರಣೆಯಲ್ಲಿ ದುರ್ಬಲವಾಗಿರುತ್ತದೆ.

ಜಾಲತಾಣ

ಭೂಮಿ ಕಬಳಿಕೆ ಆಟ



ಮೊದಲು ಕೆಐಎಡಿಬಿ ಬಂದು ಕಾರ್ಖಾನೆಗಳಿಗಾಗಿ ರೈತರ ಜಮೀನು ಕಸಿದುಕೊಳ್ಳುತ್ತದೆ; ಆಮೇಲೆ ಹೌಸಿಂಗ್ ಬೋರ್ಡ್ ಬಂದು ಉಳಿದಿರುವ ರೈತರ ಜಮೀನು ಕಿತ್ತುಕೊಳ್ಳುತ್ತದೆ.

ಸುದರ್ಶನ್ ರೆಡ್ಡಿ ಡಿ.ಎನ್., 'ಫೇಸ್‌ಬುಕ್'ನಿಂದ

ಕಿಡಿನುಡಿ



ಬಳ್ಳಾರಿ ಗಲಾಟೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಕೇಳುವ ನೈತಿಕತೆ ಬಿಜೆಪಿಗೆ ಇದೆಯೇ? ನಾನು ಏಳೆಂಟು ಪ್ರಕರಣಗಳನ್ನು ಸಿಬಿಐಗೆ ವಹಿಸಿದ್ದೇನೆ. ಅವರು ಒಂದೇ ಒಂದು ಕೇಸನ್ನಾದರೂ ನೀಡಿದ್ದಾರೆಯೇ?

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 19-1-2001

• **ಬೆಂಗಳೂರಿನಲ್ಲಿ ಅತಿದೊಡ್ಡ ಇನ್‌ಫೋಸಿಸ್ ಸಂಕೀರ್ಣ**

ಬೆಂಗಳೂರು, ಜ. 18– ರಾಷ್ಟ್ರದ ಪ್ರತಿಷ್ಠಿತ ಇನ್‌ಫೋಸಿಸ್ ಸಂಸ್ಥೆ ತನ್ನ ಸಮುದಾಯದ ಅತ್ಯಂತ ದೊಡ್ಡ ಸಾಫ್ಟ್‌ವೇರ್ ಸಂಕೀರ್ಣವನ್ನು ಸುಮಾರು 619 ಕೋಟಿ ರೂಪಾಯಿ ವೆಚ್ಚದಲ್ಲಿ ಬೆಂಗಳೂರಿನ ಹೊರವಲಯದಲ್ಲಿ ಸ್ಥಾಪಿಸಲಿದೆ.

ಇನ್‌ಫೋಸಿಸ್ ಸಂಸ್ಥೆಯ ಈ ಕೇಂದ್ರ ವಿಶ್ವದಲ್ಲಿಯೇ ದೊಡ್ಡದೆಂದು ಹೇಳಲಾಗಿದೆ. ಈ ಯೋಜನೆ ಸೇರಿದಂತೆ ಒಟ್ಟು 4,501 ಕೋಟಿ ರೂಪಾಯಿ ಬಂಡವಾಳದ ಐದು ಯೋಜನೆಗಳಿಗೆ ಸರ್ಕಾರ ಅನುಮತಿ ನೀಡಿದೆ. ಈ ಯೋಜನೆಗಳು ಒಟ್ಟು 20,326 ಮಂದಿಗೆ ಉದ್ಯೋಗ ಒದಗಿಸುತ್ತವೆ ಎಂದು ಭಾರಿ ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ ಅವರು, ಇಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇನ್‌ಫೋಸಿಸ್ ಸಂಸ್ಥೆ ಸ್ಥಾಪಿಸುವ ಈ ಕೇಂದ್ರದಲ್ಲಿ 7,000 ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ಒಂದೇ ಸೂರಿನಡಿ ಉದ್ಯೋಗ ಒದಗಿಸಲಿದೆ ಎಂದರು.

• **ಭರತ್ ಷಾ 22ರವರೆಗೆ ಪೊಲೀಸ್ ವಶಕ್ಕೆ**

ಮುಂಬೈ, ಜ. 18 (ಯುಎನ್‌ಐ)– ಭೂಗತ ಜಗತ್ತಿನೊಂದಿಗೆ ಅಕ್ರಮ ವ್ಯವಹಾರ ಹೊಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಚಿತ್ರೋದ್ಯಮದ ಲೇವಾದೇವಿಗಾರ ಭರತ್ ಷಾ ಜಾಮೀನು ಅರ್ಜಿಯನ್ನು ಮುಂಬೈ ಹೈಕೋರ್ಟ್ ತಿರಸ್ಕರಿಸಿತು.

ಇದಕ್ಕೆ ಸಂಬಂಧಿಸಿದ ಬೆಳವಣಿಗೆಯಲ್ಲಿ ವಿಶೇಷ ನ್ಯಾಯಾಲಯವೊಂದು ಭರತ್ ಷಾ ಅವರನ್ನು ಜನವರಿ 22ರವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿತು.

75 ವರ್ಷಗಳ ಹಿಂದೆ

ಶುಕ್ರವಾರ, 19-1-1951

• **ಭಾಷಣಕಾರರಿಲ್ಲದೆ ಸಭೆ ಮುಂದುವರಿಯಿತು**

ಬೆಂಗಳೂರು, ಜ. 18– ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕಾಗಿ ರಾಜ ಪ್ರಮುಖರನ್ನು ವಂದಿಸುವ ನಿರ್ಣಯ ಇಂದು ಶಾಸನಸಭೆಯಲ್ಲಿ ಮಂಡಿಸಲ್ಪಟ್ಟು, ಸ್ವಲ್ಪ ಚರ್ಚೆಯಾದ ನಂತರ ನಿರ್ಣಯದ ಮೇಲೆ ಮಾತನಾಡುವವರೇ ಇಲ್ಲದೆ ಸಭೆ ಮುಂದುವರಿಯಿತು.

ಸಭೆ 1 ಗಂಟೆಗೆ ಸಮಾವೇಶಗೊಂಡಾಗ ಸರದಾರ್ ಪಟೇಲರನ್ನು ಸ್ಮರಿಸಿ ಎರಡು ನಿಮಿಷ ಮೌನದಿಂದ ಎದ್ದುನಿಂತು, ಅವರ ನಿಧನದ ಬಗ್ಗೆ ಸಂತಾಪ ಸೂಚಿಸಿತು. ವಿ. ವೆಂಕಟಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಸಭೆ ಉಪಹಾರಕ್ಕೇಳುವ ಮುನ್ನ ಎಂ. ಗೋವಿಂದರೆಡ್ಡಿಯವರು ರಾಜ ಪ್ರಮುಖರನ್ನು ವಂದಿಸುವ ನಿರ್ಣಯವನ್ನು ಸಭೆಯಲ್ಲಿ ಮಂಡಿಸಿ ಮಾತನಾಡಿದರು.

ಅಲೋಕ ಮತ್ತು ಬೀದಿನಾಯಿಗಳು!



ವಿಶ್ಲೇಷಣೆ

ಜ್ಯೋತಿ

> ಬೀದಿನಾಯಿಗಳ ಸಮಸ್ಯೆ ವ್ಯವಸ್ಥೆಯ ವೈಫಲ್ಯದ ಸಂಕೇತ. ನಮಗೆ ಅನುಕೂಲವಾಗುವಂತೆ ಪಳಗಿಸಿದ ಪ್ರಾಣಿಪ್ರಭೇದದಿಂದ ಈಗ ಅಂತರ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿರುವುದು ಕ್ರೌರ್ಯದ ನಡವಳಿಕೆ. ಒಂದೆಡೆ, ವಿದೇಶಿ ತಳಿಗಳ ನಾಯಿಗಳು ಬಂಗಲೆಗಳಲ್ಲಿ ಸುರಕ್ಷಿತವಾಗಿದ್ದರೆ, ದೇಸಿ ನಾಯಿಗಳು ಬೀದಿಗಳಲ್ಲಿ ಬದುಕಿಗಾಗಿ ಹೋರಾಟ ನಡೆಸುತ್ತಿವೆ.

ಅಮೆರಿಕದಲ್ಲಿ 'ಅಲೋಕ' ಹೆಸರಿನ ಭಾರತೀಯ 'ಬೀದಿ'ನಾಯಿ ವಿಶ್ವದ ಗಮನ ಸೆಳೆಯುತ್ತಿದೆ. ಬೌದ್ಧ ಭಿಕ್ಷುಗಳೊಂದಿಗೆ ಬಿಸಿಲು, ಮಳೆ ಮತ್ತು ಚಳಿ ಲೆಕ್ಕಿಸದೆ ಹೆಜ್ಜೆ ಹಾಕುತ್ತಿರುವ ಅದನ್ನು, ಶಾಂತಿ, ಶಿಸ್ತು, ಸಹಾನುಭೂತಿ ಮತ್ತು ಸಹಬಾಳ್ವೆಯ ಸಂಕೇತವಾಗಿ ಗುರ್ತಿಸಲಾಗುತ್ತಿದೆ. ಇದಕ್ಕೆ ತದ್ವಿರುದ್ಧವಾಗಿ ಭಾರತದಲ್ಲಿ ಬೀದಿನಾಯಿಗಳ ಪಾಡು ದಿನದಿಂದ ದಿನಕ್ಕೆ ಶೋಚನೀಯವಾಗುತ್ತಿದೆ. ಮನುಷ್ಯ ಲೋಕದಿಂದ ಅದನ್ನು ಬೇರ್ಪಡಿಸುವ ಎಲ್ಲಾ ಪ್ರಭಾವಿ ಕೇಂದ್ರಗಳು ಈ ನಿಟ್ಟಿನಲ್ಲಿ ತ್ವರಿತವಾಗಿ ಕೆಲಸ ಮಾಡುತ್ತಿವೆ. ಇಂದಿನ ಮನುಷ್ಯಕೇಂದ್ರಿತ ಜಗತ್ತಿನಲ್ಲಿ ಉಳಿದೆಲ್ಲ ಜೀವಿಗಳು ಅನಗತ್ಯವೆಂದು ಕಾಣಿಸುತ್ತಿರುವುದು ಆಶ್ಚರ್ಯವೇನಲ್ಲ. ಆದರೆ, ಈ ವಿರೋಧಾಭಾಸವು ನಮ್ಮ ಸಾಂಸ್ಕೃತಿಕ ಸ್ಮೃತಿ ಕಳೆದುಹೋಗಿರುವ ಸಂಕೇತವಾಗಿ ನಮಗೆ ಎದುರಾಗಿದೆ.

ಇಂದು ಭಾರತದ ಬೀದಿಗಳಲ್ಲಿ ಅನಾಥರಂತೆ ನಿಸ್ತೇಜವಾಗಿ ಕಾಣಿಸುವ ನಾಯಿಗಳಾಗಲಿ, ಬೆಕ್ಕುಗಳಾಗಲಿ, ಕತ್ತೆ–ಹಂದಿಗಳಾಗಲಿ, ಅಥವಾ ಇನ್ನಾವುದೇ ಪ್ರಾಣಿ–ಪಕ್ಷಿಯಾಗಿರಲಿ, ವ್ಯಾವಹಾರಿಕ ಮನುಷ್ಯ ಜಗತ್ತಿನಲ್ಲಿ ಅನಗತ್ಯವೆನ್ನುವಂತೆ, ಮನುಷ್ಯನ ಸುಸೂತ್ರ ಚಲನೆಗೆ ದಾರಿಗಡ್ಡವಾಗಿರುವಂತೆ ಕಾಣಿಸುತ್ತಿವೆ. ಅವುಗಳು ಮಾನವನ ಇತಿಹಾಸದ ಸಂಗಾತಿಗಳು ಎನ್ನುವುದನ್ನು ನಾವು ಮರೆಯಬಾರದು. ಸಾವಿರಾರು ವರ್ಷಗಳ ಹಿಂದೆ ಮನುಷ್ಯ ತನ್ನ ರಕ್ಷಣೆಗೆ, ಸಾಂಗತ್ಯಕ್ಕೆ, ಸಹಜೀವನಕ್ಕೆ ನಾಯಿಗಳನ್ನು ತನ್ನೊಂದಿಗೆ ಸೇರಿಸಿಕೊಂಡ; ಅವುಗಳ ಬದುಕನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಪಳಗಿಸಿದ; ಮನುಷ್ಯನ ವಾಸಸ್ಥಳಗಳಿಗೆ, ಅಲೆದಾಟಕ್ಕೆ ಹೊಂದುವಂತೆ ಅವುಗಳನ್ನು ರೂಪಿಸಿದ. ನಿಯತ್ತಿಗೆ ಹೆಸರಾದ ಇಂತಹ ಪ್ರಾಣಿಗಳನ್ನು ಈಗ 'ಮಾನವ ಜಗತ್ತಿಗೆ ಸೇರುವುದಿಲ್ಲ' ಎಂದು ಬೀದಿಪಾಲು ಮಾಡಿರುವುದು ಅಮಾನವೀಯತೆ ಮತ್ತು ಮನುಷ್ಯನ ನೈತಿಕ ಅಧಃಪತನವೆನ್ನಬಹುದು.

ಭಾರತೀಯ ನಾಯಿ ತಳಿಗಳು ಬೀದಿಯಲ್ಲಿ ಶೋಷಣೆಗೆ ಒಳಗಾಗುತ್ತಿದ್ದರೆ, ವಿದೇಶಿ ನಾಯಿ ತಳಿಗಳು ಶ್ರೀಮಂತಿಕೆ, ಪ್ರತಿಷ್ಠೆಯ ಸಂಕೇತವಾಗಿ ಬಂಗಲೆಗಳಲ್ಲಿ ಸುರಕ್ಷಿತವಾಗಿವೆ. ದೇಸಿ ತಳಿಗಳಿಗೆ ಇಂದು ರಕ್ಷಕರಾಗಿರುವವರು ಹಳ್ಳಿಯವರು ಮತ್ತು ಬಡವರು ಮಾತ್ರ. ಇಂದು ಭಾರತದ ನಗರಗಳಲ್ಲಿ ಕಾಣುತ್ತಿರುವ ದೇಸಿ ನಾಯಿಗಳ ಕುರಿತಾದ ಈ ನಿರ್ಲಕ್ಷ್ಯಕ್ಕೆ ಒಂದು ಆಳವಾದ ಐತಿಹಾಸಿಕ ಕಾರಣವಿದೆ. ಅದು ವಸಾಹತು ಮನೋಭಾವ. ಬ್ರಿಟಿಷರ ಕಾಲದಲ್ಲಿ ವಿದೇಶಿ ನಾಯಿ ತಳಿಗಳನ್ನು ಉನ್ನತ ಸಂಸ್ಕೃತಿ, ಶಿಸ್ತು, ಮೇಲುಸ್ತರದ ಸಂಕೇತವಾಗಿ ಕಾಣಲಾಯಿತು. ಅದೇವೇಳೆ, ದೇಸಿ ತಳಿಗಳು 'ಕಂತ್ರಿ' ನಾಯಿಗಳೆನಿಸಿಕೊಂಡು ಬೀದಿಗೆ ಬಂದವು ಮತ್ತು ಬಡತನದ ಸಂಕೇತವಾದವು. ಈ ವಿಭಜನೆ ಜೈವಿಕವೇನಲ್ಲ, ಅಧಿಕಾರ ಮತ್ತು ಮೌಲ್ಯದ ರಾಜಕೀಯವೆನ್ನಬಹುದು. ಸ್ವಾತಂತ್ರ್ಯಾನಂತರವೂ ನಾವು ಈ ಅಸ್ವಸ್ಥ ಮನೋಭಾವವನ್ನು ಮುಂದುವರಿಸಿದ್ದೇವೆ. ಇಂದು ನಮ್ಮ ದೇಸಿ ನಾಯಿಗಳು ಅಪರಾಧಿ ಸ್ಥಾನದಲ್ಲಿವೆ. ನಾವು ಹೆಮ್ಮೆಯಿಂದ ಹೇಳಿಕೊಳ್ಳುವ 'ಸ್ವದೇಶಿ ಚಿಂತನೆ' ದೇಸಿ ಜೀವಿಗಳಿಗೆ ಅನ್ವಯಿಸದಿರುವುದಕ್ಕೆ ಏನು ಹೇಳುವುದು?

ನಮ್ಮ ಧಾರ್ಮಿಕ–ಸಾಂಸ್ಕೃತಿಕ ಪರಂಪರೆ ವರ್ತಮಾನದ ಈ ಮನೋಭಾವಕ್ಕೆ ವಿರುದ್ಧವಾಗಿದೆ. ಇಂದು 'ಅಲೋಕ' ಬೌದ್ಧ ಭಿಕ್ಷುಗಳನ್ನು ಅನುಸರಿಸಿದಂತೆ, ಮಹಾಭಾರತದಲ್ಲಿ ಯುಧಿಷ್ಠಿರನು ಸ್ವರ್ಗಾರೋಹಣ ಮಾಡುವಾಗ ಅವನೊಂದಿಗೆ ಕೊನೆಯವರೆಗೆ ಪಯಣಿಸಿದ್ದು ಒಂದು ನಾಯಿ. ಇಂದ್ರ, 'ನಾಯಿಯನ್ನು ಬಿಟ್ಟು ಸ್ವರ್ಗದೊಳಗೆ ಬಾ' ಎಂದಾಗ ಯುಧಿಷ್ಠಿರ ಸ್ವರ್ಗದ ಪ್ರವೇಶವನ್ನೇ ನಿರಾಕರಿಸುತ್ತಾನೆ. ಆಶ್ರಿತಜೀವಿಯನ್ನು ಬಿಟ್ಟು ತನ್ನ ಸುಖಕ್ಕಾಗಿ ಮುಂದೆ ಹೋಗುವುದು ಅಧರ್ಮ ಎನ್ನುತ್ತಾನೆ. ಈ ಮೂಲಕ ವ್ಯಾಸರು ನಮಗೆ ಒಂದು ಉನ್ನತ ಸಂದೇಶ ನೀಡಿದ್ದಾರೆ. ಆದರೆ, ನಾವಿಂದು ಸಾವಿರಾರು ವರ್ಷಗಳಿಂದ ಮನುಷ್ಯನ ಸಂಗಾತಿಯಾಗಿದ್ದ ನಾಯಿಗಳನ್ನು ದೂರ ತಳ್ಳುತ್ತಿದ್ದೇವೆ.

ಮಹಾಭಾರತದ ಕಥೆ ಬರೀ ಪುರಾಣವಲ್ಲ, ಅದು ಮನುಷ್ಯನ ನೈತಿಕ ಪರೀಕ್ಷೆ. ಧರ್ಮ ಎನ್ನುವುದು, ದುರ್ಬಲ ಜೀವಿಗಳೊಂದಿಗೆ ನಾವು ಹೇಗೆ ವರ್ತಿಸುತ್ತೇವೆ ಎನ್ನುವುದರಲ್ಲಿ ವ್ಯಕ್ತವಾಗುತ್ತದೆ.

ನಾಯಿಗಳ ಬಗ್ಗೆ ಮಾತನಾಡುವುದು ಒಂದು ರಮ್ಯ ಕಥನವೇನಲ್ಲ. ಅವುಗಳು ಬೀದಿಯಲ್ಲಿ ಓಡಾಡುವ ಅಮಾಯಕರ ಮೇಲೆ ಎರಗುತ್ತಿರುವುದು ವಾಸ್ತವ ಸಂಗತಿ. ಆದರೆ, ನಮ್ಮ ಬೀದಿನಾಯಿಗಳು ಯಾವ ಸಂದರ್ಭಗಳಲ್ಲಿ ಮನುಷ್ಯರ ಮೇಲೆ ದಾಳಿ ಮಾಡುತ್ತವೆ ಎನ್ನುವುದನ್ನು ಗಮನಿಸಬೇಕು. ಅಧ್ಯಯನಗಳು ಸ್ಪಷ್ಟವಾಗಿ ಹೇಳುವಂತೆ, ನಾಯಿಗಳೂ ಸೇರಿದಂತೆ ಪ್ರಾಣಿ–ಪಕ್ಷಿಗಳು ವಿನಾಕಾರಣ ಮನುಷ್ಯನ ಮೇಲೆ ದಾಳಿ ಮಾಡುವುದಿಲ್ಲ. ಹಸಿವಿನಿಂದ ತಹತಹಿಸುತ್ತಿರುವಾಗ ಮನುಷ್ಯನ ಕೈಯಲ್ಲಿ ಆಹಾರ ಕಂಡರೆ, ನೀರಿಗಾಗಿ ಹುಡುಕಾಡುತ್ತಿರುವಾಗ, ಮನುಷ್ಯರಿಂದ ಅಪಾಯದ ಸೂಚನೆ ಕಂಡುಬಂದಾಗ, ಮನುಷ್ಯನ ನಿರಂತರ ಹಿಂಸೆಗೆ ಪ್ರತಿಕ್ರಿಯೆಯಾಗಿ ಅಥವಾ ತಮ್ಮ ಮರಿಗಳನ್ನು ರಕ್ಷಿಸಲು, ಅವು ಮನುಷ್ಯಲೋಕದೊಂದಿಗೆ ಆಕ್ರಮಣಕಾರಿಯಾಗಿ ಪ್ರತಿಕ್ರಿಯಿಸುತ್ತವೆ. ನಾವು ಅದನ್ನು 'ವಿನಾಕಾರಣ ಆಕ್ರಮಣ' ಎಂದು ಬಿಂಬಿಸುತ್ತೇವೆ. ಅದೇ ವೇಳೆ ಅವುಗಳ ಮೇಲೆ ಮನುಷ್ಯ ವಿನಾಕಾರಣ ಮಾಡುವ ಕ್ರೌರ್ಯವನ್ನು ವರದಿ ಮಾಡುವುದಿಲ್ಲ. ಪ್ರಸ್ತುತ ಬಹುತೇಕ ಭಾರತೀಯ ಬೀದಿನಾಯಿಗಳು ಪ್ಲಾಸ್ಟಿಕ್ ಮಿಶ್ರಿತ ತ್ಯಾಜ್ಯ ಆಹಾರದ ತುಣುಕುಗಳನ್ನು ನೆಚ್ಚಿಕೊಂಡಿವೆ ಅಥವಾ ದಿನಗಟ್ಟಲೆ ನೀರು ಮತ್ತು ಆಹಾರ ಸಿಗದೇ ಹೈರಾಣಾಗಿ ಬದುಕುತ್ತಿವೆ. ಹಾಗಾಗಿ, ಅವುಗಳ ಆಕ್ರಮಣವನ್ನು ಸ್ವಲ್ಪ ಮಾನವೀಯತೆಯಿಂದ ನೋಡಬೇಕಾದ ಅನಿವಾರ್ಯತೆಯಿದೆ. ಇಂದು, ಜಗತ್ತನ್ನು ಆಳುತ್ತಿರುವ ಮನುಷ್ಯನು ನಾಯಿಗಳ ಆಕ್ರಮಣಕ್ಕೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬೇಕಾದ ಜವಾಬ್ದಾರಿಯ ಸ್ಥಾನದಲ್ಲಿದ್ದಾನೆ.

ಇಂದು ನಾವು ಎದುರಿಸುತ್ತಿರುವುದು ನಾಯಿಗಳ ಸಮಸ್ಯೆ ಅಥವಾ ಮಾಧ್ಯಮಗಳು ಒಟ್ಟಾರೆಯಾಗಿ ಬಿಂಬಿಸುತ್ತಿರುವ 'ಮಾನವ–ಉಳಿದ ಜೀವಿಗಳ ಸಂಘರ್ಷ' ಎನ್ನುವುದು ನಾವು ವಿವೇಕವಿಲ್ಲದೆ ಪೋಷಿಸುತ್ತಿರುವ ಆಡಳಿತದ ವೈಫಲ್ಯವಷ್ಟೇ. ಕಾಡಿನ ಪ್ರಾಣಿಗಳು ಅಲ್ಲಿ ಬದುಕಲಾರದಂತೆ ಕಾಡುಗಳು ಬೋಳಾಗಿವೆ. ನಾಡನ್ನು ಆಶ್ರಯಿಸಿರುವ ನಾಯಿ ಮತ್ತು ಇತರ ಮಾನವ ಅವಲಂಬಿತ ಪ್ರಾಣಿಗಳು ನಮ್ಮ 'ಪ್ರಗತಿ ಪಥ'ಕ್ಕೆ ಅಡ್ಡಿಯಾಗಿವೆ. ಈ ನಿಟ್ಟಿನಲ್ಲಿ, ಜಗತ್ತೆಂದರೆ ಕೇವಲ ಮನುಷ್ಯನ ಐಷಾರಾಮಕ್ಕೆ ಮಾತ್ರವಲ್ಲ, ಉಳಿದ ಜೀವಿಗಳಿಗೂ ಸಮಾನ ಹಕ್ಕಿದೆ ಎನ್ನುವುದು ನಮಗೆ ಅರಿವಾಗಬೇಕಾಗಿದೆ. ತನ್ನ ಸಂತತಿಯ ಅಭಿವೃದ್ಧಿಯತ್ತ ಮಾತ್ರ ಗಮನ ಹರಿಸುವ ಮನುಷ್ಯ, ಉಳಿದ ಜೀವಿಗಳ ಬದುಕನ್ನು ಕಿತ್ತುಕೊಂಡಿರುವ ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ನಮ್ಮ ನಾಯಿಗಳಿಗೆ ಇಂದು ಬೇಕಾಗಿರುವುದು ಸರಿಯಾದ ಲಸಿಕೆ, ಮತ್ತು ಜನನ ನಿಯಂತ್ರಣ ಶಸ್ತ್ರಚಿಕಿತ್ಸೆ. ಇದರೊಂದಿಗೆ ಪ್ರಾಣಿಪ್ರಿಯರು ದೇಸಿ ನಾಯಿಗಳನ್ನು ದತ್ತು ಪಡೆಯಲು ಮುಂದೆ ಬರಬೇಕಾಗಿದೆ. ಅವುಗಳಿಗೆ ಬೇಕಾಗಿರುವುದು ಒಂದಿಷ್ಟು ಆಹಾರ ಮತ್ತು ಪ್ರೀತಿ ಅಷ್ಟೇ.

ಸರಳ ಪರಿಹಾರ ಮಾರ್ಗಗಳ ಬದಲಾಗಿ ನಾವಿಂದು ಕ್ರೌರ್ಯದ ಮೂಲಕ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಈ ನಿಟ್ಟಿನಲ್ಲಿ ನಮ್ಮ ಶಿಕ್ಷಣ ಸಂಸ್ಥೆಗಳೂ ಜವಾಬ್ದಾರಿ ವಹಿಸಬೇಕಾದ ಸ್ಥಾನದಲ್ಲಿವೆ. ಶಾಲಾ–ಕಾಲೇಜುಗಳು ಶುಷ್ಕ ಪಠ್ಯವನ್ನು ಪರಿಸುವ ಕಟ್ಟಡಗಳಲ್ಲ. ಅವು ಮೌಲ್ಯಗಳನ್ನು ಕಲಿಸುವ ಆಲಯಗಳು. ಪ್ರಾಣಿಗಳನ್ನು ಶಾಲಾ–ಕಾಲೇಜುಗಳ ಆವರಣಗಳಿಂದ ಹೊರದಬ್ಬುವ ಮೂಲಕ ನಾವು ಮಕ್ಕಳಿಗೆ ಹೇಳಿಕೊಡುವ ಪಾಠವೇನು? ಇಂದಿನ ಮಕ್ಕಳು, ಉಸಿರಾಡುತ್ತಿರುವ ಜೀವಿಗಳಿಗಿಂತ ಹೆಚ್ಚಾಗಿ, ನಿರ್ಜೀವ ಯಂತ್ರಗಳಿಗೆ ಹತ್ತಿರವಾಗುತ್ತಿದ್ದಾರೆ. ಯಂತ್ರಗಳು ಸಹಾನುಭೂತಿ ಕಲಿಸುವುದಿಲ್ಲ. ಜೀವವಿರುವ ಪ್ರಾಣಿ–ಪಕ್ಷಿಗಳು ಪ್ರೀತಿಯನ್ನು ಕಲಿಸುತ್ತವೆ. ನಾಯಿಗಳಂತೂ ಪ್ರತಿಫಲ ಬೇಡದೆ ನಮ್ಮ ಜೊತೆಗಿರುತ್ತವೆ. ಇಂತಹ ಸಂಬಂಧಗಳಿಂದ ಮಕ್ಕಳನ್ನು ದೂರಮಾಡುವುದು ಅವರನ್ನು ಹೆಚ್ಚು ಯಾಂತ್ರಿಕವಾಗಿ, ಕಡಿಮೆ ಮನುಷ್ಯರನ್ನಾಗಿ ಮಾಡುತ್ತದೆ.

ಗಾಂಧಿ ಹೇಳಿದಂತೆ, ಒಂದು ರಾಷ್ಟ್ರದ ನೈತಿಕ ಪ್ರಗತಿ, ಅದು ಪ್ರಾಣಿಗಳೊಂದಿಗೆ ಹೇಗೆ ವರ್ತಿಸುತ್ತದೆ ಎನ್ನುವುದರಿಂದ ಅಳೆಯಬಹುದು. ಅಂಬೇಡ್ಕರ್ ಕೂಡ ಒಂದು ಸಮಾಜದ ಶ್ರೇಷ್ಠತೆಯನ್ನು ದುರ್ಬಲರ ಮೇಲಿನ ವರ್ತನೆಯಿಂದಲೇ ಅಳೆಯಬೇಕು ಎಂದು ಹೇಳಿದ್ದರು. ಇಂದು ಬೀದಿನಾಯಿಗಳ ಮೇಲೆ ದಯೆ ತೋರಿಸುವುದು ಭಾವನಾತ್ಮಕ ರಮ್ಯತೆಯಲ್ಲ; ಅದು ನಮ್ಮ ಐತಿಹಾಸಿಕ ಜವಾಬ್ದಾರಿ. ನಾವು ಅವುಗಳನ್ನು ನಮ್ಮ ಸಹಾಯಕ್ಕಾಗಿ, ರಕ್ಷಣೆಗಾಗಿ, ಸಾಂಗತ್ಯಕ್ಕಾಗಿ ಮನುಷ್ಯ ಜಗತ್ತಿಗೆ ಕರೆ ತಂದಿದ್ದೇವೆ ಎನ್ನುವುದನ್ನು ಮರೆಯಬಾರದು. ಅವುಗಳನ್ನು ನಿರ್ದಾಕ್ಷಿಣ್ಯವಾಗಿ ತಳ್ಳಿಹಾಕುವ ಹಕ್ಕು ನಮಗಿಲ್ಲ. ಅಂದು ಯುಧಿಷ್ಠಿರನೊಂದಿಗೆ ಹೆಜ್ಜೆಹಾಕಿದ ದೇಸಿ ನಾಯಿ ಇಂದು ಅಮೆರಿಕದಲ್ಲಿ ಬೌದ್ಧ ಭಿಕ್ಕುಗಳೊಂದಿಗೆ ಶಾಂತಿ ಮತ್ತು ಸಹಬಾಳ್ವೆಯ ಸಂದೇಶದೊಂದಿಗೆ ನಡೆಯುತ್ತಿದೆ.

ನಮ್ಮ ಬೀದಿನಾಯಿಗಳು ಹಸಿದಿವೆ, ಆದರೂ ನಿಷ್ಠಾವಂತವಾಗಿವೆ. ಒಂದು ಕಾಲದಲ್ಲಿ ನಮಗೆ ಅವುಗಳ ಅಗತ್ಯವಿದ್ದಂತೆ, ಈಗ ಅವುಗಳಿಗೆ ನಮ್ಮ ಅಗತ್ಯ ಹೆಚ್ಚಾಗಿದೆ. ನಾವು ಯಾರನ್ನು ರಕ್ಷಿಸುತ್ತಿದ್ದೇವೆ, ಯಾರನ್ನು ಹೊರಹಾಕುತ್ತೇವೆ ಎನ್ನುವುದು ಸಮಾಜದ ಮೌಲ್ಯಗಳನ್ನು ನಿರ್ಧರಿಸುತ್ತದೆ. ಬೀದಿನಾಯಿಗಳು ನಮ್ಮ ಆಡಳಿತ ವೈಫಲ್ಯದ ಜೀವಂತ ಸಾಕ್ಷಿಗಳು. ಅವುಗಳ ಅಸ್ತಿತ್ವವನ್ನು ಅಳಿಸಿಹಾಕುವ ಮೂಲಕ ನಾವು ನಮ್ಮ ತಪ್ಪುಗಳನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತಿದ್ದೇವೆ. ಮಾನವ ಕೇಂದ್ರಿತ ಅಭಿವೃದ್ಧಿಯ ಈ ಕಾಲಘಟ್ಟದಲ್ಲಿ, ಎಲ್ಲವೂ ಮಾನವನ ಅನುಕೂಲಕ್ಕಾಗಿ ಮಾತ್ರ ಎನ್ನುವ ಮನೋಭಾವ ಬೇರೂರಿದೆ. ನಾಗರಿಕತೆ ಎನ್ನುವುದು ಇತರ ಜೀವಿಗಳಿಗೆ ಸ್ಥಳವಿಲ್ಲದ ವ್ಯವಸ್ಥೆಯಲ್ಲ; ಅದು ಸ್ಥಳ ಹಂಚಿಕೊಳ್ಳುವ ವಿವೇಕ. ಇಂದಿನ ಮಕ್ಕಳಿಗೆ ನಾವು ಕಲಿಸಬೇಕಾದ ಪಾಠ ಇದಾಗಿದೆ: ಭಯಕ್ಕಿಂತ ಅರಿವು ಶ್ರೇಷ್ಠ, ಅಧಿಕಾರಕ್ಕಿಂತ ಜವಾಬ್ದಾರಿ ಶ್ರೇಷ್ಠ, ಸೌಕರ್ಯಕ್ಕಿಂತ ಸಹಾನುಭೂತಿ ಶ್ರೇಷ್ಠ.



ವಾಚಕರ ವಾಣಿ

ಫಲಪುಷ್ಪ ಪ್ರದರ್ಶನ: ಪ್ರವೇಶ ದರ ಹೊರೆ

ಬೆಂಗಳೂರಿನ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ತೇಜಸ್ವಿ ವಿಸ್ಮಯ ಲೋಕ ಅರಳಿದೆ. ಆದರೆ, ರಜಾ ದಿನಗಳಲ್ಲಿ ಪ್ರವೇಶ ದರವನ್ನು ₹100ಕ್ಕೆ ಏರಿಸಲಾಗಿದೆ. ರಜಾ ದಿನಗಳಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ಕೂಲಿ ಕಾರ್ಮಿಕರು, ದಿನಗೂಲಿಗಳು, ಮಧ್ಯಮ ವರ್ಗದವರು ಕುಟುಂಬ ಸಮೇತ ಸಸ್ಯಕಾಶಿಗೆ ಹೋಗುತ್ತಾರೆ. ನಾಲ್ಕೈದು ಜನರ ಕುಟುಂಬವೊಂದು ಪ್ರದರ್ಶನ ವೀಕ್ಷಿಸಲು ₹500 ವ್ಯಯಿಸಬೇಕಾಗುತ್ತದೆ. ಸಸ್ಯಕಾಶಿಯ ಸೊಬಗನ್ನು ಸವಿಯಲು ಬರುವ ಜನರಿಂದ ಹೀಗೆ ಹೆಚ್ಚಿನ ದರವನ್ನು ವಸೂಲಿ ಮಾಡುವುದು ನ್ಯಾಯಸಮ್ಮತವಲ್ಲ.

ನಾಗರಾಜ್ ಕೆ. ಕಲ್ಲಹಳ್ಳಿ, ತುಮಕೂರು

ಕನ್ನಡದ ಅಸ್ಮಿತೆ ಇಲ್ಲದೆ ಅಸ್ತಿತ್ವ ಉಂಟೆ?

ಕನ್ನಡ ಚಿತ್ರರಂಗ ಆಯಾಸ, ಅಶಕ್ತತೆಯಿಂದ ನರಳುತ್ತಿದೆ. ಹೆಚ್ಚಿನ ಹಣಗಳಿಸುವ ಭರದಲ್ಲಿ ನಾಯಕರ, ದೈವಗಳ ವೈಭವೀಕರಣದಂಥ ಸಿದ್ಧಸೂತ್ರಗಳ ಬೆಂಬತ್ತಿರುವ ಸಿನಿಮಾ ನಿರ್ಮಾತೃಗಳು ರೇಜಿಗೆ ಹುಟ್ಟಿಸುತ್ತಿದ್ದಾರೆ. ಅಲ್ಲೊಂದು ಇಲ್ಲೊಂದು ಉತ್ತಮ ಚಿತ್ರ ಅವತರಿಸಿದರೂ, ಅದನ್ನು ಆಸ್ವಾದಿಸುವ ಅಭಿರುಚಿ ಕನ್ನಡದ ಪ್ರೇಕ್ಷಕರಲ್ಲಿ ಉಳಿದಿಲ್ಲ. ಅಚ್ಚುಕಟ್ಟಾಗಿ ಚಿತ್ರಿಸಲ್ಪಟ್ಟ ಇತ್ತೀಚಿನ ಕೆಲ ಸಿನಿಮಾಗಳೂ ಗುರುತು ಮಾಡದೇ ಹೋದದ್ದು ಒಳ್ಳೆಯ ಲಕ್ಷಣವಲ್ಲ. ಉದಾಹರಣೆಗೆ, 'ಏಳುಮಲೆ', ಹಾಗೂ 'ಲವ್ ಯೂ ಮುದ್ದು'. 'ತೀರ್ಥರೂಪ ತಂದೆಯವರಿಗೆ' ಹೆಸರಿನ ಸಿನಿಮಾಕ್ಕೂ ಪ್ರೇಕ್ಷಕರಿಂದ ಉತ್ತಮ ಸ್ಪಂದನೆ ಸಿಗಲಿಲ್ಲ. ರೀಮೇಕ್, ಡಬ್ಬಿಂಗ್‌ಗೆ ಒಗ್ಗಿಕೊಂಡ ಉದ್ಯಮ ಹೊಸ ಸಾಹಸವನ್ನು ಇಷ್ಟಪಡುವುದಿಲ್ಲ. ಒಂದು ವೇಳೆ ಹೊಸ ಪ್ರಯೋಗ ಮಾಡಿದರೂ ಜನ ಸ್ವೀಕರಿಸಲು ತಯಾರಿಲ್ಲ. ಪ್ರೇಕ್ಷಕರ ಅಭಿರುಚಿ ಕೆಡಿಸಿದವರೇ ಈಗ ಬಲಿಪಶುವಾಗುತ್ತಿದ್ದಾರೆ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ರೈಲಿನಲ್ಲಿ ಕನ್ನಡ ಧ್ವನಿಮುದ್ರಿಕೆ ಲೋಪ

ರೈಲು ನಿಲ್ದಾಣ ಹಾಗೂ ರೈಲುಗಳಲ್ಲಿ ಕನ್ನಡೇತರರಿಂದ ಧ್ವನಿಮುದ್ರಿತಗೊಂಡ ಉದ್ಘೋಷಣೆಗಳು ತಪ್ಪು ಉಚ್ಚಾರದಿಂದ ಕೂಡಿರುತ್ತವೆ. ಪ್ರಮುಖವಾಗಿ ರೈಲು ನಿಲ್ದಾಣಗಳ ಹೆಸರನ್ನು ತಪ್ಪಾಗಿ ಉಚ್ಚರಿಸಲಾಗುತ್ತಿದೆ. ರೈಲ್ವೆ ಇಲಾಖೆಯು ಕೇಂದ್ರ ಸರ್ಕಾರದ ಅಧೀನದಲ್ಲಿ ಬರುತ್ತದೆ ಎಂಬ ಅಧಿಕಾರಸ್ಥ ಮನೋಭಾವದ ವ್ಯಸನದಿಂದಾಗಿ ಕನ್ನಡೇತರರಿಂದ ಧ್ವನಿಮುದ್ರಣ ಮಾಡಿಸುವುದು ಒಪ್ಪುವಂಥದ್ದಲ್ಲ. ರೈಲ್ವೆ ಖಾತೆ ರಾಜ್ಯ ಸಚಿವರು ಕರ್ನಾಟಕದವರೇ ಆಗಿದ್ದಾರೆ. ಸಂಸದರು ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಬಗ್ಗೆ ಆಸ್ಥೆವಹಿಸಿ ರೈಲ್ವೆ ಇಲಾಖೆಯ ಗಮನಕ್ಕೆ ತರಬೇಕಿದೆ.

ಜಿ. ಬೈರೇಗೌಡ ಕೊಡಿಗೇಹಳ್ಳಿ, ನೆಲಮಂಗಲ

ಶಿಕ್ಷಕರಿಗೆ ಸ್ಪರ್ಧೆ: ಬದಲಾವಣೆ ಮರೀಚಿಕೆ

ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ಶಿಕ್ಷಣ ಇಲಾಖೆಯಿಂದ ಪ್ರತಿವರ್ಷ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಸಾಮಾನ್ಯಜ್ಞಾನ ರಸಪ್ರಶ್ನೆ, ರಸಪ್ರಶ್ನೆ ವಿಜ್ಞಾನ, ಪ್ರಬಂಧ, ಚಿತ್ರಕಲೆ, ಸ್ಥಳದಲ್ಲಿ ಪಾಠೋಪಕರಣ ತಯಾರಿಕೆ ಮತ್ತು ಆಶುಭಾಷಣ ಸ್ಪರ್ಧೆ ನಡೆಸಲಾಗುತ್ತದೆ. ಈ ಸ್ಪರ್ಧೆಗಳು ತಾಲ್ಲೂಕು ಹಂತದಿಂದ ಜಿಲ್ಲಾ ಮತ್ತು ರಾಜ್ಯಮಟ್ಟದವರೆಗೆ ಸಾಗುತ್ತವೆ. ಸ್ಪರ್ಧೆಗಳ ಬಹುಮಾನದ ಮೊತ್ತ ಕಳೆದ ಹತ್ತು ವರ್ಷಗಳಿಂದ ಪರಿಷ್ಕರಣೆಯಾಗಿಲ್ಲ. ಶಿಕ್ಷಕರ ಜ್ಞಾನವನ್ನು ಓರೆಗೆ ಹಚ್ಚುವ, ಅವರಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವ, ಪಠ್ಯ ವಿಚಾರಗಳಿಂದ ಒಂಚೂರು ಆಚೆತಂದು ನವೋಲ್ಲಾಸ ತರುವ ಆಶಯದೊಂದಿಗೆ ಈ ಸ್ಪರ್ಧೆ ನಡೆಯುತ್ತಿದೆ. ಆದರೆ, ಪ್ರಶಸ್ತಿಯ ಮೊತ್ತ ಮತ್ತು ಸ್ಪರ್ಧೆಗಳ ಆಯೋಜನೆಯಲ್ಲಿ ಸಾಕಷ್ಟು ಬದಲಾವಣೆ ತರದಿರುವುದು ದುರದೃಷ್ಟಕರ.

ಮೇಘನಾ ಮಲ್ಲಪ್ಪ ಕರೇಣ್ಣನವರ, ಹಾವೇರಿ

ವಂದೇ ಭಾರತ್ ರೈಲು: ಹಳಿ ತಪ್ಪಿದ ಆದ್ಯತೆ

ಮುಂದಿನ ನಾಲ್ಕು ವರ್ಷಗಳಲ್ಲಿ 400 ವಂದೇ ಭಾರತ್ ರೈಲುಗಳು ಸಂಚರಿಸಲಿವೆ ಎಂದು ಪ್ರಧಾನಿ ಘೋಷಿಸಿದ್ದಾರೆ. ಈ ರೈಲುಗಳ ಸಂಚಾರವು ಭಾರತದ ಪ್ರಗತಿ ಹೊಂದುತ್ತಿರುವುದರ ಸಂಕೇತವೆಂದು ಅನೇಕರು ಭಾವಿಸಿದಂತಿದೆ. ಆದರೆ, ದೇಶದಲ್ಲಿ 'ಅಗ್ಗ'ವಾದ ವಿಮಾನಯಾನವು ಆರಂಭವಾಗಿ ಎರಡು ದಶಕಗಳಾಗಿವೆ. ವಂದೇ ಭಾರತ್ ರೈಲುಗಳು ನೆಲದ ಮೇಲೆ ಸಾಗುವ ವಿಮಾನದಂತಾಗಿ ಆರಾಮದಾಯಕ ಪ್ರಯಾಣಕ್ಕೆ ಒತ್ತು ಕೊಡುತ್ತಿರುವುದು ಮೇಲ್ಮಧ್ಯಮ ವರ್ಗಕ್ಕೆ ಹಿತವೆನಿಸಬಹುದು. ಆದರೆ, ಕರ್ನಾಟಕವೂ ಸೇರಿ ಅನೇಕ ರಾಜ್ಯಗಳಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ಪ್ರಯಾಣಿಸುವುದಕ್ಕೆ ಬೇಕಿರುವುದು ಸೂಪರ್ ಫಾಸ್ಟ್ ರೈಲುಗಳಾಗಿವೆ. ವಂದೇ ಭಾರತ್ ರೈಲುಗಳಿಗೆ ಅನುಕೂಲಕರ ವೇಳಾಪಟ್ಟಿ ಒದಗಿಸಲು ಹೋಗಿ, ಇಂಟರ್‌ಸಿಟಿ ಎಕ್ಸ್‌ಪ್ರೆಸ್, ಜನಶತಾಬ್ದಿಯಂತಹ ಜನಸ್ನೇಹಿ ರೈಲುಗಳನ್ನು ಆದ್ಯತೆಯ ಪಟ್ಟಿಯಲ್ಲಿ ಕೆಳಗೆ ತಳ್ಳುವುದು ಪ್ರಗತಿಯ ಸಂಕೇತವಲ್ಲ. ಸಾಮಾನ್ಯ ರೈಲುಗಳ ಸಂಖ್ಯೆ ಹೆಚ್ಚಿಸಬೇಕಾಗಿರುವುದು ಇಂದಿನ ತುರ್ತು.

ಶ್ರೀಕಂಠ, ಬೆಂಗಳೂರು

ಪ್ರಮಾಣಪತ್ರಗಳ ಅಡ್ಡಾದಿಡ್ಡಿ ಪರಿಶೀಲನೆ

ಸರ್ಕಾರಿ ಪದವಿ ಕಾಲೇಜುಗಳಿಗೆ ಆಯ್ಕೆಯಾಗಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ತಮ್ಮ ಶೈಕ್ಷಣಿಕ ದಾಖಲೆಗಳಿಗೆ ನೈಜತೆಯ ಪ್ರಮಾಣಪತ್ರ ನೀಡಬೇಕೆಂದು ಆದೇಶಿಸಲಾಗಿದೆ. ಅದರಂತೆ ಉಪನ್ಯಾಸಕರು ಸಲ್ಲಿಸಿರುವ ಸ್ನಾತಕೋತ್ತರ ಪದವಿ, ಎಂ.ಫಿಲ್., ಪಿಎಚ್.ಡಿ, ಕೆ–ಸೆಟ್ ಪ್ರಮಾಣಪತ್ರಗಳನ್ನು ಪರಿಶೀಲಿಸಿ ಅದರ ನೈಜತೆ ಪ್ರಮಾಣಪತ್ರ ಒದಗಿಸುವಂತೆ ಆಯಾ ಕಾಲೇಜಿನ ಪ್ರಾಂಶುಪಾಲರು ವಿಶ್ವವಿದ್ಯಾಲಯಗಳಿಗೆ ಕೋರಿದ್ದಾರೆ. ಆದರೆ, ವಿ.ವಿಗಳು ಪ್ರಾಂಶುಪಾಲರು ಕಳುಹಿಸಿರುವ ಜೆರಾಕ್ಸ್ ಪ್ರತಿಗಳ ಮೇಲೆಯೇ 'ನೈಜತೆ'ಯೆಂದು ದೃಢೀಕರಿಸಿ ವಾಪಸ್ ಕಳುಹಿಸುತ್ತಿವೆ. ಇದು ಅಕ್ರಮಕ್ಕೆ ಎಡೆಮಾಡಿಕೊಡಲಿದೆ. ಉನ್ನತ ಶಿಕ್ಷಣ ಇಲಾಖೆಯ ಆಯುಕ್ತರು ಈ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕಿದೆ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

ಚುರುಮುರಿ



ನಾಮ ಬಲ

• ಸುಮಂಗಲಾ

'ಅಬ್ಬಾ... ಅಂತೂ ಇಂತೂ ಬ್ರಿಟಿಷ್ ಆಡಳಿತ ಪದ್ಧತಿಯಿಂದ ನಮಗೆ ಈಗ ಮುಕ್ತಿ ಸಿಕ್ತು ನೋಡವಾ' ಪೇಪರು ಓದುತ್ತಿದ್ದ ಬೆಕ್ಕಣ್ಣ ಖುಷಿಯಿಂದ ಒದರಿತು.

'1947ರ ಆಗಸ್ಟಿನಲ್ಲೇ ನಮಗೆ ಮುಕ್ತಿ ಸಿಕ್ಕೈತಲ್ಲ... ಈಗೇನು ಹೊಸದಾಗಿ ಸಿಕ್ತು?' ಅಚ್ಚರಿಯಿಂದ ಕೇಳಿದೆ.

'ನಿಮ್ಮಂಥೋರಿಗೆ ಬುದ್ಧಿನೇ ಇಲ್ಲ! ಆವಾಗ ಸ್ವಾತಂತ್ರ್ಯ ಸಿಕ್ಕಿದ್ದರೂ, ಪ್ರಧಾನಿ ಕಾರ್ಯಾಲಯ, ಗೃಹ ಕಾರ್ಯಾಲಯ ಎಲ್ಲಿದ್ದವು? ಅದೇನೋ ಸೌತ್ ಬ್ಲಾಕ್ ಅಂತಾರಲ್ಲ ಅಲ್ಲಿದ್ದವು. ಈಗ ನಮ್ ಮೋದಿಮಾಮಾರು ಒಂದೊಂದೇ ಬ್ಯಾರೆಕಡಿಗಿ ಬದಲಿಸಲಾಕೆ ಹತ್ಯಾರ' ಎಂದು ಮೀಸೆ ತಿರುವಿತು.

'ಅದಕ್ಕೇನಾ ನಿಮ್ಮ ಕಂಗನಾಕ್ಕ ಹೇಳಿದ್ದು... ನಮಗೆ ಸ್ವಾತಂತ್ರ್ಯ ಬಂದಿದ್ದು 1947ರಲ್ಲಿ ಅಲ್ಲ, 2014ರಲ್ಲಿ ಅಂತ' ಎಂದೆ.

'ಆಕಿ ಖರೇನೆ ಹೇಳ್ಯಾಳ! ಬ್ರಿಟಿಷ್ ಆಡಳಿತಶಾಹಿ ಪಳೆಯುಳಿಕೆಯಾಗಿತ್ತು ಸೌತ್ ಬ್ಲಾಕಿನ ಪ್ರಧಾನಿ ಕಾರ್ಯಾಲಯ. ಈಗ ಬ್ಯಾರೆ ಕಡೆ ಹೊಸಾ ಕಾಂಪ್ಲೆಕ್ಸ್ ಮಾಡಿ, 'ಸೇವಾ ತೀರ್ಥ' ಅಂತ ಹೆಸರಿಟ್ಟಾರೆ.'

'ಕರ್ಮಯೋಗಿ ಅಂತ ಇಡಬೇಕಿತ್ತು' ಎಂದು ನಾನು ಕುಟುಕಿದೆ.

'ನಮ್ ಮೋದಿಮಾಮಾರೇ ಸ್ವತಃ ಕರ್ಮಯೋಗಿ! ಜನಸೇವೆಯೇ ಭಗವಂತನ ಪ್ರಸಾದ ಅಂತ ಕೆಲಸ ಮಾಡತಾರೆ... ಅದಕ್ಕೇ ಸೇವಾ ತೀರ್ಥ ಅಂತ ಹೆಸರಿಟ್ಟಾರೆ.' ಬೆಕ್ಕಣ್ಣ ಗರ್ವದಿಂದ ಮೀಸೆ ತಿರುವಿತು.

'ಇನ್ನು ಜನರ ತೀರ್ಥಯಾತ್ರೆಗಳ ಪಟ್ಟಿಗೆ ಅದೂ ಸೇರಬಹುದೇನೋ' ಎಂದೆ.

'ತಪ್ಪೇನೈತಿ ಅದ್ರಾಗೆ? ನಮ್ ರಾಜ್ಯದಾಗೂ ಸಿಎಂ ನಿವಾಸದ ಹೆಸರು ಬದಲಿ ಮಾಡಬಕು' ಎಂದು ಮುಗುಮ್ಮಾಗಿ ಹೇಳಿತು.

'ಕಾವೇರಿಯಲ್ಲಿದ್ದುಕೊಂಡೇ ಐದು ವರ್ಷ ಸಿಎಂ ಆಗಿದ್ದು ಸಿದ್ದು ಅಂಕಲ್ ಒಬ್ಬರೇ ಅಂತೆ. ಈಗ ಎರಡನೇ ಸಲ ಸಿಎಂ ಆದಾಗಿನಿಂದ ಅವರ ಕುರ್ಚಿ ಅಲುಗಾಡತೈತಿ. ನೀ ಹೇಳಿದಂಗೆ ಹೆಸರು ಬದಲಿ ಮಾಡೂದು ಒಳ್ಳೇದು' ಎಂದೆ.

'ಕುರ್ಚಿ ಬಲಕ್ಕೆ ನಾಮ ಬಲವೂ ಬೇಕು ತಿಳಕೋ' ಎಂದು ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ಸಂಗತ

ಸರ್ವವ್ಯಾಪಿ ಜಾತಿ: ಸಮಾಜದ ಹಿಂಚಲನೆ

ಶಿಕ್ಷಣ–ವಿಜ್ಞಾನ ಪ್ರಗತಿಯಾದರೂ ಜಾತಿವ್ಯಸನ ಜೀವಂತವಾಗಿದೆ. ನಿರ್ಮೂಲನೆ ಮಾಡಬೇಕಾದ ಮಠಗಳು, ರಾಜಕಾರಣಿಗಳೇ ಜಾತಿಯ ಪೋಷಕರಾಗಿದ್ದಾರೆ.

• ರಾಜಕುಮಾರ ಕುಲಕರ್ಣಿ

ಮರ್ಯಾದೆ ಹೆಸರಿನ ಮರ್ಯಾದೆಗೇಡು ಹತ್ಯೆಗಳು ಸಮಾಜದಲ್ಲಿ ವೃದ್ಧಿಸುತ್ತಿರುವ ಜಾತಿಪ್ರೇಮಕ್ಕೆ ನಿದರ್ಶನಗಳಾಗಿವೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಾಕಷ್ಟು ಪ್ರಗತಿಯಾಗಿರುವ ದಿನಗಳಲ್ಲೂ ಜಾತಿಪ್ರೇಮವನ್ನು ಮೈಗೂಡಿಸಿಕೊಂಡಿರುವ ಸಮಾಜ ಹಿಮ್ಮುಖವಾಗಿ ಚಲಿಸುತ್ತಿರುವಂತೆ ಭಾಸವಾಗುತ್ತಿದೆ.

ಯಶವಂತ ಚಿತ್ತಾಲರು ಹೇಳಿದಂತೆ, 'ಮನುಷ್ಯ ಯಾವ ಕ್ರೂರ ಮೃಗಗಳಿಗೂ ಹೆದರಬೇಕಾಗಿಲ್ಲ. ಹೆದರಬೇಕಿರುವುದು ತನ್ನಂತೆಯೇ ಕಾಣಿಸುತ್ತಿರುವ ಮನುಷ್ಯರಿಗೆ' ಎನ್ನುವ ಮಾತು ಅಕ್ಷರಶಃ ಸತ್ಯವಾಗಿದೆ. ಮನುಷ್ಯ ಸುಶಿಕ್ಷಿತನಾದಷ್ಟೂ ಜಾತಿಪ್ರೇಮ ಸಾಂಕ್ರಾಮಿಕ ಜಾಡ್ಯದಂತೆ ವ್ಯಾಪಿಸುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವವರಿಗಿಂತ ನಗರ ಪ್ರದೇಶಗಳ ಜನರು ನಾಗರಿಕತೆಯನ್ನು ಹೆಚ್ಚು ಮೈಗೂಡಿಸಿಕೊಂಡಿರುತ್ತಾರೆ ಎನ್ನುವ ನಂಬಿಕೆ ಇದೆ. ವಿಪರ್ಯಾಸವೆಂದರೆ, ಇಂದು ನಗರ ಪ್ರದೇಶಗಳಲ್ಲೂ ಜಾತಿಸಮಸ್ಯೆ ತಾಂಡವವಾಡುತ್ತಿದೆ. ಜಾತಿಗೊಂದು ವಸತಿ ಸಂಕೀರ್ಣಗಳು ನಗರಗಳಲ್ಲಿ ತಲೆ ಎತ್ತಿವೆ. ದಲಿತರು ಮತ್ತು ಹಿಂದುಳಿದ ವರ್ಗದವರಿಗೆ ಮನೆಗಳು ಬಾಡಿಗೆಗೆ ದೊರೆಯುವುದು ದುರ್ಲಭವಾಗಿದೆ. ಇತ್ತೀಚೆಗೆ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪಾಲ್ಗೊಂಡ ಶಿಕ್ಷಕರು ಜಾತಿಕಾರಣದಿಂದಾಗಿ ಅನುಭವಿಸಿದ ವೇದನೆ ಹೇಳತೀರದು. ಜಾತಿಪ್ರೇಮದಿಂದಾಗಿ ಅದೆಷ್ಟೋ ಮನೆಗಳಲ್ಲಿ ಶಿಕ್ಷಕರನ್ನು ಬಿರುಬಿಸಿಲಿನಲ್ಲಿಯೇ ನಿಲ್ಲಿಸಿ ಮಾಹಿತಿ ನೀಡಿದ ಉದಾಹರಣೆಗಳಿವೆ.



ಇಂದಿಗೂ ಅಪರಿಚಿತರನ್ನು 'ನಿಮ್ಮ ಸರ್‌ನೇಮ್ ಏನು?' ಎಂದು ಕೇಳುವ ಪದ್ಧತಿ ಕೆಲವೆಡೆ ರೂಢಿಯಲ್ಲಿದೆ. ಮನೆತನದ ಹೆಸರು ಜಾತಿ ಸೂಚಕವಾಗಿರುವುದು ಸಾಮಾನ್ಯವಾಗಿದೆ. ಈ ಕಾರಣದಿಂದ ಮನುಷ್ಯನ ಜಾತಿಯನ್ನು ಗುರುತಿಸಲು ಮನೆತನದ ಹೆಸರನ್ನು ಕೇಳಲಾಗುತ್ತದೆ. ಜಾತಿ ಸೂಚಕವಾಗಿರುವ ಮನೆತನದ ಹೆಸರಿನ ಗೊಡವೆಯೇ ಬೇಡವೆಂದು ಹಿಂದುಳಿದ ವರ್ಗಗಳ ವಿದ್ಯಾವಂತರು ಊರಿನ ಹೆಸರನ್ನು ಅಡ್ಡಹೆಸರಾಗಿಸಿಕೊಳ್ಳುತ್ತಿರುವ ಮನೋಭಾವ ನಿಧಾನವಾಗಿ ರೂಪುಗೊಳ್ಳುತ್ತಿದೆ. ಈ ವಿಷಯದಲ್ಲಿ ಜಾತಿ ಸೂಚಕವಾದ ಮನೆತನದ ಹೆಸರನ್ನು ಕೈಬಿಟ್ಟ ಗದುಗಿನ 'ವೀರೇಶ್ವರ ಪುಣ್ಯಾಶ್ರಮ'ದ ನಡೆ ಮಾದರಿಯಾದುದು. ಆಶ್ರಮದಲ್ಲಿ ಆಗ ಗುರುಗಳಾಗಿದ್ದ ಪಂಡಿತ ಪುಟ್ಟರಾಜ ಗವಾಯಿ ಅವರು, ಪ್ರತಿಯೊಬ್ಬ ಶಿಕ್ಷಣಾರ್ಥಿಯನ್ನು ಆತನ ಊರಿನ ಹೆಸರಿನಿಂದ ಕರೆಯುತ್ತಿದ್ದರು. ವಿದ್ಯಾರ್ಥಿಯ ಮನೆತನದ ಹೆಸರನ್ನು ತಪ್ಪಿಯೂ ಬಳಸುತ್ತಿರಲಿಲ್ಲ. ಮನೆತನದ ಹೆಸರು ಜಾತಿ ಸೂಚಕ ಆಗಿರುವುದರಿಂದ ಆಶ್ರಮದಲ್ಲಿ ಜಾತಿವ್ಯವಸ್ಥೆ ಅನಾವರಣಗೊಳ್ಳುವುದು ಗುರುಗಳಿಗೆ ಇಷ್ಟವಿರಲಿಲ್ಲ. ಇಂಥದ್ದೊಂದು ಜಾತ್ಯತೀತ ಕಲ್ಪನೆ ಇಂದು ಮಠಗಳಲ್ಲಿ ಮರೆಯಾಗಿದೆ.

ಸಮಾಜದಲ್ಲಿ ಮನೆಮಾಡಿರುವ ಎಲ್ಲ ಅಸಂಗತಗಳಿಗೆ ಶಿಕ್ಷಣವೇ ಏಕೈಕ ಪರಿಹಾರ. ಈ ಕಾರಣದಿಂದಲೇ ಅಂಬೇಡ್ಕರ್ ದಲಿತ ಮತ್ತು ಹಿಂದುಳಿದವರನ್ನು ಮುಖ್ಯವಾಹಿನಿಗೆ ಕರೆತರಲು ಶಿಕ್ಷಣವನ್ನು ಅಸ್ತ್ರವಾಗಿ ಬಳಸಿಕೊಂಡರು. ದುರಂತವೆಂದರೆ, ಬದಲಾವಣೆಗೆ ಕಾರಣವಾಗಬೇಕಾದ ಶಿಕ್ಷಣ ವ್ಯವಸ್ಥೆ ಇಂದು ಜಾತಿಪ್ರೇಮದ ಕಬಂಧಬಾಹುಗಳಲ್ಲಿ ಸೆರೆಯಾಗಿದೆ. ಮಾದರಿಯಾಗಬೇಕಾದ ಶಿಕ್ಷಕರು ಜಾತಿಪ್ರೇಮದ ಅಮಲಿನಲ್ಲಿ ಕ್ರೌರ್ಯ ಮೆರೆಯುತ್ತಿರುವುದನ್ನು ಅಲ್ಲಲ್ಲಿ ಕಾಣಬಹುದು. ಜ್ಞಾನವನ್ನು ವೃದ್ಧಿಸಬೇಕಾದ ವಿಶ್ವವಿದ್ಯಾಲಯಗಳು ಜಾತಿಕೇಂದ್ರಗಳಾಗಿ ರೂಪಾಂತರಗೊಂಡಿವೆ. ವಿ.ವಿಗಳಲ್ಲಿ ಜಾತಿ ಆಧರಿಸಿ ಗುಂಪುಗಾರಿಕೆ ಬೆಳೆಯುತ್ತಿದೆ. ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಜಾತಿ, ಉಪಜಾತಿಗಳಾಗಿ ಒಡೆದುಹೋಗಿದ್ದಾರೆ. ಒಂದು ಕೋಮಿಗೆ ಸೇರಿದ ಪ್ರಾಧ್ಯಾಪಕ ಇನ್ನೊಂದು ಕೋಮಿಗೆ ಸೇರಿದ ವಿದ್ಯಾರ್ಥಿಯ ಸಂಶೋಧನೆಗೆ ಮಾರ್ಗದರ್ಶಕನಾಗುವುದು ವಿರಳ.

ಸಮಾಜದಲ್ಲಿ ಜಾತಿವ್ಯವಸ್ಥೆ ರೂಪುಗೊಳ್ಳುವಲ್ಲಿ ಮಠ–ಮಂದಿರಗಳ ಕೊಡುಗೆ ಗಮನಾರ್ಹವಾಗಿದೆ. ಒಂದು ಕಾಲದಲ್ಲಿ ಜಾತಿವ್ಯವಸ್ಥೆಯನ್ನು ಪ್ರತಿರೋಧಿಸಿ ನಿಂತಿದ್ದ ಮಠಗಳು ಈಗ ಜಾತಿಪ್ರೇಮವನ್ನು ಪೋಷಿಸುವ ಕೇಂದ್ರಗಳಾಗಿವೆ. ಬಡ ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶ ಮೂಲೆಗುಂಪಾಗಿ ಮಠಗಳು ರಾಜಕೀಯ ಪಕ್ಷಗಳಂತಾಗಿವೆ. ತಮ್ಮ ತಮ್ಮ ಜಾತಿಯ ನೇತಾರರನ್ನು ಶಾಸಕ, ಸಚಿವರನ್ನಾಗಿಸಲು ಮಠಗಳು ಪೈಪೋಟಿ ನಡೆಸುತ್ತಿವೆ.

ದೇವನೂರ ಮಹಾದೇವ ತಮ್ಮ 'ಎದೆಗೆ ಬಿದ್ದ ಅಕ್ಷರ' ಪುಸ್ತಕದಲ್ಲಿ ವಿವರಿಸಿದ ಪ್ರಸಂಗವೊಂದು ಹೀಗಿದೆ: 'ಯು.ಆರ್. ಅನಂತಮೂರ್ತಿ ಅವರ ಆರೋಗ್ಯ ಬಿಗಡಾಯಿಸಿ ದೆಹಲಿಯ ಆಸ್ಪತ್ರೆಯಲ್ಲಿ ಅರೆಪ್ರಜ್ಞಾವಸ್ಥೆ ಸ್ಥಿತಿಯಲ್ಲಿದ್ದಾಗ, ಅವರು ನನಗೆ ಗಾಯತ್ರಿ ಮಂತ್ರವನ್ನು ಹೇಳಿಕೊಟ್ಟಂತೆ ಬೋಧೆಯಾಯ್ತಂತೆ. ಅವರು ಇದನ್ನು ನನಗೆ ಹೇಳಿದಾಗ ನಾನೆಂದೆ: 'ಸಾರ್, ಇದು ಮಾಮೂಲಿ ನಡಿಗೆ. ಪ್ರಜ್ಞಾವಸ್ಥೆ ಸ್ಥಿತಿಯಲ್ಲಾದರೂ ನಾನು ನಿಮಗೆ ಗಾಯತ್ರಿ ಮಂತ್ರ ಹೇಳಿಕೊಟ್ಟಂತೆ ಬೋಧೆಯಾಗಿದ್ದರೆ ಭಾರತದ ಮನಸ್ಸಿಗೆ ಚಲನೆ ಬರುತ್ತಿತ್ತಲ್ಲವೇ?' ಎಂದು. ದೇವನೂರರು ಹೇಳಿದಂತೆ ಮನುಷ್ಯನ ಮನಸ್ಸು ಪ್ರಜ್ಞಾಪೂರ್ವಕವಾಗಿ ಜಾತಿಯ ಸಂಕೋಲೆಗಳಿಂದ ಮುಕ್ತವಾಗಬೇಕಿದೆ.

ನಲವತ್ತು ವರ್ಷಗಳ ಹಿಂದೆ ಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಮುಖ್ಯಶಿಕ್ಷಕರಾಗಿದ್ದ ನನ್ನ ದೊಡ್ಡಪ್ಪ ತಮ್ಮ ಮನೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಭೇಟಿ ನೀಡಿದರೆಂದು ಮನೆತುಂಬ ಗೋಮೂತ್ರ ಸಿಂಪಡಿಸಿ ಪವಿತ್ರಗೊಳಿಸಿದ್ದರು. ಅಧಿಕಾರಿ ದಲಿತ ಸಮುದಾಯದವರೆನ್ನುವುದು ಅವರ ಈ ವರ್ತನೆಗೆ ಕಾರಣವಾಗಿತ್ತು. ಅದೇ ದೊಡ್ಡಪ್ಪ ನಾಲ್ಕು ವರ್ಷಗಳ ಹಿಂದೆ ತಮ್ಮ ಮೊಮ್ಮಗನ ಮದುವೆಗೆ ತಮಗೆ ಆಪ್ತರಾದ ಊರಿನ ದಲಿತ ಕುಟುಂಬದವರನ್ನು ಆಮಂತ್ರಿಸಿದ್ದರು. ಆ ಕ್ಷಣಕ್ಕೆ ದೊಡ್ಡಪ್ಪನ ಮೇಲೆ ಅಭಿಮಾನ ಮೂಡಿತು. ಜಾತಿಪ್ರೇಮದ ಜಾಡ್ಯದಿಂದ ಹೊರಬಂದು ಸಮಾಜದ ಮುಮ್ಮುಖ ಚಲನೆಯನ್ನು ಸಾಧ್ಯವಾಗಿಸುವ ಮನೋಭಾವ ಮೈಗೂಡಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯ.


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರತದ ಪ್ರಜಾಪ್ರಭುತ್ವದ ಸ್ಥಿರತೆಗೆ ಕಾರಣಗಳು

• ಕೆ.ಎನ್. ಹರಿಕುಮಾರ್

ಭಾರತದ ನೆರೆ ರಾಷ್ಟ್ರಗಳಲ್ಲಿ ಹಿಂಸಾತ್ಮಕ ಪ್ರತಿಭಟನೆ, ದಂಗೆ, ಕ್ಷಿಪ್ರಕ್ರಾಂತಿಯಂತಹ ವಿಪ್ಲವಗಳು ನಡೆದಿವೆ, ನಡೆಯುತ್ತಿವೆ. ಅಮೆರಿಕದಲ್ಲಿ ಟ್ರಂಪ್ ಅವರು ಮತ್ತೆ ಅಧ್ಯಕ್ಷರಾಗಿ ದೇಶೀಯ ಮತ್ತು ವಿದೇಶ ನೀತಿಯಲ್ಲಿ ಕ್ಷಿಪ್ರ ಪಲ್ಲಟಗಳನ್ನು ತಂದು ಪರಿವರ್ತನೆಗೆ ಕಾರಣರಾಗುತ್ತಿದ್ದಾರೆ. ಇಡೀ ಜಗತ್ತಿನಲ್ಲಿ ತೀವ್ರವಾದ ಬದಲಾವಣೆಗಳು ನಡೆಯುತ್ತಿವೆ. ಹೀಗಿದ್ದರೂ ಭಾರತದಲ್ಲಿ ಸಾಂವಿಧಾನಿಕ ಪ್ರಜಾಪ್ರಭುತ್ವ ಸ್ಥಿರವಾಗಿ ಮುಂದುವರಿದಿದೆ. ಈ ಕುರಿತು ಒಂದು ವಿಶ್ಲೇಷಣೆ

ಭಾಗ 1



ನೇಪಾಳದಲ್ಲಿ ಕಳೆದ ಸೆಪ್ಟೆಂಬರ್‌ನಲ್ಲಿ ಜೆನ್ ಝೀ (1997ರಿಂದ 2012ರ ನಡುವೆ ಜನಿಸಿದ ತಲೆಮಾರು) ನಡೆಸಿದ ಪ್ರತಿಭಟನೆಗಳು ದಿಢೀರ್ ಮತ್ತು ತ್ವರಿತವಾಗಿ ತೀವ್ರ ಹಿಂಸೆ, ವಿನಾಶಕ್ಕೆ ತಿರುಗಿ ಆಡಳಿತವನ್ನು ಬುಡಮೇಲುಗೊಳಿಸಿದವು. ಇತ್ತೀಚೆಗೆ ಇಂತಹದೇ ವಿಪ್ಲವಗಳು ನಮ್ಮ ನೆರೆಯಲ್ಲಿ ನಡೆದಿವೆ. ಅಫ್ಗಾನಿಸ್ತಾನ, 2024ರಲ್ಲಿ ಬಾಂಗ್ಲಾದೇಶದ ಶೇಖ್ ಹಸೀನಾ ಸರ್ಕಾರದ ಪದಚ್ಯುತಿ ಮತ್ತು 2022ರಲ್ಲಿ ಶ್ರೀಲಂಕಾ ಸರ್ಕಾರದ ಕುಸಿತ. ಮ್ಯಾನ್ಮಾರ್‌ನಲ್ಲಿ 2021ರಲ್ಲಿ ನಡೆದ ಕ್ಷಿಪ್ರಕ್ರಾಂತಿಯು ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರವನ್ನು ಉರುಳಿಸಿ ಸೇನಾ ಸರ್ಕಾರವನ್ನು ಸ್ಥಾಪಿಸಿತು. ಬಳಿಕ, ದಂಗೆ ಮತ್ತು ಅಂತರಿಕ ಯುದ್ಧ ನಡೆದವು. ಎರಡು ದಶಕಗಳ ಹಿಂದೆ ನೇಪಾಳದಲ್ಲಿ ಮಾವೋವಾದಿ ನಾಯಕತ್ವದಲ್ಲಿ ನಡೆದ ದಂಗೆ ಮತ್ತು ಅಂತರ್ಯುದ್ಧವು ರಾಜಪ್ರಭುತ್ವವನ್ನು ಕಿತ್ತೆಸೆದು ಸಾಂವಿಧಾನಿಕ ಪ್ರಜಾಪ್ರಭುತ್ವ ಗಣರಾಜ್ಯ ವ್ಯವಸ್ಥೆಯನ್ನು ಸ್ಥಾಪಿಸಿತು. 1971ರಲ್ಲಿ ನಡೆದ ಅಂತರ್ಯುದ್ಧವು ಪಾಕಿಸ್ತಾನದಿಂದ ಬಾಂಗ್ಲಾದೇಶವನ್ನು ಪ್ರತ್ಯೇಕಿಸಿತು.

ಭೂಮಂಡಲದ ಇನ್ನೊಂದೆಡೆ, ಡೊನಾಲ್ಡ್ ಟ್ರಂಪ್ ಅವರು ಅಮೆರಿಕದಲ್ಲಿ ಮತ್ತೆ ಅಧ್ಯಕ್ಷರಾಗಿ ಎರಡನೇ ಅವಧಿಯ ಮೊದಲ ದಿನದಿಂದಲೇ ದೇಶೀಯ ಮತ್ತು ವಿದೇಶ ನೀತಿ ಕ್ಷೇತ್ರಗಳ ವಿವಿಧ ವಿಚಾರಗಳಲ್ಲಿ ಹಿಂದೆಂದೂ ಕೇಳರಿಯದಂತಹ ಕ್ಷಿಪ್ರ ಪಲ್ಲಟಗಳ ಮೂಲಕ ಹಲವು ಬದಲಾವಣೆಗಳನ್ನು ಜಾರಿಗೆ ತಂದರು.

2020ರ ಜನವರಿಯಲ್ಲಿ ತಾವು ಸೋತ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶವನ್ನು ಬುಡಮೇಲುಗೊಳಿಸಲು ಯತ್ನಿಸಿದ ದೋಷಾರೋಪದ ನಂತರ ಟ್ರಂಪ್ ಅವರು ಅಧಿಕಾರಕ್ಕೆ ಬಂದಿದ್ದಾರೆ ಎಂಬುದು ಗಮನಾರ್ಹ. ಶತಮಾನಗಳಷ್ಟು ಹಳೆಯದಾದ ಸ್ಥಿರ ಪ್ರಜಾಪ್ರಭುತ್ವದಲ್ಲಿ ಇಂತಹುದೊಂದು ದೊಡ್ಡ ಬಿಕ್ಕಟ್ಟು ಸೃಷ್ಟಿಯಾಗಿ 150ಕ್ಕೂ ಹೆಚ್ಚು ವರ್ಷಗಳಾಗಿದ್ದವು; ಅದರ ಅಸ್ಥಿರತೆಗೆ ಕಾರಣವಾದ ಅಂತರ್ಯುದ್ಧವದು. ಎರಡನೇ ಮಹಾಯುದ್ಧೋತ್ತರ ಕಾಲದಲ್ಲಿ, ದಕ್ಷಿಣ ಜಗತ್ತು ಮತ್ತು ಹೆಚ್ಚು ಅಭಿವೃದ್ಧಿ ಹೊಂದಿದ ಪೂರ್ವ ಯುರೋಪ್‌ನ ದೇಶಗಳು ಅಸ್ಥಿರತೆ ಮತ್ತು ತೀವ್ರವಾದ ಪಲ್ಲಟಗಳಿಂದ ಹೆಚ್ಚು ಬಾಧಿತವಾದರೆ ಪಶ್ಚಿಮದ ದೇಶಗಳು ಅತೀತ ಎಂಬ ಭಾವನೆ ಸಾಮಾನ್ಯವಾಗಿ ಇದ್ದುದು ಕೂಡ ಈ ಅಸ್ಥಿರತೆಗೆ ಕಾರಣ.

ಒಳ್ಳೆಯದು ಮತ್ತು ಕೆಟ್ಟದ್ದಕ್ಕಾಗಿ ಇತ್ತೀಚಿನ ದಶಕಗಳಲ್ಲಿ ಇತರ ದೇಶಗಳಲ್ಲಿ ನಡೆದಿರುವ ತೀವ್ರವಾದ ಬದಲಾವಣೆಗಳಲ್ಲಿ ಇವುಗಳು ಒಳಗೊಂಡಿವೆ: 2010ರ ಆರಂಭಿಕ ದಿನಗಳಲ್ಲಿ 'ಅರಬ್ ವಸಂತ'ದ ಭಾಗವಾಗಿ ನಡೆದ ಬಂಡಾಯಗಳು ಕೆಲವು ನಿರಂಕುಶ ಆಡಳಿತಗಳನ್ನು ಉರುಳಿಸಿದವು; ನಂತರದಲ್ಲಿ ಸ್ಥಿರವಾದ ಪ್ರಜಾಸತ್ತಾತ್ಮಕ ಸರ್ಕಾರ ರಚನೆಯ ಪ್ರಯತ್ನಗಳಲ್ಲಿ ಹೆಚ್ಚಿನವು ನಿಷ್ಫಲ ಎನಿಸಿಕೊಂಡವು. ಅಟಾಟರ್ಕ್‌ನ ಜಾತ್ಯತೀತ, ಆಧುನೀಕರಣವಾದಿ ಟರ್ಕಿಯನ್ನು ನಿರಂಕುಶವಾದಿ ಇಸ್ಲಾಮಿಕ್ ದೇಶವಾಗಿ ಪರಿವರ್ತಿಸುವ ಕೆಲಸ ನಿಧಾನವಾಗಿ ನಡೆದಿದೆ ಮತ್ತು ಜಾತ್ಯತೀತ ಶಕ್ತಿಗಳ ಸಂರಕ್ಷಕರಾಗಿ ಬೆನ್ನು ಮುರಿಯುವ ಕೆಲಸವನ್ನು ಅಧ್ಯಕ್ಷ ಎರ್ಡೋಗನ್ ಅವರ ಸೇನೆಯು ಮಾಡಿದೆ. ಇನ್ನೂ ಕೆಲವು ದಶಕ ಹಿಂದಕ್ಕೆ ಹೋದರೆ, ಪೂರ್ವ ಯುರೋಪ್‌ನ ಕಮ್ಯುನಿಸ್ಟ್ ಸರ್ಕಾರಗಳು ಮತ್ತು ಹಿಂದೆ ಇದ್ದ ಸೋವಿಯತ್ ಒಕ್ಕೂಟ ಪತನಗೊಂಡವು. ಇರಾನ್‌ನಲ್ಲಿ ಅಯತುಲ್ಲಾ ಖೊಮೇನಿ ನೇತೃತ್ವದಲ್ಲಿ ನಡೆದ ಸಾಮೂಹಿಕ ಹಿಂಸಾತ್ಮಕ ಬಂಡಾಯವು ಶಾ ನೇತೃತ್ವದ ಜಾತ್ಯತೀತ ನಿರಂಕುಶಾಧಿಪತ್ಯವನ್ನು ಕಿತ್ತೆಸೆದು ದೇವಪ್ರಭುತ್ವವನ್ನು ಸ್ಥಾಪಿಸಿತು. ಇದಲ್ಲದೆ, ಎರಡನೇ ಜಾಗತಿಕ ಮಹಾಯುದ್ಧದ ಬಳಿಕ, ಪಶ್ಚಿಮದ ಸಾಮ್ರಾಜ್ಯಶಾಹಿ ಪ್ರಾಬಲ್ಯದ ಪತನದ ನಂತರದಲ್ಲಿ ಲ್ಯಾಟಿನ್ ಅಮೆರಿಕದ ದೇಶಗಳು ಮತ್ತು ಆಫ್ರಿಕಾ ಹಾಗೂ ಏಷ್ಯಾದ ಹೊಸದಾಗಿ ಸ್ವಾತಂತ್ರ್ಯ ಪಡೆದುಕೊಂಡ ದೇಶಗಳು ಸ್ವತಂತ್ರ ರಾಷ್ಟ್ರೀಯವಾದಿ ಸರ್ಕಾರ ರಚಿಸಿಕೊಂಡವು; ನಂತರ ಅಲ್ಲಿ ಹಲವು ರಾಜಕೀಯ ಅಸ್ಥಿರತೆಗಳು ಮತ್ತು ಸೇನಾ ನಿರಂಕುಶಾಧಿಪತ್ಯಗಳು ಉಂಟಾದವು.

ಇತ್ತೀಚೆಗೆ ನಮ್ಮ ನೆರೆಯಲ್ಲಿ ನಡೆದ ಬೆಳವಣಿಗೆಗಳ ಸಂದರ್ಭದಲ್ಲಿ, ಭಾರತದಲ್ಲಿ ಸಾಂವಿಧಾನಿಕ ಪ್ರಜಾಪ್ರಭುತ್ವದ ಮುಂದುವರಿಕೆ ಮತ್ತು ಅದರ ಅಸಾಧಾರಣ ಸ್ಥಿರತೆಯು ವಿಶ್ಲೇಷಕರ ಗಮನವನ್ನು ಮತ್ತೊಮ್ಮೆ ಸೆಳೆದಿವೆ. ಸ್ವಾತಂತ್ರ್ಯ ನಂತರದಲ್ಲಿ ಭಾರತದ ರಾಜಕಾರಣ ಮತ್ತು ಸಮಾಜದಲ್ಲಿ ಸಾರ್ವಜನಿಕ ಜೀವನವು ತೀವ್ರವಾದ ವಿವಾದಾತ್ಮಕ, ಹಠಾತ್ ಬದಲಾವಣೆಗಳು ಕಂಡುಬಂದರೂ ಮತ್ತು ಕೆಲವೊಮ್ಮೆ ಹಿಂಸಾತ್ಮಕ ಎನಿಸಿದರೂ 21 ತಿಂಗಳ ತುರ್ತುಪರಿಸ್ಥಿತಿ ಹೊರತುಪಡಿಸಿದರೆ ಪ್ರಜಾಸತ್ತಾತ್ಮಕ ಸಾಂವಿಧಾನಿಕ ಚೌಕಟ್ಟಿನ ವ್ಯಾಪ್ತಿಯೊಳಗೇ ಇತ್ತು. ಟ್ರಂಪ್ ನಡೆಸಿದ ಪ್ರಯತ್ನಕ್ಕೆ ವ್ಯತಿರಿಕ್ತ ಎಂಬಂತೆ ರಾಜ್ಯ ಮತ್ತು ರಾಷ್ಟ್ರೀಯ ಚುನಾವಣೆಗಳಲ್ಲಿ ಸೋತವರು ಸೋಲನ್ನು ಸ್ವೀಕರಿಸಿದ್ದಾರೆ. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ನಡೆದ ಚುನಾವಣೆಯಲ್ಲಿ ಸೋತ ಇಂದಿರಾ ಗಾಂಧಿ ಅವರು ಅಧಿಕಾರದಿಂದ ಕೆಳಕ್ಕೆ ಇಳಿದರು. ಈ ವಿದ್ಯಮಾನವನ್ನು ಹೇಗೆ ವಿವರಿಸಬಹುದು ಮತ್ತು ಅದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುವ ಅಂಶಗಳು ಯಾವುವು ಎಂಬುದನ್ನು ಶೋಧಿಸುವ ಗುರಿಯನ್ನು ಈ ಲೇಖನದಲ್ಲಿ ನಾನು ಹೊಂದಿದ್ದೇನೆ.



ನಾನು ಕಟ್ಟಿಕೊಟ್ಟ ಚಿತ್ರಣ, ಅದರಲ್ಲೂ ವಿಶೇಷವಾಗಿ ಭಾರತದ ರಾಜಕಾರಣ ಮತ್ತು ಸಮಾಜದ ಮೇಲೆ ನರೇಂದ್ರ ಮೋದಿ ನೇತೃತ್ವದ ಬಿಜೆಪಿಯ ಪ್ರಾಬಲ್ಯ ಏರಿಕೆಯ ವಿಚಾರವನ್ನು ಕೆಲವು ವಿಶ್ಲೇಷಕರು ಪ್ರಶ್ನಿಸುತ್ತಾರೆ ಎಂಬುದರಲ್ಲಿ ಸಂದೇಹವೇನೂ ಇಲ್ಲ. ಅವರು ಹಲವು ಬೆಳವಣಿಗೆಗಳು ಮತ್ತು ಲಕ್ಷಣಗಳನ್ನು ಉಲ್ಲೇಖಿಸಬಹುದು; ಮೋದಿ ನೇತೃತ್ವದ ಸರ್ಕಾರವು ಭಾರತವನ್ನು ಬಹುಸಂಖ್ಯಾತವಾದಿಯನ್ನಾಗಿಸಿದೆ ಅಥವಾ ಸಂಕುಚಿತ ಪ್ರಜಾಪ್ರಭುತ್ವ ಅಥವಾ ಚುನಾವಣಾ ನಿರಂಕುಶಾಧಿಪತ್ಯವಾಗಿ ಪರಿವರ್ತಿಸಿದೆ; ಬಿಜೆಪಿ–ಆರ್‌ಎಸ್‌ಎಸ್ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಪರಿವರ್ತಿಸುವ ಪ್ರಯತ್ನದಲ್ಲಿ ಪ್ರಜಾಪ್ರಭುತ್ವವು ಹಿಂದಕ್ಕೆ ಸರಿಯುತ್ತಿದೆ ಅಥವಾ ಅಘೋಷಿತ ತುರ್ತುಪರಿಸ್ಥಿತಿ ಇದೆ ಎಂದು ಅವರು ಹೇಳಬಹುದು. ಅಯೋಧ್ಯೆಯಲ್ಲಿ ಒಂದು ಕಾಲದಲ್ಲಿ ಬಾಬರಿ ಮಸೀದಿ ಇದ್ದ ನಿವೇಶನದಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪು ಪಡೆದುಕೊಂಡು ರಾಮ ಮಂದಿರ ಕಟ್ಟಲಾಗಿದೆ. ಮುಸ್ಲಿಮರ ಮೇಲೆ ಗೋರಕ್ಷಕರು ನಡೆಸುವ ಹತ್ಯೆ ಮತ್ತು ಇತರ ದ್ವೇಷಾಪರಾಧಗಳು ಮತ್ತು ಅವರ ಧಾರ್ಮಿಕ ಸ್ಥಳಗಳ ಮೇಲೆ ದಾಳಿಗಳು ನಡೆಯುತ್ತಿವೆ. ಮುಸ್ಲಿಮರಿಗೆ ಸೇರಿದ ಕಟ್ಟಡಗಳನ್ನು ಕೆಡವಲಾಗುತ್ತಿದೆ, ಅವರನ್ನು ಒಕ್ಕಲೆಬ್ಬಿಸಲಾಗುತ್ತಿದೆ ಮತ್ತು ಗಡೀಪಾರು ಮಾಡಲಾಗುತ್ತಿದೆ. ಮುಸ್ಲಿಮರಿಗೆ ವಿವಿಧ ರೀತಿಯಲ್ಲಿ ಕಿರುಕುಳ ನೀಡಲಾಗುತ್ತಿದೆ ಮತ್ತು ಕ್ರೈಸ್ತರು ಕೂಡ ಸ್ವಲ್ಪ ಪ್ರಮಾಣದಲ್ಲಿ ಕಿರುಕುಳ ಅನುಭವಿಸುತ್ತಿದ್ದಾರೆ ಎಂದು ವಾದಿಸಬಹುದು.

ಮುಸ್ಲಿಮರು ಮತ್ತು ಇತರ ಕೆಲವು ಅಲ್ಪಸಂಖ್ಯಾತರನ್ನು ತಾರತಮ್ಯದಿಂದ ಕಾಣುವ ಪೌರತ್ವ ತಿದ್ದುಪಡಿ ಕಾಯ್ದೆ ಅಂಗೀಕರಿಸಲಾಗಿದೆ. ಆರೋಪಿತ ಧಾರ್ಮಿಕ ಮತಾಂತರದ ವಿರುದ್ಧ 'ಲವ್ ಜಿಹಾದ್', 'ರೈಸ್ ಬ್ಯಾಗ್' ಇತ್ಯಾದಿ ಹೆಸರಲ್ಲಿ ಮತ್ತು ಮುಸ್ಲಿಮರು, ಕ್ರೈಸ್ತರು ಮತ್ತು ಎಡಪಂಥೀಯ ಚಿಂತಕರು, ಹೋರಾಟಗಾರರು ಹಾಗೂ ಪ್ರತಿಭಟನಕಾರರ ವಿರುದ್ಧ ಅಭಿಯಾನ ಮತ್ತು ಕಾನೂನು ಮಾಡಲಾಗಿದೆ. ಮುಸ್ಲಿಂ ಮತ್ತು ಎಡಪಂಥೀಯ ಹೋರಾಟಗಾರರು ಹಾಗೂ ಪ್ರತಿಭಟನಕಾರರನ್ನು ಬಂಧಿಸಿ ಸುದೀರ್ಘ ಕಾಲ ಸೆರೆಮನೆಯಲ್ಲಿ ಇರಿಸಲಾಗಿದೆ ಮತ್ತು ಗಣನೀಯ ವಿಳಂಬದ ನಂತರ ಅವರಿಗೆ ಜಾಮೀನು ನೀಡಲಾಗಿದೆ. ಭಯೋತ್ಪಾದನೆಯ ಆರೋಪ ಹೊತ್ತ ಹಿಂದುತ್ವವಾದಿ ಕಾರ್ಯಕರ್ತರನ್ನು ನ್ಯಾಯಾಲಯಗಳು ಖುಲಾಸೆಗೊಳಿಸಿವೆ. ಸಾಮಾಜಿಕ ಜಾಲತಾಣ ಮತ್ತು ಅದರಲ್ಲೂ ವಿಶೇಷವಾಗಿ ಮಹಿಳೆಯರ ಮೇಲೆ ಕಣ್ಗಾವಲು ಮತ್ತು ಅಂತರ್ಧರ್ಮೀಯ ಸಂಬಂಧದ ಅದರಲ್ಲೂ ವಿಶೇಷವಾಗಿ ಹಿಂದೂ–ಮುಸ್ಲಿಂ ಪುರುಷ–ಮಹಿಳೆ ನಡುವಣ ಸಂಬಂಧದ ಮೇಲೆ ವಿವಿಧ ರೀತಿಯ ದಾಳಿಗಳು ನಡೆದಿವೆ. ಶಾಸಕಾಂಗ ಮತ್ತು ಸಮಿತಿಗಳ ಮಾಧ್ಯಮದಂತಹ ಅಧಿಕಾರ ಮತ್ತು ಪ್ರಭಾವದ ಸ್ಥಾನಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಕಡಿತವಾಗಿದೆ. ಅಕ್ರಮ ವಲಸೆಯ ಶಂಕಿತರನ್ನು ಬಲವಂತವಾಗಿ ಬಾಂಗ್ಲಾದೇಶಕ್ಕೆ ದಬ್ಬಲಾಗುತ್ತಿದೆ. ವಿಶೇಷವಾಗಿ ಪ್ರಾಚೀನ ಕಾಲದಲ್ಲಿ ಹಿಂದೂಗಳ 'ವೈಭವ' ಕುರಿತ ಆರ್‌ಎಸ್‌ಎಸ್–ಬಿಜೆಪಿ ವ್ಯಾಖ್ಯಾನದ ಆಧಾರದಲ್ಲಿ ಇತಿಹಾಸವನ್ನು ಪುನರ್‌ರಚಿಸುವ ಪ್ರಯತ್ನ ಮತ್ತು ಚರಿತ್ರೆಯಿಂದ ಮುಸ್ಲಿಮರನ್ನು ಹೊರಗಿರಿಸುವುದು ಮತ್ತು/ಅಥವಾ ಅವರ ಪಾತ್ರವನ್ನು ಹೀನಾಯವಾಗಿ ಚಿತ್ರಿಸುವುದು ನಡೆದಿದೆ. ವೈದ್ಯಕೀಯ, ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ಸೇರಿದಂತೆ ಆಧುನಿಕ ವಿಜ್ಞಾನವನ್ನು ಹಿಂದುತ್ವವಾದಿ ದೃಷ್ಟಿಕೋನದಿಂದ ಮರುವ್ಯಾಖ್ಯಾನಿಸಲಾಗುತ್ತಿದೆ; ವೈದ್ಯಕೀಯ, ಶಿಕ್ಷಣ ಮತ್ತು ಇತರ ವ್ಯವಸ್ಥೆಗಳಲ್ಲಿ ಬದಲಾವಣೆ ತರುವ ಪ್ರಯತ್ನ ನಡೆದಿದೆ. ಮುಸ್ಲಿಂ ಹೆಸರುಗಳನ್ನು ಬದಲಾಯಿಸಿ ಹಿಂದೂ ಹೆಸರುಗಳನ್ನು ಇರಿಸಲಾಗಿದೆ. ಸಾರ್ವಜನಿಕ ಜೀವನದ ಎಲ್ಲ ಆಯಾಮಗಳಿಗೂ ಹಿಂದೂ ಧಾರ್ಮಿಕ ಛಾಯೆ ನೀಡಲಾಗಿದೆ.

ಜಮ್ಮು ಕಾಶ್ಮೀರಕ್ಕೆ 370ನೇ ವಿಧಿಯ ಅಡಿಯಲ್ಲಿ ನೀಡಲಾದ ವಿಶೇಷ ಸ್ಥಾನಮಾನ ರದ್ದತಿ, ಅಲ್ಲಿನ ವ್ಯವಹಾರಗಳಲ್ಲಿ ಹಸ್ತಕ್ಷೇಪದ ಮೂಲಕ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರವನ್ನು ನಿರ್ಲಕ್ಷಿಸಲಾಗಿದೆ. ಶಂಕಿತ ಅಪರಾಧಿಗಳಿಗೆ ನ್ಯಾಯಾಲಯದ ಪ್ರಕ್ರಿಯೆಯನ್ನು ಬಿಟ್ಟು ಗುಂಡಿಟ್ಟು ಕೊಲ್ಲಲಾಗಿದೆ. ಮೋದಿಯವರನ್ನು ಟೀಕಿಸುವುದು ಮತ್ತು ಅವರ ವಿರುದ್ಧದ ಪ್ರತಿಭಟನೆಯನ್ನು ದಮನಿಸಲಾಗಿದೆ. ಪ್ರಮುಖ ವಿಚಾರಗಳ ಕುರಿತು ಚರ್ಚೆಗೆ ಅವಕಾಶ ನಿರಾಕರಿಸುವುದು ಸೇರಿದಂತೆ ವಿರೋಧ ಪಕ್ಷಗಳನ್ನು ಸಂಸತ್ತಿನ ಒಳಗೆ ಮತ್ತು ಹೊರಗೆ ದಮನಿಸಲು ವಿವಿಧ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ವಿಶೇಷವಾಗಿ ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳ ನಾಯಕರನ್ನು ಅಪಮಾನಿಸಲು, ನಿಗ್ರಹಿಸಲು, ಅವರ ರಾಜಕೀಯ ನಿಧಿಗಳ ಮೂಲಗಳನ್ನು ಕಡಿತಗೊಳಿಸಲು ಮತ್ತು ಅವರನ್ನು ಬಿಜೆಪಿ ಅಥವಾ ಎನ್‌ಡಿಎ ಸೇರುವಂತೆ ಮಾಡಲು ಕೇಂದ್ರದ ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳಲಾಗಿದೆ. ಭಾರತದ ಮೇಲೆ ಪರೋಕ್ಷ ಭಯೋತ್ಪಾದನಾ ದಾಳಿ ನಡೆಸುತ್ತಿರುವುದಕ್ಕಾಗಿ ಪಾಕಿಸ್ತಾನದ ವಿರುದ್ಧ ನಿರಂತರ ವಾಗ್ದಾಳಿ ನಡೆಸಲಾಗಿದೆ.

ಇದಲ್ಲದೆ, ಎನ್‌ಡಿಎ ಸರ್ಕಾರ ಮತ್ತು ಅದರ ನಾಯಕರ ನಿರ್ದಿಷ್ಟ ಹೇಳಿಕೆಗಳು ಮತ್ತು ನಡೆಗಳು ಅವರ ಉದ್ದೇಶಗಳು ಮತ್ತು ಯೋಜನೆಗಳ ಕುರಿತು ಶಂಕೆ ಮೂಡುವಂತೆ ಮಾಡಿವೆ. 'ಗಡಿ ಪ್ರದೇಶದಲ್ಲಿ ಒಳನುಸುಳುವಿಕೆ ಮತ್ತು ಅಕ್ರಮ ವಲಸೆಯಿಂದಾಗಿ ಪ್ರಜಾಸತ್ತಾತ್ಮಕ ಅಸಮತೋಲನ' ಸೃಷ್ಟಿಯಾಗಿ ಅದು ರಾಷ್ಟ್ರೀಯ ಭದ್ರತೆಗೆ ಬೆದರಿಕೆಯಾಗಬಹುದು ಎಂದು ಕಳೆದ ವರ್ಷದ ಸ್ವಾತಂತ್ರ್ಯೋತ್ಸವದಲ್ಲಿ ಪ್ರಧಾನಿ ಎಚ್ಚರಿಕೆ ನೀಡಿದ್ದರು. ಈ ಸಮಸ್ಯೆಯನ್ನು ಎದುರಿಸಲು ಉನ್ನತಾಧಿಕಾರದ ಜನಸಂಖ್ಯಾ ಸ್ವರೂಪ ಮಿಷನ್ ಆರಂಭಿಸಲಾಗಿದೆ. ಈ ಬೆಳವಣಿಗೆಯ ಬಳಿಕ, ಈ ಅಸಮತೋಲನಕ್ಕೆ 'ಮತಾಂತರ ಮತ್ತು ಕೆಲವು ಸಮುದಾಯಗಳಲ್ಲಿ ಜನಸಂಖ್ಯಾ ಏರಿಕೆ ದರ ಹೆಚ್ಚು' ಇರುವುದು ಕಾರಣ ಎಂದು ಆರ್‌ಎಸ್‌ಎಸ್ ಮುಖಂಡ ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ. ಅವರು ಸರ್ಕಾರದ ಯಾವುದೇ ಸ್ಥಾನದಲ್ಲಿ ಇಲ್ಲ. ಬಹುಶಃ ಈ ಕಾರಣದಿಂದಾಗಿಯೇ ಅವರಿಗೆ ಹೆಚ್ಚು ನಿರ್ಬಂಧವೂ ಇಲ್ಲ; ಇದರಿಂದಾಗಿ ಅವರು ಇಂತಹ ಹೇಳಿಕೆ ನೀಡುವುದು ಸಾಧ್ಯವಾಗಿದೆ. 2019ರಲ್ಲಿ ಪೌರತ್ವ (ತಿದ್ದುಪಡಿ) ಕಾಯ್ದೆ ಅಂಗೀಕಾರ, ರಾಷ್ಟ್ರೀಯ ಪೌರತ್ವ ನೋಂದಣಿಯನ್ನು (ಎನ್‌ಆರ್‌ಸಿ) ಅಸ್ಸಾಂನಿಂದ ಇತರ ರಾಜ್ಯಗಳಿಗೂ ವಿಸ್ತರಿಸುವುದಕ್ಕೆ ಸಂಬಂಧಿಸಿದ ಹೇಳಿಕೆಗಳು, ಬಿಹಾರ ವಿಧಾನಸಭೆ ಚುನಾವಣೆಗೂ ಮುನ್ನ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಪರಿಷ್ಕೃತ ನಿಯಮಗಳ ರಚನೆ, ಇತರ ರಾಜ್ಯಗಳಿಗೂ ಎಸ್‌ಐಆರ್ ವಿಸ್ತರಣೆ, ಯಾವುದೇ ಕಾರಣ ನೀಡದೆಯೇ ರಾಷ್ಟ್ರೀಯ ಜನಗಣತಿಯನ್ನು ಹಿಂದೆಂದೂ ಇಲ್ಲದ ರೀತಿಯಲ್ಲಿ ಸುದೀರ್ಘವಾಗಿ ವಿಳಂಬಿಸಿರುವುದು ಎಲ್ಲವನ್ನೂ ಒಟ್ಟಾಗಿ ನೋಡಿದಾಗ ಕಳವಳ ಹೆಚ್ಚುತ್ತದೆ. ಈ ಎಲ್ಲ ಪ್ರಯತ್ನಗಳು ಮುಸ್ಲಿಮರ (ಕ್ರೈಸ್ತರು ಕೂಡ ಇಲ್ಲಿ ಸೇರುವ ಸಾಧ್ಯತೆ ಇದೆ) ಮತದಾನದ ಹಕ್ಕನ್ನು ಕಿತ್ತುಕೊಳ್ಳುವುದು ಅಲ್ಲದೇ ಇದ್ದರೂ ಅವರನ್ನು ಎರಡನೇ ದರ್ಜೆಯ ಪೌರರಾಗಿಸುವ ಸುಳಿವುಗಳಾಗಿರಬಹುದೇ?

ಎನ್‌ಡಿಎ ಸರ್ಕಾರವು ಅಕ್ರಮ ವಲಸಿಗರನ್ನು ಮಾತ್ರ ಗುರುತಿಸಿ ಅವರನ್ನು ಹಿಂದಕ್ಕೆ ಕಳುಹಿಸುವ ಪ್ರಯತ್ನ ಮಾಡುತ್ತದೆಯೇ ಹೊರತು ಭಾರತೀಯ ಪ್ರಜೆಗಳಾದ ಮುಸ್ಲಿಮರನ್ನು ಅಲ್ಲ ಎಂದು ಬಿಜೆಪಿ–ಆರ್‌ಎಸ್‌ಎಸ್ ಬಹುಶಃ ವಾದಿಸಬಹುದು; ನ್ಯಾಯಯುತವಲ್ಲದ 'ಓಲೈಕೆ'ಯನ್ನು ಹಿಮ್ಮುಖವಾಗಿಸಿ ಎಲ್ಲರನ್ನೂ ಸಮಾನವಾಗಿ ನೋಡುವ ಯತ್ನ; ಆಮಿಷ, ವಂಚನೆ ಮತ್ತು ಬಲವಂತದ ಮತಾಂತರವನ್ನು ತಡೆಯಲಾಗುತ್ತದೆಯೇ ಹೊರತು ಪ್ರಾಮಾಣಿಕವಾದ ಮತಾಂತರವನ್ನು ಅಲ್ಲ; ಮುಂತಾದ ವಾದಗಳನ್ನು ಅವರು ಮುಂದಿಡಬಹುದು.

ಕೆಲವೊಮ್ಮೆ ಉತ್ಪ್ರೇಕ್ಷಿತ ಮತ್ತು ಏಕಮುಖ ಎನಿಸಿದರೂ ಮೇಲಿನ ಆರೋಪಗಳಲ್ಲಿ ಬಹುಪಾಲು ಸತ್ಯವೇ ಇವೆ ಎಂಬುದು ನಿಜ. ಪ್ರಜಾಸತ್ತಾತ್ಮಕ ನಿಯಮಗಳು, ಪ್ರಕ್ರಿಯೆಗಳು ಮತ್ತು ಸಂಸ್ಥೆಗಳ ಗಂಭೀರವಾದ ಇತರ ಉಲ್ಲಂಘನೆಗಳೂ ಇವೆ. ಸಾಂವಿಧಾನಿಕ ಸ್ಥಾನಗಳಲ್ಲಿರುವವರು ಮತ್ತು ಸಂಸ್ಥೆಗಳು ಕೆಲವು ಸಂದರ್ಭಗಳಲ್ಲಿ ಸಂಪೂರ್ಣ ಪಕ್ಷಪಾತಿಯಾಗಿ ಅಲ್ಲದಿದ್ದರೂ ನಿಷ್ಪಕ್ಷಪಾತಿಯಾಗಿ ಇಲ್ಲದೆ ಬಿಜೆಪಿ ಮತ್ತು ಪ್ರಧಾನಿ ಮೋದಿ ಪರವಾದ ಆದೇಶಗಳನ್ನು ನೀಡಿದ್ದಿದೆ. ಬಿಹಾರ ವಿಧಾನಸಭೆ ಚುನಾವಣೆಯ ವೇಳಾಪಟ್ಟಿ ಪ್ರಕಟವಾಗುವುದರ ಕೆಲವೇ ದಿನಗಳ ಮೊದಲು ಘೋಷಿಸಲಾದ 'ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನಾ' ಅಡಿಯಲ್ಲಿ ಮಹಿಳೆಯರಿಗೆ ನೇರ ನಗದು ವರ್ಗಾವಣೆಯನ್ನು ತಡೆಯಲು ಚುನಾವಣಾ ಆಯೋಗ ವಿಫಲವಾಗಿದೆ ಎಂಬುದು ಇತ್ತೀಚಿನ ಉದಾಹರಣೆಯಾಗಿದೆ. ಮೊದಲು ಪ್ರಕಟಿಸಿದಂತೆ ಯೋಜನೆಯನ್ನು ಮುಖ್ಯಮಂತ್ರಿ ನಿತೀಶ್ ಕುಮಾರ್ ಘೋಷಿಸಬೇಕಿತ್ತು, ಬದಲಿಗೆ ಪ್ರಧಾನಿಯವರು ಘೋಷಿಸಿದರು. ಎರಡು ಹಂತಗಳ ಮತದಾನಕ್ಕಿಂತ ಕೆಲವೇ ದಿನಗಳ ಮುಂಚಿನವರೆಗೆ ಹಣ ವರ್ಗಾವಣೆ ನಡೆದದ್ದಷ್ಟೇ ಅಲ್ಲ, ಆರು ತಿಂಗಳ ಬಳಿಕ ಇನ್ನಷ್ಟು ಹಣ ದೊರೆಯಲಿದೆ ಎಂಬ ಭರವಸೆಯನ್ನೂ ಕೊಡಲಾಯಿತು. ತಮಿಳುನಾಡು ವಿಧಾನಸಭೆಗೆ 2004 ಮತ್ತು 2011ರಲ್ಲಿ ಚುನಾವಣೆಗಳು ನಡೆದಾಗ ದೀರ್ಘಾವಧಿಯಿಂದ ಜಾರಿಯಲ್ಲಿದ್ದ ಸಮಾಜ ಕಲ್ಯಾಣ ಯೋಜನೆಗಳನ್ನು ಅಮಾನತಿನಲ್ಲಿ ಇರಿಸಲಾಯಿತು ಎಂದು ಮಾಧ್ಯಮಗಳು ವರದಿ ಮಾಡಿವೆ.

ಯೋಜನೆಯಡಿ ಸೌಲಭ್ಯಗಳನ್ನು ನೀಡಿದರೆ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗುತ್ತದೆ ಎಂದು ಆಗ ಕಾರಣ ಕೊಡಲಾಗಿತ್ತು. https://www.thehindu.com/news/national/now-silent-on-bihar-ec-had-halted-two-welfare-schemes-in-tamil-nadu-during-polls/article70259423.ece. ಮತದಾರರ ಮೇಲೆ ಪ್ರಭಾವ ಬೀರುವುದಕ್ಕಾಗಿ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ನಂತರ ಯೋಜನೆಯನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ ಪಾಟ್ನಾ ಹೈಕೋರ್ಟ್‌ನಲ್ಲಿ ಸಲ್ಲಿಕೆಯಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೂ ಯೋಜನೆಯನ್ನು ತಡೆಯಲು ಸಾಧ್ಯವಾಗಲಿಲ್ಲ. https://sabrangindia.in/pil-filed-in-the-patna-high-court-claims-the-mmr-yojana-was-used-to-influence-voters-by-making-payments-after-the-mcc-was-in-effect/amp/. ಇದೇ ವಿಚಾರವನ್ನು ಇರಿಸಿಕೊಂಡು ವಿರೋಧ ಪಕ್ಷಗಳು ನಡೆಸಿದ ಪ್ರತಿಭಟನೆಯಿಂದಲೂ ಯಾವುದೇ ಪ್ರಯೋಜನ ಆಗಲಿಲ್ಲ.

ಇಂತಹ ಉದಾಹರಣೆಗಳು ಅಪವಾದಗಳೇನೂ ಅಲ್ಲ ಎಂದು ಇಲ್ಲಿ ಸೇರಿಸುವ ಅಗತ್ಯ ಇಲ್ಲ. ಇವುಗಳಲ್ಲಿ ಹೆಚ್ಚಿನವು ಸಂವಿಧಾನದಲ್ಲಿರುವ ದೌರ್ಬಲ್ಯಗಳಿಂದಲೇ ಸಾಧ್ಯವಾಗುತ್ತವೆ. ಅಥವಾ ಈ ಹಿಂದಿನ ಸರ್ಕಾರಗಳು ಮಾಡಿಕೊಂಡ ರೂಢಿಯಿಂದಲೂ ಆಗಿರಬಹುದು. ನಂತರದ ಸರ್ಕಾರಗಳು ಇಂತಹ ರೂಢಿಗಳನ್ನು ಭಿನ್ನವಾದ ಉದ್ದೇಶ ಮತ್ತು ಪರಿಣಾಮಗಳಿಗಾಗಿ ಬಳಸಿಕೊಳ್ಳುತ್ತವೆ. ಈಶಾನ್ಯ ಮತ್ತು ಉತ್ತರ ಭಾರತದಲ್ಲಿನ ವಿಶೇಷವಾಗಿ ಎಡಪಂಥೀಯ ತೀವ್ರವಾದಿಗಳು (ನಕ್ಸಲರು) ಮತ್ತು ನುಸುಳುಕೋರರ ಎನ್‌ಕೌಂಟರ್ ಹತ್ಯೆಗಳನ್ನು ಉದಾಹಣೆಯಾಗಿ ಗಮನಿಸಬಹುದು. ನೆಹರೂ ಕಾಲದಿಂದಲೂ ಇದ್ದ 370ನೇ ವಿಧಿಯ ಅಡಿಯಲ್ಲಿನ ವಿಶೇಷ ಸ್ಥಾನಮಾನ ರದ್ದತಿ, ವಿರೋಧ ಪಕ್ಷಗಳ ನಾಯಕರ ವಿರುದ್ಧ ಕೇಂದ್ರ ತನಿಖಾ ತಂಡಗಳು ಮತ್ತು ಗುಪ್ತಚರ ಸಂಸ್ಥೆಯ ಬಳಕೆಯು ಇಂದಿರಾ ಗಾಂಧಿ ಕಾಲದಲ್ಲಿ ಆರಂಭಗೊಂಡು ನಂತರ ನಿರಂತರವಾಗಿ ನಡೆದಿದೆ. ಕೆಲವು ವಿಚಾರಗಳಲ್ಲಿ, ಈ ಹಿಂದೆ ಇದ್ದ ಕಾಂಗ್ರೆಸ್‌ನ ಪ್ರಧಾನಿಗಳಿಗಿಂತ ತಾವು ಹೆಚ್ಚು ಪ್ರಜಾಸತ್ತಾತ್ಮಕ ಎಂದು ಮೋದಿಯವರು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಉದಾಹರಣೆಗೆ, ವಿರೋಧ ಪಕ್ಷಗಳ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರಗಳನ್ನು ಉರುಳಿಸಲು 356ನೇ ವಿಧಿಯನ್ನು 90 ಬಾರಿ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ನ್ಯಾಯಾಂಗವನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳುವುದಕ್ಕಾಗಿ 1970ರ ದಶಕದಲ್ಲಿ ಇಂದಿರಾ ಗಾಂಧಿ ಮಾಡಿದಂತೆ ತಾವು ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಮೂರ್ತಿಗಳನ್ನು ಕಡೆಗಣನೆ ಮಾಡಿಲ್ಲ ಎಂದು ಹೇಳಿರುವುದು ಸಮರ್ಥನೀಯವೇ. ಬಳಿಕ, ತುರ್ತುಪರಿಸ್ಥಿತಿ ಹೇರಿಕೆಯ ಸಂದರ್ಭದಲ್ಲಿ ನ್ಯಾಯಾಂಗವನ್ನು ಅಧೀನದಲ್ಲಿ ಇರಿಸಿಕೊಳ್ಳಲಾಯಿತು.

ಇದಕ್ಕೆ ವ್ಯತಿರಿಕ್ತವಾಗಿ, ಸಂಸ್ಥಾಪಕರು ಮತ್ತು ಅವರ ಉತ್ತರಾಧಿಕಾರಿಗಳು ಅಳವಡಿಸಿಕೊಂಡ ಮತ್ತು ಸ್ಥಾಪಿಸಿದ ಪ್ರಜಾಸತ್ತಾತ್ಮಕ ನಿಯಮಗಳು, ಪದ್ಧತಿಗಳು ಮತ್ತು ಸಂಸ್ಥೆಗಳು ಎಷ್ಟು ಬಲವಾಗಿ ಬೇರೂರಿವೆಯೆಂದರೆ ಅವುಗಳನ್ನು ಉಲ್ಲಂಘಿಸುವುದು ಕಡುಕಷ್ಟ. ಸಾರ್ವತ್ರಿಕ ಚುನಾವಣೆಗಳಲ್ಲಿ ಮೋದಿ ಅವರ ಸತತ ಮೂರು ಗೆಲುವು, ಹಲವು ರಾಜ್ಯಗಳಲ್ಲಿ ಗೆಲುವು ಸಿಕ್ಕಿದ್ದರೂ ಚುನಾವಣೆ ಮತ್ತು ಪಕ್ಷ ರಾಜಕಾರಣದ ವಿಚಾರಗಳಲ್ಲಿಯಾದರೂ ಸಾಂವಿಧಾನಿಕ ಪ್ರಜಾಸತ್ತೆ ಮುಂದುವರಿದಿದೆಯಷ್ಟೇ ಅಲ್ಲ, ಇನ್ನಷ್ಟು ಬಲಗೊಂಡಿದೆ. ವಿಧಾನಸಭೆಗಳಿಗೆ ಮತ್ತು ಸಂಸತ್ತಿಗೆ ಸಕಾಲಕ್ಕೆ ಚುನಾವಣೆಗಳು ನಡೆಯುತ್ತಿವೆ, ವಿರೋಧ ಪಕ್ಷಗಳು ಸಂಸತ್ತಿನಲ್ಲಿ ಮತ್ತು ವಿಧಾನಸಭೆಗಳಲ್ಲಿ ಅಬ್ಬರಿಸುತ್ತವೆ ಮತ್ತು ತಲೆ ಬಾಗುವುದಿಲ್ಲ, ಫಲಿತಾಂಶಗಳನ್ನು ಗೌರವಿಸಲಾಗುತ್ತದೆ, ಗೆದ್ದವರಿಗೆ ಅಧಿಕಾರ ಹಸ್ತಾಂತರ ಸುಲಲಿತ ಮತ್ತು ಅವಿರೋಧವಾಗಿ ನಡೆಯುತ್ತದೆ. ಮೋದಿ ಅವರು ಪ್ರಧಾನಿ ಹುದ್ದೆಗೇರಿದ ಆರಂಭದ ದಿನಗಳಲ್ಲಿ, ಇನ್ನೊಂದು ತುರ್ತುಸ್ಥಿತಿ ಬರುವುದೇ ಇಲ್ಲ ಎಂದು ತಾವು ಭಾವಿಸುವುದಿಲ್ಲ, ಏಕೆಂದರೆ, ಅಧಿಕಾರದಲ್ಲಿ ಇರುವವರಿಗೆ (ಅಂದರೆ, ಮೋದಿ) ಪ್ರಜಾಪ್ರಭುತ್ವದ ಮೇಲೆ ಬದ್ಧತೆಯ ಕೊರತೆ ಇದೆ ಎಂದು ಬಿಜೆಪಿಯ ಅತ್ಯಂತ ಹಿರಿಯ ನಾಯಕರಲ್ಲಿ ಒಬ್ಬರಾದ ಎಲ್.ಕೆ. ಅಡ್ವಾಣಿ ಹೇಳಿದ್ದರು. ಇದು ಈಗ ಎಂತಹ ಅದ್ಭುತ ಬದಲಾವಣೆ. ಆದರೆ, ಪ್ರಶ್ನೆ ಇರುವುದು ಇದಕ್ಕೆ ಕಾರಣಗಳು ಏನು?

(ಮುಂದುವರಿಯುವುದು)

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಿಳೆಯೊಬ್ಬರು ತನ್ನ ತಾಯಿಯನ್ನು ವೃದ್ಧಾಶ್ರಮಕ್ಕೆ ಬಿಡಲು ಕರೆದುಕೊಂಡು ಬರುವ ವಿಡಿಯೊ ತುಣುಕೊಂದನ್ನು ಬಳಕೆದಾರರೊಬ್ಬರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಅಧಿಕಾರಿಯೊಬ್ಬರು, 'ತಾಯಿಯನ್ನು ಇಲ್ಲಿ ಯಾಕೆ ಬಿಡುತ್ತಿದ್ದೀರಿ' ಎಂದು ಕೇಳಿದಾಗ, 'ನಮ್ಮ ಮನೆಯಲ್ಲಿ ಸಾಕಷ್ಟು ಜಾಗ ಇಲ್ಲ' ಎಂದು ಮಹಿಳೆ ಉತ್ತರಿಸುವ ದೃಶ್ಯವೂ ವಿಡಿಯೊದಲ್ಲಿದೆ. ಆ ಅಧಿಕಾರಿಯು ವೃದ್ಧೆಯನ್ನು ಕೇಳಿದಾಗ, ತನಗೆ ಇಲ್ಲಿಗೆ ಬರುವುದಕ್ಕೆ ಇಷ್ಟವಿಲ್ಲ ಎಂದು ಹೇಳುವುದೂ ಇದೆ. 'ಮಹಿಳೆಯು ಹಿರಿ ವಯಸ್ಸಿನ ತಾಯಿಯನ್ನು ವೃದ್ಧಾಶ್ರಮದಲ್ಲಿ ಬಿಟ್ಟು ಹೋಗಿದ್ದಾರೆ. ಮಗಳಾಗಿ ಆಕೆ ವಿಫಲರಾದ್ದಾರೆ' ಎಂಬ ಒಕ್ಕಣೆಯೂ ಪೋಸ್ಟ್‌ನಲ್ಲಿದೆ. ಆದರೆ, ಇದು ನಿಜವಲ್ಲ.

ವಿಡಿಯೊದ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ, ಹಲವರು ಇದೇ ಪೋಸ್ಟ್ ಹಂಚಿರುವುದು ಕಂಡು ಬಂತು. ಆಶಿಸ್ ವಾಟ್ಸ್ ಎಂಬವರ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇದೇ ವಿಡಿಯೊ ಪೋಸ್ಟ್ ಮಾಡಿರುವುದು ಸಿಕ್ಕಿತು. ತಾವು ಡಿಜಿಟಲ್ ಕ್ರಿಯೇಟರ್ ಎಂದು ಬರೆದುಕೊಂಡಿರುವ ಅವರು 2025ರ ಡಿಸೆಂಬರ್ 23ರಂದು ಈ ವಿಡಿಯೊ ಪೋಸ್ಟ್ ಮಾಡಿದ್ದರು. ಆ ಖಾತೆಯನ್ನು ಇನ್ನಷ್ಟು ಪರಿಶೀಲನೆಗೆ ಒಳಪಡಿಸಿದಾಗ ಈ ವಿಡಿಯೊವನ್ನು ಪೂರ್ವಯೋಜಿತವಾಗಿ ಚಿತ್ರೀಕರಿಸಲಾಗಿದೆ ಎಂದು ಅವರು ಬರೆದುಕೊಂಡಿದ್ದರು. 'ಜಾಗೃತಿ ಉದ್ದೇಶಕ್ಕಾಗಿ ಈ ವಿಡಿಯೊವನ್ನು ಮಾಡಲಾಗಿದೆ' ಎಂದು ಅವರು ಸ್ಪಷ್ಟವಾಗಿ ನಮೂದಿಸಿದ್ದರು. ಈ ವಿಡಿಯೊದಲ್ಲಿರುವ ಪಾತ್ರಧಾರಿಗಳನ್ನೇ ಬಳಸಿಕೊಂಡು ಇದೇ ಮಾದರಿಯ ಹಲವು ವಿಡಿಯೊಗಳು ಆ ಖಾತೆಯಲ್ಲಿ ಇತ್ತು. ಪೂರ್ವ ಯೋಜಿತವಾಗಿ ಚಿತ್ರೀಕರಿಸಲಾದ ವಿಡಿಯೊವನ್ನು ನೈಜ ವಿಡಿಯೊ ಎಂಬಂತೆ ಬಿಂಬಿಸಿ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಬಾಳಬೇಕಾದ ಜವಾಬ್ದಾರಿ

ನುಡಿ ಬೆಳಗು — ದಾದಾಪೀರ್ ನವಿಲೇಹಾಳ್



ಓದಲು ದೂರದ ಪಟ್ಟಣಕ್ಕೆ ಹೋಗಿದ್ದ ಮಗ ಸರ್ಕಾರಿ ನೌಕರಿ ಸಿಕ್ಕ ಖುಷಿಯಲ್ಲಿ ಊರಿಗೆ ಬಂದ. ಹಬ್ಬಗಳಲ್ಲಿ ಮಾತ್ರ ಹುಗ್ಗಿ ತಿನ್ನುತ್ತಿದ್ದ ಅಪ್ಪ ಅವ್ವರಿಗೆ ತಾನು ತಂದಿದ್ದ ಸಿಹಿ ತಿಂಡಿ ಕೊಟ್ಟ. ಆಸೆ ಪಟ್ಟು ಎಂದೂ ಹೊಸ ಬಟ್ಟೆ ಉಡದಿದ್ದ ಅವರಿಗೆ ಬಟ್ಟೆ ಬರೆಯನ್ನೂ ತಂದಿದ್ದ. ಅವರಿಗೆ ಈ ಯಾವುದರಿಂದಲೂ ಸಂತೋಷ ಉಂಟಾದಂತೆ ಕಾಣಲಿಲ್ಲ. ಅವ್ವ ಮಗನ ಮಾತು, ನಡತೆ ನೋಡುತ್ತಾ ಅಪರಿಚಿತನಂತೆ ಕಾಣುತ್ತಿದ್ದ ಅವನಿಗೆ ಕುಡಿಯಲು ನೀರನ್ನೂ ಕೊಡಲಿಲ್ಲ. ಅಪ್ಪ ಏನನ್ನೋ ಕಳೆದುಕೊಂಡವನಂತೆ ಹುಡುಕುತ್ತಿದ್ದ. ಇದ್ದಕ್ಕಿದ್ದಂತೆ ಹೊರಗೆ ಬಂದ ಅಪ್ಪ ಸೀದಾ ತಿಪ್ಪೆಗೆ ಬಂದು ಹುಲ್ಲು, ಸಗಣಿಯನ್ನೆಲ್ಲಾ ಗೆಬರಾಡಿದ. ಅಲ್ಲೇನು ಸಿಕ್ಕೀತು? ಅನ್ಯಮನಸ್ಕನಾಗಿದ್ದ ಅಪ್ಪ ವಿಪರೀತ ಮುಂಗೋಪಿ. ಮಗ ತಂದ ಬಟ್ಟೆ, ಅವನ ನೌಕರಿ, ಮಾತು ಕತೆಯೆಲ್ಲ ಜುಜುಬಿ ಎನ್ನುವಂತಿತ್ತು ಅವನ ವರ್ತನೆ. ಹಿಂದೊಮ್ಮೆ ತನಗೆ ಬಂದ ಸ್ಕಾಲರ್‌ಶಿಪ್ ಹಣವನ್ನು ಅಪ್ಪನಿಗೆ ಎಂ.ಒ ಮಾಡಿದ್ದ. ಅಪ್ಪನಿಗೆ ಕೆಟ್ಟ ಕೋಪ ಬಂದಿತ್ತು. 'ನೀನು ನನಗೆ ದುಡ್ಡು ಕಳಿಸುವಂತಾದೆಯಾ?' ಎಂದು ಪತ್ರ ಬರೆಸಿ ಆ ಹಣವನ್ನು ವಾಪಸ್ ಕಳಿಸಿದ್ದ. ಅಪ್ಪನ ಇಂಥ ವಿಕ್ಷಿಪ್ತ ವರ್ತನೆಯ ಅರಿವಿದ್ದ ಮಗ ಏನು ಕಳೆದಿದೆ? ಏನು ಹುಡುಕುತ್ತಿದ್ದೀಯ? ಅಂತ ಕೂಡ ಕೇಳಲಿಲ್ಲ. ತಾನು ಸಣ್ಣವನಿದ್ದಾಗಿನಿಂದಲೂ ಅಪ್ಪ ಅವ್ವ ಹೀಗೆ ವಿರುದ್ಧ ಧ್ರುವಗಳಂತೆ, ಭಾವಶೂನ್ಯರಂತೆ ಒಟ್ಟಾಗಿ ಬದುಕಿರುವುದನ್ನು ಕಂಡಿದ್ದ. ಪ್ರಶ್ನೆ ಮಾಡಿದರೆ ಇನ್ನೇನಾದರೂ ಎಡವಟ್ಟಾದೀತೆಂದು ಸುಮ್ಮನಿದ್ದ.

ಇವರಿಗೆ ಯಾವುದರಿಂದ ಖುಷಿ ಸಿಗಬಹುದು ಎಂದು ಯೋಚಿಸಿದ. ಅವ್ವ ಎಂದಿನಂತೆ ಕಸ ಮುಸುರೆ ಮಾಡಿಕೊಂಡಿದ್ದರೆ ಅಪ್ಪ ದನಕರು, ಕುಂಟೆ ಕೂರಿಗೆ ಅಂತ ದಿನ ದೂಡುತ್ತಿದ್ದ. ಕೆಲಸವೇ ಅವನ ಧ್ಯಾನ. ಬಿಡುವಾದಾಗೊಮ್ಮೆ ಕತೆ ಪುಸ್ತಕ ಹಿಡಿದುಕೊಂಡು ಓದುತ್ತಾ ತೂಕಡಿಸುವುದು ಅಪ್ಪನ ಅಭ್ಯಾಸ. ಅಪ್ಪ ತಿಪ್ಪೆಯಲ್ಲಿ ಹುಡುಕುತ್ತಿದ್ದುದು ಆ ಕತೆಯ ಪುಸ್ತಕವನ್ನೇ ಅಂತ ತಡವಾಗಿ ತಿಳಿಯಿತು. ಕುಳಿತಲ್ಲೇ ತೂಕಡಿಸುತ್ತಿದ್ದ ಅಪ್ಪನ ಅಭ್ಯಾಸಕ್ಕೆ ರೋಸಿ ಹೋಗಿ ಅವ್ವ ಆ ಪುಸ್ತಕವನ್ನು ಯಾರಿಗೂ ಕಾಣದಂತೆ ಎಸೆದಿದ್ದಳು.

ನಾವೆಲ್ಲರೂ ಒಂದು ಪುಟ್ಟ ಅವಧಿಗಾಗಿ ಈ ಮಣ್ಣಿಗೆ ಬಂದಿದ್ದೇವೆ. ಒಮ್ಮೆ ಬಂದಾದ ಮೇಲೆ 'ನಾವು ಬಂದುದೆಲ್ಲಿಂದ?' ಎಂದು ಕೇಳಿಕೊಳ್ಳುವುದು ತಡವಾಗುತ್ತದೆ. ಇದೀಗ ಬದುಕು ಹೇಗೋ ಶುರುವಾಗಿದೆ, ಇಲ್ಲಿನ ಸಂತೆ ಮುಗಿದ ಮೇಲೆ ಎಲ್ಲಿಗೆ ಹೋಗುತ್ತೇವೆ ಎಂದು ಕೇಳಿ ಕೊಳ್ಳುವುದು ಅವಸರವಾಗುತ್ತದೆ. ಆದರೆ ಬಂದ ಬದುಕನ್ನು ಬೊಗಸೆಯಲ್ಲಿಟ್ಟುಕೊಂಡು ಬಾಳಬೇಕಾದ ಜವಾಬ್ದಾರಿ ಬೇಕಲ್ಲ? ಅದು ಎಲ್ಲರಿಗೂ ಇರುವುದಿಲ್ಲ. ಕೆಲವರು ಅದನ್ನು ಬೆಚ್ಚಗೆ ಬಚ್ಚಿಟ್ಟುಕೊಳ್ಳುತ್ತಾರೆ. ಮತ್ತೆ ಕೆಲವರು ಕೈಚೆಲ್ಲಿ ಕುಳಿತು ಕೊರಗುತ್ತಾರೆ. ಹೆತ್ತ ತಂದೆ ತಾಯಿಯ ಶವಸಂಸ್ಕಾರಕ್ಕೂ ದೂರದ ನೆಂಟರ ಹಾಗೆ ಬಂದು ಹೋಗುವವರು ಕೆಲವರು. ನಾವು ಬಂದು ಮಾಡುವುದೇನಿದೆ? ಇಂತಿಷ್ಟು ಕಾಸು ಕೊಡುತ್ತೇವೆ, ಕ್ರಿಯಾಕರ್ಮಗಳನ್ನು ನೀವೇ ಮುಗಿಸಿಬಿಡಿ ಎಂದು ದೂರದಿಂದಲೇ ಹೇಳಿ ಕೈ ತೊಳೆದುಕೊಳ್ಳುವವರು ಕೆಲವರು. ಊರು ತುಂಬಾ ಇಂಥ ಘಟನೆಗಳನ್ನು ಕೇಳಿ ನೋಡಿ ಹತಾಶರಾದ ಹೆತ್ತವರು ತಮಗೂ ಇಂಥದೇ ಗತಿ ಬಂದೀತೆಂದು ಅಧೀರರಾಗಿ ಬದುಕುತ್ತಾರೆ.


ಇರುವ ಬಟ್ಟೆ ಹರಿಯುವವರೆಗೆ ಬದುಕಿರುತ್ತೇವೆಯೋ ಇಲ್ಲವೋ ಎಂದು ಅನಿಸುತ್ತದೆ. ಬಡತನವನ್ನು ಇಷ್ಟಪಟ್ಟು ಆರಿಸಿಕೊಂಡವರು ಅವರು. ಒಂದಿದೆ ಒಂದಿಲ್ಲ ಎಂಬಂತೆ ಬದುಕಿದವರು. ಇಂಥದು ಬೇಕು ಅನ್ನಲಿಲ್ಲ, ಅಕ್ಕಪಕ್ಕದವರನ್ನು ಕಂಡು ಕರುಬಲಿಲ್ಲ, ಕೊರಗಲಿಲ್ಲ. ದುಡಿದು ತಿಂದರು. ಕಣ್ಣು ಬಿಟ್ಟರೆ ಅದೂ ಇದೂ ಕೆಲಸ. ದಣಿವು ದಪ್ಪತ್ತು ಅನ್ನಲಿಲ್ಲ. ಕಾಯಿಲೆ ಕಸಾಲೆ ಕಾಡಲಿಲ್ಲ. ಕಣ್ಣು ಮುಚ್ಚಿದರೆ ನಿದ್ದೆ. ಅದೇ ಅವರ ಸಿರಿಸಂಪತ್ತು. ಒಬ್ಬರ ಹಂಗಿಗೆ ಬೀಳದಂತೆ ಒಬ್ಬರಿಗೆ ಹೊರೆಯಾಗದೆ ಬದುಕಬೇಕು. ಮೌಲ್ಯಗಳ ಅರಿವೇ ಇಲ್ಲದವರು ಮೌಲ್ಯಯುತ ಬಾಳುವೆ ನಡೆಸುವುದು ನಮ್ಮ ನೆಲದ ಗುಣ. ದೇಹದಲ್ಲಿ ಜೀವ ಇರುವವರೆಗೆ ಅಷ್ಟೇ ಗೌರವ. ಕಷ್ಟಪಡುವ ದೇಹದಲ್ಲಿ ಜೀವ ಸುಖವಾಗಿರುತ್ತದೆ. ಜೀವಸುಖವೇ ದೇಹಕ್ಷೇಮವನ್ನು ಕಾಪಾಡುತ್ತದೆ. ಎಂಥ ಮಹಾನುಭಾವನಾದರೂ ಸತ್ತ ಮೇಲೆ ಹೆಣವೇ ತಾನೆ? ಒಂದಡಕೆಗೂ ಅದನ್ನು ಕೊಳ್ಳುವವರಿರುವುದಿಲ್ಲ. ❖

ಪದಬಂಧ 6289

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯಜ್ಞ ಪುರೋಹಿತನನ್ನು ಹೀಗೂ ಕರೆವರು (3)
4.ಭವದಲ್ಲಿ ಕೊನೆಗೊಂಡಿರುವ ಹುಟ್ಟು (3)
6.ವಂಚನೆಯ ಯುಕ್ತಿಯಿದು (5)
7.ಭವನದ ಮೇಲಿಂದ ನೋಡಿರುವ ಆಕಾಶ (2)
9.ಮಾನವನಲ್ಲಿ ಹೊಸತು ಕಾಣುತಿದೆಯಲ್ಲಾ! (2)
10.ಗುರುವಿಗೆ ತಕ್ಕನಾದ ವಿದ್ಯಾರ್ಥಿ (2)
11.ಸುಪ್ರಭಾತದ ಹೊತ್ತಿನಲ್ಲಿ ಬಂದಿರುವ ಮಗ (2)
13.ಅಳಿಯನನ್ನು ಮನೆಯಲ್ಲಿಯೇ ಇರಿಸಿಕೊಳ್ಳುವುದು (5)
16.ಮಸ್ತಿಷ್ಕ ಇಲ್ಲಿದೆ (3)
17.ಪುನಃ ಪುನಃ ಬಂದಿರುವ ಸ್ಮರಣೆ (3)

ಮೇಲಿಂದ ಕೆಳಕ್ಕೆ
1.ವರ್ಷದ ಎರಡೆರಡು ತಿಂಗಳುಗಳ ಅವಧಿ (4)
2.ಒತ್ತಾಸೆಯು ಇಲ್ಲಿ ತಿರುವುಮುರುವಾಗಿದೆ (3)
3.ಕಣ್ಣು ಇಲ್ಲಿ ಉಲ್ಟಾ ಪಲ್ಟಾ ಆಗಿಬಿಟ್ಟಿದೆ (3)
4.ಶಯನದ ಸಮಯದಲ್ಲಿ ಬಂದಿರುವ ಅನುಮಾನ! (3)
5.ಅರವತ್ತು ವರ್ಷದ ಹುಟ್ಟಿದ ಹಬ್ಬ (4)
8.ಮುಂದೆ ಬರಲಿರುವ ಕಾಲ (3)
9.ಸ್ವಪ್ನವಿಲ್ಲಿ ನಿಜವಾಗಿದೆ (3)
10.ತಲೆ ಬರಹವಿದು (4)
12.ಕನ್ನಡಿಗನು ಧರಿಸಿರುವ ಹೆಲ್ಮೆಟ್ (4)
13.ಮರದ ಬಳಿಯಿರುವ ಉಸುಕು (3)
14.ಸಾಗಿಸುವ ಸಾಧನ (3)
15.ಮೂಲೆಮನೆಯ ಮಾದರಿ! (3)



6288ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ತಾಕತ್ತು 5.ನವಮಿ 7.ಉರ 8.ಗುರಿ 9.ನಿರಂಕುಶಪ್ರಭುತ್ವ 12.ಕುತ್ತು 13.ಜನ 14.ಷಡ್ದಕ 15.ಬಿರಡೆ

ಮೇಲಿಂದ ಕೆಳಕ್ಕೆ: 1.ಮನಸ್ತಾಪ 3.ಕಠೋರ 4.ಪರಾರಿ 6.ಮಿಭೂಗರಂ 7.ಉಪಶಮನ 8.ಗುರುತ್ವ 9.ನಿಯತ್ತು 10.ಭುಕ್ತಿಶೇಷ 11.ಸುಧಾಕರ 12.ಕುಬೇರ 13.ಜಠರ

ಸುಡೊಕು 6673

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	6		4				9
5			6		9			2
2				7		3		
7	8						5	
			4	9		6		7
6		5		8			2	
		7	2				9	5
	5				7			
9				5		2		4

6672 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

19 ಜನವರಿ 2026 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಪ್ರತಿಪದ್ ಗಂ 26-15 ನಕ್ಷತ್ರ: ಉತ್ತರಾಷಾಢ 11-53 ಯೋಗ: ವಜ್ರ ಗಂ. 20-45 ಕರಣ: ಕಿಂಸ್ತುಘ್ನ ಗಂ. 13-51 ಮಕರ ಮಾಸದ 05 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 3 ನೇ ಪಾದ. **ರಾಹುಕಾಲ :** ಬೆಳಿಗ್ಗೆ 07-30 -09-00 ಸೂರ್ಯೋದಯ : 07-01 ಸೂರ್ಯಾಸ್ತ : 06-21, ಮುಸ್ಲಿಂ ದಿನಾಂಕ : 29 ರಜಬ್, **ಅದೃಷ್ಟ ಸಂಖ್ಯೆ :** 9, 3

ಮೇಷ: ವೃತ್ತಿಜೀವನದಲ್ಲಿ ಹಣಕಾಸಿನ ಪರಿಸ್ಥಿತಿ ಉತ್ತಮ ಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯಲಿವೆ. ನಿರುದ್ಯೋಗಿ ಯುವಕರು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಕ್ಕೆ ಪ್ರಯತ್ನ ಪಡಬಹುದು. ಕಪ್ಪು ಬಣ್ಣ ಶುಭ ತರುವುದು.

ವೃಷಭ: ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರ ಬೇಜವಾಬ್ದಾರಿತನದಿಂದ ಲಾಭಕ್ಕೆ ತೊಂದರೆ ಉಂಟಾಗಬಹುದು. ನೀವೇ ಖುದ್ದಾಗಿ ನಿಂತು ಮೇಲುಸ್ತುವಾರಿ ನೋಡಿಕೊಳ್ಳುವುದು ಸೂಕ್ತ.

ಮಿಥುನ: ಪಿತ್ರಾರ್ಜಿತ ಆಸ್ತಿಯ ವ್ಯವಹಾರಗಳು ಒಂದು ಹಂತ ತಲುಪಿದ್ದಕ್ಕೆ ಸಮಾಧಾನವಾಗುವುದು. ಆಡುವ ಸುಳ್ಳು ಮಾತಿನ ಫಲವನ್ನು ತಕ್ಷಣದಲ್ಲಿ ಅನುಭವಿಸುವಂತಾಗುವುದು. ಮುಂದಿನ ನಡೆಯ ಬಗ್ಗೆ ಗಮನಹರಿಸಿ.

ಕರ್ಕಾಟಕ: ನಡವಳಿಕೆಯು ಮನೆಯವರಲ್ಲಿ ಸಂತಸವನ್ನು ಮೂಡಿಸುತ್ತದೆ. ದಿನದ ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲವಾಗಿದೆ. ಆರ್ಥಿಕ ಭಾಗವು ತುಂಬಿಕೊಂಡಿರುತ್ತದೆ.

ಸಿಂಹ: ಮನೆಯ ಪರಿಸ್ಥಿತಿ ಅರಿವಿದ್ದರೂ ಪ್ರಕಾರದ ಆದರ್ಶ ವೃತ್ತಿಗಾಗಿಯೇ ಹಲವು ದಿನಗಳ ಕಾಯುವಿಕೆ ಸರಿಯಾದುದಲ್ಲ. ಅಪೇಕ್ಷಿಗಳಿಗೆ ಸಂತಾನ ಭಾಗ್ಯ ದೊರೆಯುವುದು. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.

ಕನ್ಯಾ: ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿ, ಜಯ ನಿಮ್ಮದಾಗುತ್ತದೆ. ಧೈರ್ಯಗೆಡುವ ಪ್ರಸಂಗವಿಲ್ಲ. ಹಾಲು, ಮೊಸರು, ತುಪ್ಪದಂತಹ ಗೋ ಉತ್ಪನ್ನ ವಸ್ತುಗಳ ಮಾರಾಟಗಾರರಿಗೆ ಲಾಭವಾಗಲಿದೆ.

ತುಲಾ: ಕೆಲಸ ಮಾಡುವ ಮೊದಲು ಅದರ ಬಗ್ಗೆ ಸಾಕಷ್ಟು ಯೋಚಿಸಿ ನಂತರ ತೀರ್ಮಾನಿಸಿ. ಕಾರ್ಯಕ್ಷೇತ್ರದಲ್ಲಿ ಕೆಲವು ಮೂಲಭೂತ ಬದಲಾವಣೆಗಳಾಗುವ ಸಾಧ್ಯತೆ ಇದೆ. ನಿರ್ದಿಷ್ಟ ಕೆಲಸಗಳಿಗೆ ಗಮನ ಕೊಡುವುದು ಒಳ್ಳೆಯದು.

ವೃಶ್ಚಿಕ: ವ್ಯಾಪಾರ ವ್ಯವಹಾರದಲ್ಲಿ ಲಾಭ, ನಷ್ಟ ಏನೇ ಅದನ್ನು ಮುಕ್ತವಾಗಿ ಸ್ವೀಕರಿಸುವ ಭಾವನೆ ಇರಲಿ. ಅನಿರೀಕ್ಷಿತ ಪ್ರಯಾಣವು ಬದುಕಿನ ಹೊಸ ದಾರಿಗೆ ಕಾರಣವಾಗಲಿದೆ. ಚರ್ಮದ ಒರಟಾಗುವಿಕೆಯು ಬಾಧಿಸಬಹುದು.


ಧನು: ಕುಟುಂಬ ಸದಸ್ಯರ ಮುಂದೆ ಬಾಯಿ ತಪ್ಪಿ ಹೇಳಿದ ಸತ್ಯದಿಂದ ಯುದ್ಧದ ಪರಿಸ್ಥಿತಿ ಎದುರಾಗಬಹುದು. ಹಿಂಜರಿಕೆಯ ಸ್ವಭಾವದಿಂದ ಬೇಕಾದಂಥ ವೃತ್ತಿ ಸಂಪಾದಿಸಲು ಕಷ್ಟವಾಗುತ್ತದೆ.

ಮಕರ: ವ್ಯವಹಾರ ಪರಊರಿನಲ್ಲಿ ವಿಸ್ತರಿಸುವ ಹೊಸ ಯೋಜನೆಗಳಿಗೆ ಚಾಲನೆ ನೀಡುವ ವಿಚಾರವನ್ನು ಸ್ವಲ್ಪ ದಿನ ಮುಂದಕ್ಕೆ ತಳ್ಳುವುದು ಸೂಕ್ತವೆನ್ನಿಸುವುದು. ಭೋಜನದ ಸಮಯವನ್ನು ಸ್ನೇಹಿತರೊಂದಿಗೆ ಕಳೆಯುವಿರಿ.

ಕುಂಭ: ಮಗನ ನೂತನ ಕೆಲಸದ ವಿಚಾರವಾಗಿ ಆಪ್ತರೊಬ್ಬರಲ್ಲಿ ಸಲಹೆ ಕೇಳಿಕೊಳ್ಳುವಿರಿ. ಕೆಲವರ ಮಾತುಗಳು ಕಿವಿಯ ಮೇಲೆ ಬಿದ್ದರೂ ನಿರ್ಲಕ್ಷಿಸುವುದು ಉತ್ತಮ. ಪ್ರತಿಷ್ಠಿತ ಅಧಿಕಾರಕ್ಕಾಗಿ ಸಮಬಲ ಹೋರಾಟ ನಡೆಸುವಿರಿ.

ಮೀನ: ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಮತ್ತು ಕಥೆ, ಕವನದ ಬರಹಗಾರರಿಗೆ ಅವಕಾಶಗಳ ಸುರಿಮಳೆ ಎದುರಾಗುವುದು. ಕರಿದ ತಿಂಡಿ ತಿನಿಸು ಪದಾರ್ಥಗಳ ಮಾರಾಟಗಾರರಿಗೆ ಲಾಭ ಸಿಗುವುದು.

ಗುಂಡಣ್ಣ



2025ರಲ್ಲಿ ವಾಹನಗಳ ರಫ್ತಿನಲ್ಲಿ ಶೇ 24ರಷ್ಟು ಏರಿಕೆ

63 ಲಕ್ಷ ವಾಹನ ರಫ್ತು: ಎಸ್ಐಎಎಂ

ನವದೆಹಲಿ (ಪಿಟಿಐ): ‘2025ರ ಕ್ಯಾಲೆಂಡರ್ ವರ್ಷದಲ್ಲಿ ದೇಶದಿಂದ ಒಟ್ಟು 63,25,111 ವಾಹನಗಳು ರಫ್ತಾಗಿವೆ’ ಎಂದು ಭಾರತೀಯ ಆಟೊಮೊಬೈಲ್ ತಯಾರಕರ ಸಂಘ (ಎಸ್ಐಎಎಂ) ಭಾನುವಾರ ತಿಳಿಸಿದೆ.

2024ರಲ್ಲಿ 50,98,474 ವಾಹನಗಳು ರಫ್ತಾಗಿದ್ದವು. ಇದಕ್ಕೆ ಹೋಲಿಸಿದರೆ ಕಳೆದ ವರ್ಷದಲ್ಲಿ ರಫ್ತು ಪ್ರಮಾಣ ಶೇ 24.1ರಷ್ಟು ಹೆಚ್ಚಳವಾಗಿದೆ. ಕಾರುಗಳು, ದ್ವಿಚಕ್ರ ವಾಹನ ಮತ್ತು ವಾಣಿಜ್ಯ ಬಳಕೆ ವಾಹನಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚಿದ ಬೇಡಿಕೆಯು ರಫ್ತು ಹೆಚ್ಚಳಕ್ಕೆ ಕಾರಣ ಎಂದು ಅದು ತಿಳಿಸಿದೆ.

ಪಶ್ಚಿಮ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕ ಸೇರಿದಂತೆ ವಿವಿಧ ಮಾರುಕಟ್ಟೆಗಳಲ್ಲಿ ಭಾರತದ ವಾಹನಗಳಿಗೆ ಬೇಡಿಕೆ ಸ್ಥಿರವಾಗಿದೆ ಎಂದು ಸಂಘವು ಹೇಳಿದೆ.

2024ರಲ್ಲಿ ಮಾರುತಿ ಸುಜುಕಿ ಕಂಪನಿಯ 3.26 ಲಕ್ಷ ವಾಹನಗಳು ರಫ್ತಾಗಿದ್ದವು. ಅದು ಈ ಬಾರಿ 3.95 ಲಕ್ಷಕ್ಕೆ ಹೆಚ್ಚಳವಾಗಿದೆ. 2025–26ರ ಆರ್ಥಿಕ ವರ್ಷದಲ್ಲಿ 4 ಲಕ್ಷ ವಾಹನಗಳನ್ನು ರಫ್ತು ಮಾಡುವ ಗುರಿ ಸಾಧಿಸುವ ಹಾದಿಯಲ್ಲಿ ಇರುವುದಾಗಿ ಕಂಪನಿ ತಿಳಿಸಿದೆ.

‘ದೇಶದ ಎಲ್ಲ ಪ್ರಯಾಣಿಕ ವಾಹನಗಳ ರಫ್ತಿನಲ್ಲಿ ಮಾರುತಿ ಸುಜುಕಿ ಇಂಡಿಯಾ ಪಾಲು ಶೇ 46ರಷ್ಟಿದೆ. ಜಾಗತಿಕ ಮಾರುಕಟ್ಟೆಯಲ್ಲಿ ನಾವು ದೊಡ್ಡ ಪಾಲನ್ನು ಹೊಂದಲಿದ್ದೇವೆ’ ಎಂದು ಕಂಪನಿಯ ಕಾರ್ಪೊರೇಟ್ ವ್ಯವಹಾರಗಳ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಭಾರ್ತಿ ಹೇಳಿದ್ದಾರೆ.

ವಾಣಿಜ್ಯ ವಾಹನಗಳ ಮಾರಾಟದಲ್ಲಿ ಶೇ 27ರಷ್ಟು ಏರಿಕೆಯಾಗಿದ್ದು, 91,759 ವಾಹನಗಳು ಮಾರಾಟವಾಗಿವೆ.

ವಿವಿಧ ಮಾದರಿಯ ವಾಹನಗಳ ಮಾರಾಟ (ಲಕ್ಷಗಳಲ್ಲಿ)

ವಾಹನದ ಮಾದರಿ	2025	2024	% ಹೆಚ್ಚಳ
ಪ್ರಯಾಣಿಕ ವಾಹನಗಳು	8.63	7.43	16
ಯುಟಿಲಿಟಿ ವಾಹನಗಳು	4.27	3.23	32
ಕಾರುಗಳು	4.25	4.12	3
ದ್ವಿಚಕ್ರ ವಾಹನಗಳು	49	39	24
ತ್ರಿಚಕ್ರ ವಾಹನಗಳು	4.25	2.98	43

ಇ.ವಿ.ಗಳಿಗೆ ಉತ್ತೇಜನ ನೀಡಿ: ಟಾಟಾ



ನವದೆಹಲಿ (ಪಿಟಿಐ): ಆರಂಭಿಕ ಹಂತದ ವಿದ್ಯುತ್ ಚಾಲಿತ ವಾಹನಗಳಿಗೆ ಉತ್ತೇಜನ ಕ್ರಮಗಳನ್ನು ಹಾಗೂ ಕ್ಯಾಬ್, ಟ್ಯಾಕ್ಸಿ ಸೇವೆಗಳಲ್ಲಿ ಬಳಕೆಯಾಗುವ ಇ.ವಿ.ಗಳಿಗೆ ಬೆಂಬಲವನ್ನು ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಬೇಕು ಎಂದು ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಶೈಲೇಶ್ ಚಂದ್ರ ಮನವಿ ಮಾಡಿದ್ದಾರೆ.

ಕೇಂದ್ರ ಸರ್ಕಾರವು ಜಿಎಸ್‌ಟಿ ದರ ಪರಿಷ್ಕರಿಸಿರುವುದು, ಆದಾಯ ತೆರಿಗೆ ವಿನಾಯಿತಿಯ ಮಿತಿಯನ್ನು ಹೆಚ್ಚು ಮಾಡಿರುವುದು, ರೆಪೊ ದರವನ್ನು ಆರ್‌ಬಿಐ ಪರಿಷ್ಕರಿಸಿರುವುದು ದೇಶದಲ್ಲಿ ಪ್ರಯಾಣಿಕ ವಾಹನಗಳಿಗೆ ಬೇಡಿಕೆ ಹೆಚ್ಚಾಗುವಂತೆ ಮಾಡಿವೆ. ಆದರೆ ಆರಂಭಿಕ ಹಂತದ ಇ.ವಿ.ಗಳಿಗೆ ಬೇಡಿಕೆ ಅಷ್ಟೊಂದು ಜಾಸ್ತಿ ಆಗಿಲ್ಲ ಎಂದು ಶೈಲೇಶ್ ಚಂದ್ರ ಹೇಳಿದ್ದಾರೆ.

‘ಪ್ರಯಾಣಿಕ ವಾಹನ ಮಾರುಕಟ್ಟೆ ಹಾಗೂ ಇ.ವಿ. ಮಾರುಕಟ್ಟೆಗೆ ಉತ್ತೇಜನ ನೀಡಿದ ಸರ್ಕಾರದ ಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ಬಜೆಟ್‌ನಲ್ಲಿ ಕೇಂದ್ರವು ಎರಡು ಅಂಶಗಳನ್ನು ಪರಿಗಣಿಸಬಹುದು. ಆರಂಭಿಕ ಹಂತದ ಇ.ವಿ.ಗಳ ವಿಚಾರವಾಗಿ ಸರ್ಕಾರವು ಒಂದಿಷ್ಟು ಉತ್ತೇಜನಾ ಕ್ರಮಗಳನ್ನು ಘೋಷಿಸುವ ಬಗ್ಗೆ ಪರಿಶೀಲಿಸಬಹುದು’ ಎಂದು ಅವರು ಹೇಳಿದ್ದಾರೆ.

‘ಕ್ಯಾಬ್, ಟ್ಯಾಕ್ಸಿಯಂತಹ ಕಾರುಗಳು ಇತರ ಪ್ರಯಾಣಿಕ ವಾಹನಗಳಿಗಿಂತ ಐದು ಪಟ್ಟು ಹೆಚ್ಚು ಬಳಕೆಯಾಗುತ್ತವೆ. ಹೀಗಾಗಿ ಈ ವರ್ಗದ ಇ.ವಿ.ಗಳಿಗೆ ಸಿಗುವ ನೆರವು ಪರಿಸರದ ಮೇಲೆಯೂ ಉತ್ತಮ ಪರಿಣಾಮವನ್ನು ಬೀರುತ್ತದೆ. ಈ ವರ್ಗದ ವಾಹನಗಳನ್ನು ಪಿಎಂ ಇ–ಡ್ರೈವ್ ಯೋಜನೆಯಲ್ಲಿ ಪರಿಗಣಿಸಬಹುದು’ ಎಂದು ಅವರು ಸಲಹೆ ನೀಡಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು: 100 ಕ್ಕೆ ₹550; 12 ಕ್ಕೆ ₹75
ಮೈಸೂರು: 100 ಕ್ಕೆ ₹550

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ) ₹500-741
ದ್ವಿತಳಿ (ಬಿ.ವಿ) ₹222-896

ಬಹುಮತ ಸಿಗದ ರಾಜ್ಯಗಳಲ್ಲಿ ಇತರ ಪಕ್ಷಗಳೊಂದಿಗೆ ಸೇರಿ ಅಧಿಕಾರ ಹಿಡಿಯುವುದು ಬಿಜೆಪಿ ತಂತ್ರ ಎಂಬ ಕಾಂಗ್ರೆಸ್ ವಾದ ಸರಿಯೇ?

ಹೌದು / ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಬಾಳೆ ಹಣ್ಣಿಗಾಗಿ ಗಲಾಟೆ: ಹಿಂದೂ ವ್ಯಾಪಾರಿ ಹತ್ಯೆ

ಢಾಕಾ (ಪಿಟಿಐ): ಬಾಳೆ ಹಣ್ಣಿನ ವಿಚಾರವಾಗಿ ನಡೆದ ಗಲಾಟೆಯಲ್ಲಿ ಹಿಂದೂ ವ್ಯಾಪಾರಿಯೊಬ್ಬರನ್ನು ಥಳಿಸಿ ಹತ್ಯೆ ಮಾಡಿರುವ ಘಟನೆ ಬಾಂಗ್ಲಾದೇಶದ ಘಾಜಿಪುರ ಜಿಲ್ಲೆಯ ಕಾಳಿಗಂಜ್‌ನಲ್ಲಿ ನಡೆದಿದೆ.

ಹತ್ಯೆಯಾದ ವ್ಯಾಪಾರಿಯನ್ನು ಲಿತಾನ್ ಚಂದ್ರ ಘೋಷ್ ಎಂದು ಗುರುತಿಸಲಾಗಿದೆ. ಘೋಷ್ ಅವರನ್ನು ಥಳಿಸಿ ಹತ್ಯೆ ಮಾಡಿದ ಶಂಕೆ ಮೇರೆಗೆ ಒಂದೇ ಕುಟುಂಬದ ಸದಸ್ಯರಾದ ಮಾಸಂ ಮಿಯಾ (28), ಸ್ವಪನ್ ಮಿಯಾ (55), ಮಜೆದಾ ಖಾತುನ್ (45) ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಘೋಷ್ ಅವರು ‘ಬೈಸಾಖಿ ಸ್ವೀಟ್‌ಮೀಟ್ ಆ್ಯಂಡ್ ಹೋಟೆಲ್’ನ ಮಾಲೀಕರಾಗಿದ್ದರು. ಮಾಸಂ ಮಿಯಾ ಅವರು ಬಾಳೆ ಬೆಳೆಗಾರರಾಗಿದ್ದು, ಅವರ ತೋಟದಲ್ಲಿ ಬಾಳೆ ಹಣ್ಣಿನ ಹಲವು ಗೊನೆಗಳು ನಾಪತ್ತೆಯಾಗಿದ್ದವು. ಹುಡುಕಾಟದ ವೇಳೆ ಘೋಷ್ ಅವರ ಹೋಟೆಲ್‌ನಲ್ಲಿ ಬಾಳೆ ಗೊನೆಗಳು ಸಿಕ್ಕಿದ್ದವು. ಹೀಗಾಗಿ, ಘೋಷ್ ಹಾಗೂ ಮಾಸಂ ಕುಟುಂಬದವರ ನಡುವೆ ಜಗಳ ನಡೆದಿತ್ತು. ಈ ವೇಳೆ ಆರೋಪಿಗಳು ಘೋಷ್ ಅವರನ್ನು ಥಳಿಸಿದ ಪರಿಣಾಮ ಅವರು ಸ್ಥಳದಲ್ಲೇ ಕುಸಿದು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಗ್ಯ ವಿಮೆ ವರ್ಗಾವಣೆ ಹೇಗೆ?

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಕೆಲವು ವರ್ಷಗಳ ಹಿಂದೆ ನೀವು ಆರೋಗ್ಯ ವಿಮೆ ಪಡೆದುಕೊಂಡಿರುತ್ತೀರಿ. ಆ ಸಂದರ್ಭಕ್ಕೆ ಅದು ನಿಮ್ಮ ಅಗತ್ಯಗಳನ್ನು ಪೂರೈಸುತ್ತ ಇರುತ್ತದೆ. ಆದರೆ ಈಗ ವೈದ್ಯಕೀಯ ವೆಚ್ಚವು ಏರಿಕೆಯಾಗಿದೆ. ಕವರೇಜ್ ಕಡಿಮೆ ಇದೆ, ಪಾಲಿಸಿಯಲ್ಲಿ ಮಿತಿಗಳು ಕೂಡ ಇವೆ. ಪ್ರತಿ ಕ್ಲೇಮ್ ಪಡೆದುಕೊಳ್ಳುವಾಗಲೂ ವಿಮಾ ಕಂಪನಿ ಸಬೂಬು ಹೇಳುತ್ತಿದ್ದು, ನಿಮಗೆ ಕಿರಿಕಿರಿಯಾಗುತ್ತಿದೆ. ಇಂತಹ ಸನ್ನಿವೇಶವು ಬೇರೊಂದು ಕಂಪನಿಯ ಉತ್ತಮ ಆರೋಗ್ಯ ವಿಮೆ ಪಡೆದುಕೊಳ್ಳುವುದು ಸರಿಯೇ ಎನ್ನುವ ಪ್ರಶ್ನೆಯನ್ನು ನಿಮ್ಮಲ್ಲಿ ಹುಟ್ಟುಹಾಕುತ್ತದೆ. ಒಂದೊಮ್ಮೆ ಇದೇ ಸ್ಥಿತಿಯಲ್ಲಿ ನೀವಿದ್ದರೆ ಬೇರೊಂದು ಕಂಪನಿಗೆ ಆರೋಗ್ಯ ವಿಮೆ ವರ್ಗಾವಣೆ ಮಾಡಿಕೊಳ್ಳುವುದು ನಿಮ್ಮ ನೆರವಿಗೆ ಬರುತ್ತದೆ. ಬೇರೊಂದು ಕಂಪನಿಗೆ ಆರೋಗ್ಯ ವಿಮೆ ವರ್ಗಾವಣೆ ಅಂದರೇನು? ಅದರ ಸಾಧಕ-ಬಾಧಕಗಳೇನು?

ಆರೋಗ್ಯ ವಿಮೆ ವರ್ಗಾವಣೆ: ನಾವು ದೂರಸಂಪರ್ಕ ಕಂಪನಿಯೊಂದರಿಂದ ಮೊಬೈಲ್ ಸೇವಾ ಸಂಪರ್ಕ ಪಡೆದಿರುತ್ತೇವೆ. ಆ ಕಂಪನಿಯ ಸೇವೆ ನಮಗೆ ಇಷ್ಟವಾಗದಿದ್ದಲ್ಲಿ ಈಗಿರುವ ಮೊಬೈಲ್ ನಂಬರ್ ಅನ್ನೇ ಮುಂದುವರಿಸಿಕೊಂಡು ಮತ್ತೊಂದು ದೂರಸಂಪರ್ಕ ಕಂಪನಿಯ ಸೇವೆ ಪಡೆಯಲು ಶುರು ಮಾಡುತ್ತೇವೆ. ಅಂದರೆ ಇಲ್ಲಿ ಮೊಬೈಲ್ ನಂಬರ್ ಅದೇ ಇರುತ್ತದೆ, ಆದರೆ ದೂರಸಂಪರ್ಕ ಸೇವೆ ಒದಗಿಸುವ ಕಂಪನಿ ಬದಲಾಗುತ್ತದೆ. ಇದೇ ಮಾದರಿಯಲ್ಲಿ ಆರೋಗ್ಯ ವಿಮಾ ಸೇವೆಗಳನ್ನು ಒಂದು ಕಂಪನಿಯಿಂದ ಮತ್ತೊಂದು ಕಂಪನಿಗೆ ವರ್ಗಾಯಿಸಿಕೊಳ್ಳಬಹುದು. ಹೀಗೆ ಬೇರೊಂದು ಕಂಪನಿಗೆ ಆರೋಗ್ಯ ವಿಮೆಯನ್ನು ವರ್ಗಾವಣೆ ಮಾಡಿದಾಗ ಈ ಹಿಂದಿನ ಕಂಪನಿ ಒದಗಿಸಿದ್ದ ಎಲ್ಲ ಅನುಕೂಲಗಳನ್ನು ಮುಂದಿನ ಕಂಪನಿ ಒದಗಿಸಬೇಕಾಗುತ್ತದೆ. ಅಂದರೆ ನೋ ಕ್ಲೇಮ್ ಬೋನಸ್ (ಯಾವುದೇ ಕ್ಲೇಮ್ ಪಡೆಯದಿದ್ದರೆ ಸಿಗುವ ಹೆಚ್ಚುವರಿ ಕವರೇಜ್), ವೇಟಿಂಗ್ ಪೀರಿಯಡ್ (ನಿರ್ದಿಷ್ಟ ಚಿಕಿತ್ಸೆಗಳಿಗಾಗಿ ಕಾಯುವಿಕೆ ಅವಧಿ) ಸೇರಿದಂತೆ ಈ ಹಿಂದಿನ ಪಾಲಿಸಿಯಲ್ಲಿನ ಎಲ್ಲ ಸವಲತ್ತುಗಳನ್ನು ಹೊಸ ಆರೋಗ್ಯ ವಿಮಾ ಕಂಪನಿ ಕೊಡಬೇಕಾಗುತ್ತದೆ. ಉದಾಹರಣೆಗೆ ‘ಎ’ ಎನ್ನುವ ಕಂಪನಿಯಿಂದ ನೀವು ಕೆಲವು ವರ್ಷಗಳ ಹಿಂದೆ ಆರೋಗ್ಯ ವಿಮೆ ಕವರೇಜ್ ಪಡೆದುಕೊಂಡಿರುತ್ತೀರಿ. ಈಗ ‘ಬಿ’ ಎನ್ನುವ ಮತ್ತೊಂದು ಕಂಪನಿಗೆ ನಿಮ್ಮ ಆರೋಗ್ಯ ವಿಮೆ ವರ್ಗಾಯಿಸಿಕೊಳ್ಳುತ್ತೀರಿ. ಈ ಸಂದರ್ಭದಲ್ಲಿ ನೀವು ‘ಎ’ ಕಂಪನಿಯಲ್ಲಿ ಪೂರೈಸಿದ್ದ ಕಾಯುವಿಕೆ ಅವಧಿ ಮತ್ತು ಪಡೆದಿದ್ದ ನೋ ಕ್ಲೇಮ್ ಬೋನಸ್ ಅನ್ನು ‘ಬಿ’ ಕಂಪನಿ ಗಣನೆಗೆ ತೆಗೆದುಕೊಳ್ಳುತ್ತದೆ.

ವರ್ಗಾಯಿಸಿಕೊಳ್ಳುವುದು ಹೇಗೆ?

ಪಾಲಿಸಿ ನವೀಕರಣ ದಿನಾಂಕ ಪರಿಶೀಲಿಸಿ: ನಿಮ್ಮ ಆರೋಗ್ಯ ವಿಮೆಯ ನವೀಕರಣ ಹತ್ತಿರವಾಗಿರುವ ಸಮಯದಲ್ಲಿ ಮಾತ್ರ ಅದನ್ನು ವರ್ಗಾವಣೆ ಮಾಡಬಹುದು. ಪಾಲಿಸಿ ಪಡೆದು 6 ತಿಂಗಳ ನಂತರ ಅಥವಾ ಕಂತು ಪಾವತಿಗೆ ನೀಡುವ ಗ್ರೇಸ್ ಪೀರಿಯಡ್‌ನಲ್ಲಿ (ಹೆಚ್ಚುವರಿ ಅವಧಿ) ವರ್ಗಾವಣೆ ಸಾಧ್ಯವಿಲ್ಲ. ಆರೋಗ್ಯ ವಿಮೆ ವರ್ಗಾವಣೆ ಮಾಡಲು ನವೀಕರಣದ 45ರಿಂದ 60 ದಿನಗಳಿಗೂ ಮೊದಲು ಹೊಸ ಆರೋಗ್ಯ ವಿಮಾ ಸಂಸ್ಥೆಯನ್ನು ಸಂಪರ್ಕಿಸಬೇಕು.

ಯಾವ ಸಂಸ್ಥೆಯ ಪಾಲಿಸಿ ಪಡೆಯಬೇಕು ತೀರ್ಮಾನಿಸಿ: ಆರೋಗ್ಯ ವಿಮೆಯನ್ನು ವರ್ಗಾವಣೆ ಮಾಡಬೇಕು ಎಂದು ತೀರ್ಮಾನಿಸಿದಾಗ ಹೊಸದಾಗಿ ಬೇರೆ ಯಾವ ಕಂಪನಿಯ ಪಾಲಿಸಿ ಪಡೆದುಕೊಳ್ಳಬೇಕು ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಹಳೆಯ ಪಾಲಿಸಿಯೊಂದಿಗೆ ಹೊಸದನ್ನು ಹೋಲಿಕೆ ಮಾಡಿ ನೋಡಿ. ಕವರೇಜ್ ಎಷ್ಟಿದೆ, ಅನುಕೂಲಗಳೇನು, ಕಾಯುವಿಕೆ ಅವಧಿ ಹೇಗಿದೆ, ಯಾವುದಕ್ಕೆ ಚಿಕಿತ್ಸೆ ಸಿಗುತ್ತದೆ ಮತ್ತು ಯಾವುದಕ್ಕೆ ಸಿಗುವುದಿಲ್ಲ, ಯಾವೆಲ್ಲಾ ಆಸ್ಪತ್ರೆಗಳೊಂದಿಗೆ ವಿಮಾ ಕಂಪನಿ ಒಡಂಬಡಿಕೆ ಮಾಡಿಕೊಂಡಿದೆ, ಕ್ಲೇಮ್ ರೇಷಿಯೋ ಹೇಗಿದೆ ಎಂಬುದನ್ನು ತುಲನೆ ಮಾಡಿ ನೋಡಬೇಕು.

ಹೊಸ ವಿಮಾ ಕಂಪನಿಗೆ ಅರ್ಜಿ ಸಲ್ಲಿಸಿ: ಪ್ರಸ್ತುತ ಇರುವ ಆರೋಗ್ಯ ವಿಮೆಯನ್ನು ವರ್ಗಾವಣೆ ಮಾಡಬೇಕು ಎಂದು ಹೊಸ ವಿಮಾ ಕಂಪನಿಗೆ ತಿಳಿಸಿ. ಅದಕ್ಕಾಗಿ ಪ್ರಸ್ತಾವನೆ ಅರ್ಜಿ, ವರ್ಗಾವಣೆ ಅರ್ಜಿ ಮತ್ತು ಈಗಿರುವ ಪಾಲಿಸಿಯ ಕೆಲ ವಿವರಗಳನ್ನು ಒದಗಿಸಬೇಕು

ಅಗತ್ಯ ದಾಖಲೆಗಳನ್ನು ಸಲ್ಲಿಸಿ: ಹೊಸ ವಿಮಾ ಸಂಸ್ಥೆ ನಿಮ್ಮ ಅರ್ಜಿಯನ್ನು ಪರಿಶೀಲಿಸಲು ಪೂರಕ ದಾಖಲೆಗಳನ್ನು ಕೇಳುತ್ತದೆ. ನಿಮ್ಮ ವಯಸ್ಸು, ಕವರೇಜ್ ಮೊತ್ತ ಮತ್ತು ಆರೋಗ್ಯದ ಹಿನ್ನೆಲೆ ಆಧರಿಸಿ ವೈದ್ಯಕೀಯ ಪರೀಕ್ಷೆ ಮಾಡಲಾಗುತ್ತದೆ. (ಅಗತ್ಯ ದಾಖಲೆಗಳ ಬಗ್ಗೆ ಪ್ರತ್ಯೇಕ ಮಾಹಿತಿ ಇದೆ ಗಮನಿಸಿಕೊಳ್ಳಿ)

ಅರ್ಜಿ ಪರಿಶೀಲನೆ ಮತ್ತು ಮಾಹಿತಿ ಹಂಚಿಕೆ: ನೀವು ಅರ್ಜಿ ಸಲ್ಲಿಸಿದ ಮೇಲೆ ಹಳೆಯ ವಿಮಾ ಕಂಪನಿ ನಿಮ್ಮ ಪಾಲಿಸಿಯ ವಿವರ ಮತ್ತು ಕ್ಲೇಮ್ ಇತಿಹಾಸವನ್ನು ಹೊಸ ಕಂಪನಿಯೊಂದಿಗೆ ಹಂಚಿಕೊಳ್ಳುತ್ತದೆ. ಈ ಮಾಹಿತಿ ಆಧರಿಸಿ ಹೊಸ ವಿಮಾ ಕಂಪನಿ ನಿಮ್ಮ ವರ್ಗಾವಣೆ ಅರ್ಜಿಯನ್ನು ಒಪ್ಪಿಕೊಳ್ಳಬಹುದು, ಒಂದಷ್ಟು ನಿಬಂಧನೆಗಳೊಂದಿಗೆ ಒಪ್ಪಿಗೆ ಕೊಡಬಹುದು, ಕ್ಲೇಮ್ ವೇಳೆ ಚಿಕಿತ್ಸೆಗೆ ಸಹಪಾವತಿಗೆ ಹೇಳಬಹುದು ಅಥವಾ ಅರ್ಜಿಯನ್ನೇ ತಿರಸ್ಕರಿಸಬಹುದು.

ಅನುಮೋದನೆ ಮತ್ತು ಪಾಲಿಸಿ ವಿತರಣೆ: ನಿಮಗೆ ಪಾಲಿಸಿ ಕೊಡಬಹುದು ಎನ್ನುವ ವಿಶ್ವಾಸ ಹೊಸ ವಿಮಾ ಕಂಪನಿಗೆ ಮೂಡಿದಾಗ ಹಳೆಯ ಪಾಲಿಸಿಯ ನವೀಕರಣದ ದಿನಾಂಕಕ್ಕೆ ಹೊಸ ಆರೋಗ್ಯ ವಿಮಾ ಪಾಲಿಸಿಯನ್ನು ನೀಡಲಾಗುತ್ತದೆ. ಹಳೆಯ ಪಾಲಿಸಿಯಲ್ಲಿದ್ದ ನೋ ಕ್ಲೇಮ್ ಬೋನಸ್, ಕಾಯುವಿಕೆ ಅವಧಿ ಪೂರೈಕೆ ಸೇರಿದಂತೆ ಎಲ್ಲ ಅನುಕೂಲಗಳನ್ನು ಹೊಸ ಪಾಲಿಸಿಯಲ್ಲಿ ನೀಡಲಾಗುತ್ತದೆ. ಒಂದೊಮ್ಮೆ ಹೊಸ ವಿಮಾ ಕಂಪನಿ ನಿಮಗೆ ಪಾಲಿಸಿ ನಿರಾಕರಿಸಿದರೆ ಹಳೆಯ ವಿಮಾ ಕಂಪನಿಯಿಂದ ನೀವು ಪಾಲಿಸಿ ನವೀಕರಿಸಿಕೊಳ್ಳಲು ಸಾಧ್ಯವಿದೆ.

ವರ್ಗಾವಣೆಗೆ ಬೇಕಾದ ದಾಖಲೆಗಳು

- ಪ್ರಸ್ತುತ ಆರೋಗ್ಯ ವಿಮೆಯ ದಾಖಲೆ
- ಕಳೆದ ಎರಡರಿಂದ ಮೂರು ವರ್ಷಗಳ ವಿಮಾ ದಾಖಲೆ
- ನಿಮ್ಮ ಹಳೆಯ ಪಾಲಿಸಿಯಲ್ಲಿ ಕವರೇಜ್ ಹೆಚ್ಚಳ ಮಾಡಿದ್ದರೆ, ಹೊಸ ಸದಸ್ಯರನ್ನು ಸೇರಿಸಿದ್ದರೆ ಅದರ ವಿವರ
- ಈ ಹಿಂದೆ ಪಡೆದಿರುವ ಕ್ಲೇಮ್‌ಗಳ ವಿವರ (ಕ್ಲೇಮ್ ಪಡೆದಿದ್ದಲ್ಲಿ)
- ಇತ್ತೀಚಿನ ವೈದ್ಯಕೀಯ ವರದಿಗಳು
- ಗುರುತಿನ ಚೀಟಿ ಮತ್ತು ವಿಳಾಸ ಖಾತರಿ – ಆಧಾರ್ ಮತ್ತು ಪಾನ್‌ಕಾರ್ಡ್
- ವರ್ಗಾವಣೆಗಾಗಿ ಹೊಸ ವಿಮಾ ಕಂಪನಿಗೆ ಸಲ್ಲಿಸಬೇಕಿರುವ ಅರ್ಜಿ
- ಕೆಲ ಕಂಪನಿಗಳು ಸಾಂದರ್ಭಿಕವಾಗಿ ಇನ್ನೂ ಹೆಚ್ಚಿನ ದಾಖಲೆಗಳನ್ನು ಕೇಳಬಹುದು

ಅಮೆರಿಕ ಅಧ್ಯಕ್ಷ ಟ್ರಂಪ್ ನಿರ್ಧಾರ ಸೂಕ್ತವಲ್ಲ: ಬ್ರಿಟನ್ ಪ್ರಧಾನಿ

ಹೆಚ್ಚುವರಿ ಸುಂಕ: ಐರೋಪ್ಯ ರಾಷ್ಟ್ರಗಳ ಆಕ್ಷೇಪ



ಜರ್ಮನಿಯ ಸಶಸ್ತ್ರ ಪಡೆಗಳ ಯೋಧರು ಗ್ರೀನ್‌ಲ್ಯಾಂಡ್‌ನ ನೂಕ್ ವಿಮಾನ ನಿಲ್ದಾಣದಿಂದ ಐಸ್‌ಲ್ಯಾಂಡ್‌ನ ರೆಕ್ಜವಿಕ್‌ಗೆ ಭಾನುವಾರ ತೆರಳಿದರು –ಎಎಫ್‌ಪಿ ಚಿತ್ರ

ಲಂಡನ್ (ಪಿಟಿಐ): ಗ್ರೀನ್‌ಲ್ಯಾಂಡ್ ಸ್ವಾಧೀನ ವಿರೋಧಿಸುತ್ತಿರುವ ಯುರೋಪ್ ರಾಷ್ಟ್ರಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿರುವುದಕ್ಕೆ ಬ್ರಿಟನ್, ನೆದರ್ಲೆಂಡ್ಸ್, ಫ್ರಾನ್ಸ್, ಸ್ಪೇನ್, ಸ್ವೀಡನ್ ಆಕ್ಷೇಪ ವ್ಯಕ್ತಪಡಿಸಿವೆ.

‘ಟ್ರಂಪ್ ಅವರದ್ದು ಸಂಪೂರ್ಣ ತಪ್ಪು ನಿರ್ಧಾರ’ ಎಂದು ಈ ರಾಷ್ಟ್ರಗಳು ಹೇಳಿವೆ.

ಟ್ರಂಪ್ ಅವರು ತಮ್ಮ ಸಾಮಾಜಿಕ ಮಾಧ್ಯಮ ‘ಟ್ರೂತ್’ನಲ್ಲಿ ಹೆಚ್ಚುವರಿ ಸುಂಕ ವಿಧಿಸುವ ಬಗ್ಗೆ ಪೋಸ್ಟ್ ಮಾಡಿದ ನಂತರ, ಯುರೋಪಿನ ಮಿತ್ರ ರಾಷ್ಟ್ರಗಳು ಈ ಕ್ರಮವನ್ನು ಖಂಡಿಸಿವೆ.

‘ಫೆಬ್ರುವರಿ 1ರಿಂದ ಬ್ರಿಟನ್, ಡೆನ್ಮಾರ್ಕ್, ನಾರ್ವೆ, ಸ್ವೀಡನ್, ಫ್ರಾನ್ಸ್, ಜರ್ಮನಿ, ನೆದರ್ಲೆಂಡ್ಸ್ ಮತ್ತು ಫಿನ್ಲೆಂಡ್‌ನಿಂದ ಅಮೆರಿಕಕ್ಕೆ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಶೇ 10ರಷ್ಟು ಸುಂಕ ವಿಧಿಸಲಾಗುವುದು. ಗ್ರೀನ್‌ಲ್ಯಾಂಡ್‌ನ ಖರೀದಿ ಒಪ್ಪಂದವಾಗುವ ವರೆಗೆ ಈ ಸುಂಕವು ಶೇ 25ರವರೆಗೆ ಏರಿಕೆ ಯಾಗಬಹುದು’ ಎಂದು ಟ್ರಂಪ್ ಹೇಳಿದ್ದಾರೆ.

‘ಗ್ರೀನ್‌ಲ್ಯಾಂಡ್ ಬಗ್ಗೆ ನಮ್ಮ ನಿಲುವು ತುಂಬಾ ಸ್ಪಷ್ಟವಾಗಿದೆ. ಇದು ಡೆನ್ಮಾರ್ಕ್ ಸಾಮ್ರಾಜ್ಯದ ಭಾಗವಾಗಿದೆ. ಅದರ ಭವಿಷ್ಯವು ಗ್ರೀನ್‌ಲ್ಯಾಂಡ್ ಮತ್ತು ಡೆನ್ಮಾರ್ಕ್‌ನವರಿಗೆ ಸಂಬಂಧಿಸಿದ ವಿಷಯವಾಗಿದೆ’ ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಶನಿವಾರ ರಾತ್ರಿ ತಿಳಿಸಿದ್ದಾರೆ.

‘ಆರ್ಕ್ಟಿಕ್ ಭದ್ರತೆಯು ನ್ಯಾಟೊಗೆ ಮುಖ್ಯವಾಗಿದೆ. ಮಿತ್ರ ರಾಷ್ಟ್ರಗಳು ಆರ್ಕ್ಟಿಕ್‌ನ ವಿವಿಧ ಭಾಗಗಳಲ್ಲಿ ರಷ್ಯಾದಿಂದ ಬರುವ ಬೆದರಿಕೆಗಳನ್ನು ಎದುರಿಸಲು ಒಟ್ಟಾಗಿ ಕೆಲಸ ಮಾಡಬೇಕು. ನ್ಯಾಟೊ ರಾಷ್ಟ್ರಗಳ ಸಾಮೂಹಿಕ ಭದ್ರತೆಗಾಗಿ ಶ್ರಮಿಸುತ್ತಿರುವ ಮಿತ್ರ ರಾಷ್ಟ್ರಗಳ ಮೇಲೆ ಸುಂಕಗಳನ್ನು ಹೇರುವುದು ಸರಿಯಲ್ಲ. ನಾವು ಈ ವಿಷಯವನ್ನು ನೇರವಾಗಿ ಅಮೆರಿಕ ಆಡಳಿತದೊಂದಿಗೆ ಚರ್ಚಿಸುತ್ತೇವೆ’ ಎಂದು ಹೇಳಿದ್ದಾರೆ.

‘ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವವು ಅಂತರರಾಷ್ಟ್ರೀಯ ಕಾನೂನಿನ ಮೂಲಭೂತ ತತ್ವಗಳಾಗಿವೆ. ಸುಂಕ ಹೆಚ್ಚಳವು ಅಟ್ಲಾಂಟಿಕ್ ಆಚೆಯ ಸಂಬಂಧಗಳನ್ನು ಹಾಳುಮಾಡುತ್ತದೆ’ ಎಂದು ಐರೋಪ್ಯ ಒಕ್ಕೂಟದ ಅಧ್ಯಕ್ಷೆ ಉರ್ಸುಲಾ ವಾನ್ ಡರ್ ಲೆಯೆನ್ ಅವರು ‘ಎಕ್ಸ್’ನಲ್ಲಿ ಎಚ್ಚರಿಕೆ ನೀಡಿದ್ದಾರೆ.

‘ಒಪ್ಪಂದ ಏರ್ಪಟ್ಟರೆ ಮಾತ್ರ ಸುಂಕ ವಾಪಸ್’

‘ವಿಶ್ವ ಶಾಂತಿ ಅಪಾಯದಲ್ಲಿದೆ. ಆದ್ದರಿಂದ, ಈಗ ಡೆನ್ಮಾರ್ಕ್ ದೇಶವು ಗ್ರೀನ್‌ಲ್ಯಾಂಡ್ ಅನ್ನು ಹಿಂತಿರುಗಿಸುವ ಸಮಯ ಬಂದಿದೆ’ ಎಂದು ಟ್ರಂಪ್ ಅವರು ಸಾಮಾಜಿಕ ಮಾಧ್ಯಮ ‘ಟ್ರೂತ್’ನಲ್ಲಿ ತಿಳಿಸಿದ್ದಾರೆ.

‘ಇದರಲ್ಲಿ ಭಾಗಿಯಾಗಿರುವ ದೇಶಗಳೊಂದಿಗೆ ಮಾತುಕತೆ ನಡೆಸಲು ತಮ್ಮ ಆಡಳಿತವು ತಕ್ಷಣವೇ ಮುಕ್ತವಾಗಿದೆ. ಗ್ರೀನ್‌ಲ್ಯಾಂಡ್‌ನ ಸಂಪೂರ್ಣ ಖರೀದಿಗೆ ಒಪ್ಪಂದ ಏರ್ಪಟ್ಟಾಗ ಮಾತ್ರ ಈ ಸುಂಕಗಳನ್ನು ಕೊನೆಗೊಳಿಸಲಾಗುವುದು’ ಎಂದು ಹೇಳಿದ್ದಾರೆ.

ದಾವೋಸ್‌ನಲ್ಲಿ ನಡೆಯಲಿರುವ ವಿಶ್ವ ಆರ್ಥಿಕ ವೇದಿಕೆಯ ಸಭೆಯಲ್ಲಿ ಟ್ರಂಪ್ ಅವರು ವಾನ್ ಡರ್ ಲೆಯೆನ್ ಮತ್ತು ಯುರೋಪ್‌ನ ಇತರ ನಾಯಕರನ್ನು ಭೇಟಿಯಾಗಲಿದ್ದಾರೆ. ಅಲ್ಲಿ ಗ್ರೀನ್‌ಲ್ಯಾಂಡ್ ಕುರಿತ ವಿಚಾರ ಪ್ರಮುಖವಾಗಿ ಚರ್ಚೆಯಾಗಲಿದೆ.

> ಹೆಚ್ಚುವರಿ ಸುಂಕ ವಿಧಿಸುವ ಕ್ರಮವು ಸ್ವೀಕಾರಾರ್ಹವಲ್ಲ. ಟ್ರಂಪ್ ಅವರ ಬೆದರಿಕೆಗೆ ನಾವು ಮಣಿಯುವುದಿಲ್ಲ
> **ಇಮಾನ್ಯುಯೆಲ್ ಮ್ಯಾಕ್ರನ್,** ಫ್ರಾನ್ಸ್ ಅಧ್ಯಕ್ಷ

> ಹೆಚ್ಚುವರಿ ಸುಂಕ ವಿಧಿಸುವ ಟ್ರಂಪ್ ಬೆದರಿಕೆಯು ಬ್ಲ್ಯಾಕ್‌ಮೇಲ್‌ನ ತಂತ್ರವಾಗಿದೆ. ಇದರ ಅಗತ್ಯವಿಲ್ಲ. ನ್ಯಾಟೊ ಹಾಗೂ ಗ್ರೀನ್‌ಲ್ಯಾಂಡ್‌ಗೆ ಇದು ಸಹಾಯ ಮಾಡುವುದಿಲ್ಲ
> **ಡೇವಿಡ್ ವ್ಯಾನ್ ವೀಲ್,** ನೆದರ್ಲೆಂಡ್ಸ್ ವಿದೇಶಾಂಗ ಸಚಿವ

> ಗ್ರೀನ್‌ಲ್ಯಾಂಡ್ ಮೇಲಿನ ಅಮೆರಿಕದ ಆಕ್ರಮಣವು ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಭೂಮಿಯ ಮೇಲಿನ ಅತ್ಯಂತ ಸಂತೋಷದಾಯಕ ವ್ಯಕ್ತಿಯನ್ನಾಗಿ ಮಾಡುತ್ತದೆ
> **ಪೆಡ್ರೊ ಸಂಚೆಝ್,** ಸ್ಪೇನ್ ಪ್ರಧಾನಿ

> ಈ ಬ್ಲ್ಯಾಕ್‌ಮೇಲ್ ತಂತ್ರಕ್ಕೆ ನಾವು ಮಣಿಯುವುದಿಲ್ಲ. ಈ ಸಮಸ್ಯೆಯನ್ನು ಒಟ್ಟಾಗಿ ಎದುರಿಸಲು ಐರೋಪ್ಯ ಒಕ್ಕೂಟದ ರಾಷ್ಟ್ರಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ
> **ಅಲ್ಫ್ ಕ್ರಿಸ್ಟರ್‌ಸನ್,** ಸ್ವೀಡನ್ ಪ್ರಧಾನಿ

ಔಷಧ ಪರಿವೀಕ್ಷಕರ ನೇಮಕ ಸುಗಮ

ಒಂದನೇ ಪುಟದಿಂದ...

ಕೇಂದ್ರ ಸರ್ಕಾರದ ‘ಡ್ರಗ್ಸ್ ಆ್ಯಂಡ್ ಕಾಸ್ಮೆಟಿಕ್ಸ್ ಕಾಯ್ದೆ–1940’ ಮತ್ತು ಅದರಡಿ ರೂಪಿಸಲಾದ ನಿಯಮಗಳಡಿ ಕೆಪಿಎಸ್‌ಸಿ ಈ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸಬೇಕಿತ್ತು. ಸರ್ಕಾರ ಹೇಳಿದ ಹೆಚ್ಚುವರಿ ಅರ್ಹತೆಯು ಈ ಕಾಯ್ದೆಯಲ್ಲಿ ಇಲ್ಲದೇ ಇದ್ದುದರಿಂದ ಅದನ್ನು ಪ್ರಶ್ನಿಸಿ ಹಲವು ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್, ‘ಔಷಧ ಪರಿವೀಕ್ಷಕ ಹುದ್ದೆಗಳಿಗೆ ಅರ್ಹತೆಗಳನ್ನು ನಿಗದಿಪಡಿಸುವ ಅಧಿಕಾರ ಸಂಪೂರ್ಣವಾಗಿ ಕೇಂದ್ರ ಸರ್ಕಾರಕ್ಕೆ ಮಾತ್ರವಿದ್ದು, ರಾಜ್ಯ ಸರ್ಕಾರ ಹೆಚ್ಚುವರಿ ಅರ್ಹತೆ ವಿಧಿಸುವುದು ಸಂವಿಧಾನಬಾಹಿರ. ಹೀಗಾಗಿ, ಅದಾಗಲೇ ಸಿದ್ಧವಾಗಿದ್ದ ಆಯ್ಕೆ ಪಟ್ಟಿಯನ್ನು ಮರು ಸಿದ್ಧಪಡಿಸಬೇಕು’ ಎಂದು ಕೆಪಿಎಸ್‌ಸಿ, ರಾಜ್ಯ ಸರ್ಕಾರಕ್ಕೆ 2023ರ ಮಾರ್ಚ್ 31ರಂದು ನಿರ್ದೇಶನ ನೀಡಿತ್ತು.

ಹೈಕೋರ್ಟ್ ತೀರ್ಪು ಅನ್ನು ಪ್ರಶ್ನಿಸಿ ಕೆಲವು ಅಭ್ಯರ್ಥಿಗಳು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಇದೇ ರೀತಿ ನೇಮಕಾತಿಗೆ ಸಂಬಂಧಿಸಿದಂತೆ ಹರಿಯಾಣ ರಾಜ್ಯದ ಪ್ರಕರಣವನ್ನೂ ಸೇರಿಸಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ‘ಔಷಧ ಪರಿವೀಕ್ಷಕರ ಅರ್ಹತೆ ನಿಗದಿ ಮಾಡುವ ಅಧಿಕಾರ ‘ಡ್ರಗ್ಸ್ ಆ್ಯಂಡ್ ಕಾಸ್ಮೆಟಿಕ್ಸ್ ಕಾಯ್ದೆ -1940’ ಪ್ರಕಾರ ಕೇಂದ್ರ ಸರ್ಕಾರಕ್ಕೆ ಮಾತ್ರವಿದೆ. ಔಷಧಗಳ ತಯಾರಿ ಅಥವಾ ಪರೀಕ್ಷೆಯಲ್ಲಿ ಅನುಭವವನ್ನು ನೇಮಕಾತಿಗೆ ಕಡ್ಡಾಯ ಅರ್ಹತೆಯಾಗಿ ಪರಿಗಣಿಸಿರುವ ರಾಜ್ಯಗಳ ಅಧಿಸೂಚನೆಯು ಅಧಿಕಾರ ಮೀರಿದ್ದಾಗಿದೆ’ ಎಂದು ಇದೇ 13ರಂದು ನೀಡಿರುವ ತೀರ್ಪಿನಲ್ಲಿ ಹೇಳಿದೆ.

‘ಔಷಧ ಪರಿವೀಕ್ಷಕ ಹುದ್ದೆಗಳಿಗೆ ಆಯ್ಕೆಯಾದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕೆಪಿಎಸ್‌ಸಿ ಎಂಟು ವಾರಗಳ ಒಳಗೆ ಸಿದ್ಧಪಡಿಸಿ ರಾಜ್ಯ ಸರ್ಕಾರಕ್ಕೆ ಕಳುಹಿಸಬೇಕು. ನಂತರ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಗೆ ಸರ್ಕಾರ ಎಂಟು ವಾರಗಳ ಒಳಗೆ ಕ್ರಮ ತೆಗೆದುಕೊಳ್ಳಬೇಕು ಎಂದೂ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಹೀಗಾಗಿ, ಕೆಪಿಎಸ್‌ಸಿ ತಕ್ಷಣ ಆಯ್ಕೆ ಪಟ್ಟಿಯನ್ನು ಮರು ಸಿದ್ಧಪಡಿಸಬೇಕು’ ಎಂದು ಹುದ್ದೆ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

‘ಭಾರತದಲ್ಲಿ ಎಐ ಬಳಕೆಗೆ ಅಮೆರಿಕನ್ನರು ಹಣ ಏಕೆ ನೀಡಬೇಕು?’

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಭಾರತದ ವಿರುದ್ಧ ಹೊಸದಾಗಿ ಟೀಕಾಪ್ರಹಾರ ನಡೆಸಿರುವ ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್ ನವಾರೋ, ‘ಭಾರತದಲ್ಲಿ ಕೃತಕಬುದ್ಧಿಮತ್ತೆ (ಎಐ) ಬಳಕೆಗೆ ಸಂಬಂಧಿಸಿ ಅಮೆರಿಕನ್ನರು ಹಣ ಏಕೆ ಪಾವತಿಸಬೇಕು’ ಎಂದು ಪ್ರಶ್ನಿಸಿದ್ದಾರೆ.

‘ರಿಯಲ್ ಅಮೆರಿಕಾಸ್ ವಾಯ್ಸ್’ಗೆ ಸಂದರ್ಶನ ನೀಡಿರುವ ಅವರು, ‘ಉದಾಹರಣೆಗೆ, ಚಾಟ್‌ಜಿಪಿಟಿ ಅಮೆರಿಕದಿಂದಲೇ ಕಾರ್ಯಾಚರಣೆ ನಡೆಸುತ್ತಿದೆ. ಇಲ್ಲಿಯ ವಿದ್ಯುತ್ ಬಳಕೆ ಮಾಡುತ್ತಿದೆ. ಭಾರತ, ಚೀನಾ ಸೇರಿ ಜಗತ್ತಿನಾದ್ಯಂತ ದೊಡ್ಡಸಂಖ್ಯೆಯಲ್ಲಿ ಜನರನ್ನು ಇದನ್ನು ಬಳಸುತ್ತಿದ್ದಾರೆ. ಹೀಗಿರುವಾಗ, ಭಾರತದಲ್ಲಿರುವ ಅಮೆರಿಕನ್ನರು ಎಐ ಬಳಸಲು ಹಣ ಏಕೆ ನೀಡಬೇಕು’ ಎಂದು ಪ್ರಶ್ನಿಸಿದ್ದಾರೆ.

ಯೆಸ್ ಬ್ಯಾಂಕ್ ಲಾಭ ಶೇ 55ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಖಾಸಗಿ ವಲಯದ ಯೆಸ್ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 55ರಷ್ಟು ಹೆಚ್ಚಳವಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹612 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹952 ಕೋಟಿ ಲಾಭ ಗಳಿಸಿದೆ ಎಂದು ಬ್ಯಾಂಕ್ ತಿಳಿಸಿದೆ.

ಬಡ್ಡಿ ಮೂಲಕ ಗಳಿಸಿದ ವರಮಾನವು ಶೇ 10.9ರಷ್ಟು ಹೆಚ್ಚಾಗಿದ್ದು, ₹2,466 ಕೋಟಿಯಾಗಿದೆ. ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣ ಶೇ 5.2ರಷ್ಟು ಹೆಚ್ಚಾಗಿದೆ.

ಗಾಜಾ ಶಾಂತಿ ಮಂಡಳಿ: ಮೋದಿಗೆ ಆಹ್ವಾನ

ವಾಷಿಂಗ್ಟನ್, ಅಮೆರಿಕ (ಎಎಫ್‌ಪಿ): ಯುದ್ಧಾನಂತರದ ಗಾಜಾದ ಆಡಳಿತ ಮತ್ತು ಪುನರ್‌ನಿರ್ಮಾಣವನ್ನು ಮೇಲ್ವಿಚಾರಣೆ ನಡೆಸಲು ಉದ್ದೇಶಿಸಲಾದ ‘ಶಾಂತಿ ಮಂಡಳಿ’ ಮತ್ತು ಸಂಬಂಧಿತ ಸಮಿತಿಗಳ ಸಭೆಯಲ್ಲಿ ಭಾಗವಹಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತವು ಭಾರತದ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಪ್ರಪಂಚದಾದ್ಯಂತ ವಿವಿಧ ದೇಶಗಳ ಪ್ರಮುಖರನ್ನು ಸಂಪರ್ಕಿಸಿದೆ.

ಟ್ರಂಪ್ ಅಧ್ಯಕ್ಷತೆಯಲ್ಲಿ ಒಂದು ಮುಖ್ಯ ಮಂಡಳಿ (ಶಾಂತಿ ಮಂಡಳಿ) ಇರಲಿದ್ದು, ಇದು ಗಾಜಾ ಪುನರ್‌ನಿರ್ಮಾಣ ಮತ್ತು ಪ್ರಾದೇಶಿಕ ಸಂಬಂಧಗಳ ಬಗ್ಗೆ ಉನ್ನತ ಮಟ್ಟದ ನಿರ್ಧಾರಗಳನ್ನು ತೆಗೆದುಕೊಳ್ಳುವ ಮಂಡಳಿಯಾಗಿದೆ. ಇದರಲ್ಲಿ ಹೆಚ್ಚಿನವರು ಟ್ರಂಪ್ ಆಪ್ತರಷ್ಟೆ ಇದ್ದಾರೆ.

ದಾವೋಸ್‌ಗೆ ನಿಯೋಗ

ಪ್ರಜಾವಾಣಿ ವಾರ್ತೆ



ಎಂ.ಬಿ. ಪಾಟೀಲ

ಬೆಂಗಳೂರು: ದಾವೋಸ್–ಕ್ಲೋಸ್ಟರ್ಸ್‌ನಲ್ಲಿ ಇದೇ 19ರಿಂದ 23ರವರೆಗೆ ನಡೆಯಲಿರುವ ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ವಾರ್ಷಿಕ ಸಮಾವೇಶದಲ್ಲಿ ಭಾಗಿಯಾಗಲು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರ ನೇತೃತ್ವದ ನಿಯೋಗವು ಸ್ವಿಟ್ಜರ್ಲೆಂಡ್‌ಗೆ ಹೊರಟಿದೆ.

ಸಮಾವೇಶದ ಭಾಗವಾಗಿ ರಾಜ್ಯದ ನಿಯೋಗವು 45ಕ್ಕೂ ಹೆಚ್ಚು ದ್ವಿಪಕ್ಷೀಯ ಸಭೆ, ದುಂಡುಮೇಜಿನ ಸಭೆಗಳಲ್ಲಿ ಭಾಗಿಯಾಗಲಿದೆ. ಅಮೆಜಾನ್ ವೆಬ್ ಸರ್ವೀಸಸ್, ಲೆನೊವೊ, ವಾಸ್ಟ್ ಸ್ಪೇಸ್, ಕೋಕಾ-ಕೋಲಾ, ಫಿಲಿಪ್ ಮಾರಿಸ್, ಇಂಪೀರಿಯಲ್ ಕಾಲೇಜ್ ಲಂಡನ್, ಸಿಂಗಪುರ ಆರ್ಥಿಕ ಅಭಿವೃದ್ಧಿ ಮಂಡಳಿ ಜತೆಗೆ ರಾಜ್ಯದ ನಿಯೋಗದ ಸಭೆ ನಿಗದಿಯಾಗಿದೆ.

‘ಹೂಡಿಕೆ ಸಂಬಂಧ ಹೂಡಿಕೆದಾರರು ತ್ವರಿತವಾಗಿ ನಿರ್ಧಾರಕ್ಕೆ ಬರುವುದಕ್ಕೆ ನೆರವಾಗಲು, ಯೋಜನೆಗಳನ್ನು ಶೀಘ್ರವಾಗಿ ಕಾರ್ಯಾರಂಭ ಮಾಡಲು ಉತ್ತೇಜನ ನೀಡುವ ಗುರಿಯನ್ನು ಹೊಂದಲಾಗಿದೆ. ತಯಾರಿಕೆ, ನವೀಕರಿಸಬಹುದಾದ ಇಂಧನ ಮೂಲಗಳು, ಎಲೆಕ್ಟ್ರಾನಿಕ್ಸ್, ದತ್ತಾಂಶ ಕೇಂದ್ರ, ಜಾಗತಿಕ ಸಾಮರ್ಥ್ಯ ಕೇಂದ್ರ (ಜಿಸಿಸಿ) ಸ್ಥಾಪನೆ ಸಂಬಂಧ ಜಾಗತಿಕ ಮಟ್ಟದ ಹೂಡಿಕೆದಾರರ ಜತೆ ಮಾತುಕತೆ ನಡೆಸಲಾಗುವುದು’ ಎಂದು ಎಂ.ಬಿ.ಪಾಟೀಲರು ಹೇಳಿದ್ದಾರೆ.

ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಬಿಡಿಎ ಆಯುಕ್ತ ಮಣಿವಣ್ಣನ್, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ ಅವರು ನಿಯೋಗದಲ್ಲಿ ಇದ್ದಾರೆ.

64 ದೇಶಗಳ ಮುಖ್ಯಸ್ಥರು ಸೇರಿ 3,000 ಗಣ್ಯರು ಭಾಗಿ

ಇಂದಿನಿಂದ ‘ಡಬ್ಲ್ಯುಇಎಫ್’ ಸಭೆ



ದಾವೋಸ್ (ಪಿಟಿಐ): ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ಸೋಮವಾರದಿಂದ ಐದು ದಿನ ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ವಾರ್ಷಿಕ ಸಭೆ ನಡೆಯಲಿದ್ದು, ಜಾಗತಿಕ ಗಣ್ಯರೊಂದಿಗೆ ಚರ್ಚಿಸಲು ಭಾರತವು ಪ್ರಬಲ ಪ್ರಾತಿನಿಧ್ಯದ ಜತೆ ಸಜ್ಜಾಗಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ವಿವಿಧ ದೇಶಗಳ ಸರ್ಕಾರಗಳ ಪ್ರತಿನಿಧಿಗಳು, ಶೈಕ್ಷಣಿಕ, ಬಹುಪಕ್ಷೀಯ ಸಂಸ್ಥೆಗಳ, ನಾಗರಿಕ ಸಮಾಜ ಮತ್ತು ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಸೇರಿದಂತೆ 3,000ಕ್ಕೂ ಹೆಚ್ಚು ಗಣ್ಯರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಐವರು ಸಂಪುಟ ಸದಸ್ಯರೊಂದಿಗೆ ಟ್ರಂಪ್ ಹಾಜರಾಗಲಿರುವುದು ವಿಶೇಷ.

ಜಿ–7 ರಾಷ್ಟ್ರಗಳ ಪೈಕಿ ಆರು ದೇಶಗಳ ಉನ್ನತ ನಾಯಕರು ಸೇರಿದಂತೆ 64 ದೇಶಗಳ ಅಥವಾ ಸರ್ಕಾರದ ಮುಖ್ಯಸ್ಥರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಭಾರತ, ಚೀನಾ ಮತ್ತು ಪಾಕಿಸ್ತಾನ ಸಹ ದೊಡ್ಡ ನಿಯೋಗಗಳೊಂದಿಗೆ ದಾವೋಸ್‌ನ ಸಭೆಗಳಲ್ಲಿ ಭಾಗವಹಿಸಲಿವೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸಹ ಪಾಲ್ಗೊಳ್ಳಲಿದ್ದಾರೆ.

ಐದು ದಿನಗಳ ವಾರ್ಷಿಕ ಸಭೆಯಲ್ಲಿ ಉಕ್ರೇನ್, ಗಾಜಾ, ವೆನೆಜುವೆಲಾ, ಲ್ಯಾಟಿನ್ ಅಮೆರಿಕ ವಿಷಯಗಳ ಕುರಿತು ಕೂಲಂಕಷವಾಗಿ ಪರಿಶೀಲಿಸಲಾಗುತ್ತದೆ ಎಂದು ಡಬ್ಲ್ಯುಇಎಫ್ ಅಧ್ಯಕ್ಷ ಮತ್ತು ಸಿಇಒ ಬೋರ್ಜ್ ಬ್ರೆಂಡೆ ಆನ್‌ಲೈನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

1945ರ ಬಳಿಕ ಜಗತ್ತು ಅತ್ಯಂತ ಸಂಕೀರ್ಣ ಭೌಗೋಳಿಕ ರಾಜಕೀಯ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಈ ಅನಿಶ್ಚಿತ ಸಮಯದಲ್ಲಿ ಜಗತ್ತಿನ ನಾಯಕರ ನಡುವೆ ಸೌಹಾರ್ದ ರೀತಿಯಲ್ಲಿ ಸಂವಾದ ನಡೆಯಬೇಕಾದ ತುರ್ತು ಇದೆ ಎಂದು ಬ್ರೆಂಡೆ ಪ್ರತಿಪಾದಿಸಿದರು.

ಈ ವರ್ಷ 130ಕ್ಕೂ ಹೆಚ್ಚು ದೇಶಗಳಿಂದ ‘ಬ್ಯುಸಿನೆಸ್’ ಕ್ಷೇತ್ರದ 1,700ಕ್ಕೂ ಹೆಚ್ಚು ನಾಯಕರು ಪಾಲ್ಗೊಳ್ಳಲಿದ್ದಾರೆ. 30ಕ್ಕೂ ಹೆಚ್ಚು ವಿದೇಶಾಂಗ ಸಚಿವರು, 60ಕ್ಕೂ ಹೆಚ್ಚು ಆರ್ಥಿಕ ಸಚಿವರು, ಕೇಂದ್ರ ಬ್ಯಾಂಕ್‌ಗಳ ಗವರ್ನರ್‌ಗಳು ಭಾಗವಹಿಸಲಿದ್ದಾರೆ ಎಂದರು.

ಭಾರತದ ತಂಡದಲ್ಲಿ 100ಕ್ಕೂ ಹೆಚ್ಚು ಪ್ರತಿನಿಧಿಗಳು

ಭಾರತದಿಂದ ಕನಿಷ್ಠ ನಾಲ್ವರು ಕೇಂದ್ರ ಸಚಿವರು, ಆರು ರಾಜ್ಯಗಳ ಮುಖ್ಯಮಂತ್ರಿಗಳು, ವಿವಿಧ ಕಂಪನಿಗಳ ಮುಖ್ಯಸ್ಥರು, ಸಿಇಒಗಳು ಸೇರಿ 100ಕ್ಕೂ ಹೆಚ್ಚು ಪ್ರತಿನಿಧಿಗಳ ನಿಯೋಗ ಸಭೆಯಲ್ಲಿ ಪಾಲ್ಗೊಳ್ಳಲಿದೆ.

ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್, ಶಿವರಾಜ್ ಸಿಂಗ್ ಚೌಹಾಣ್, ಪ್ರಹ್ಲಾದ್ ಜೋಶಿ, ಕೆ. ರಾಮಮೋಹನ್ ನಾಯ್ಡು, ಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ (ಮಹಾರಾಷ್ಟ್ರ), ಎನ್.ಚಂದ್ರಬಾಬು ನಾಯ್ಡು (ಆಂಧ್ರ ಪ್ರದೇಶ), ಹಿಮಂತ ಬಿಸ್ವ ಶರ್ಮಾ (ಅಸ್ಸಾಂ), ಮೋಹನ್ ಯಾದವ್ (ಮಧ್ಯ ಪ್ರದೇಶ), ಎ. ರೇವಂತ ರೆಡ್ಡಿ (ತೆಲಂಗಾಣ), ಹೇಮಂತ್ ಸೊರೇನ್ (ಜಾರ್ಖಂಡ್) ಭಾಗವಹಿಸಲಿದ್ದಾರೆ.

‘ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆ ಆಗಬಹುದೇ’ ಎಂಬ ವಿಷಯ ಸೇರಿದಂತೆ ಹಲವು ಸಂವಾದಗಳಲ್ಲಿ ಭಾರತದ ನಾಯಕರು ಭಾಗವಹಿಸುವ ನಿರೀಕ್ಷೆಯಿದೆ.

‘ಗ್ರಾಮಾಯಣ’ಕ್ಕೆ ಶಿವರಾಜ್‌ಕುಮಾರ್ ಸಾಥ್



ವಿನಯ್ ರಾಜ್‌ಕುಮಾರ್, ಶಿವರಾಜ್‌ಕುಮಾರ್, ಮೇಘಾ ಶೆಟ್ಟಿ

ವಿನಯ್ ರಾಜ್‌ಕುಮಾರ್, ಮೇಘಾ ಶೆಟ್ಟಿ ಜೋಡಿಯಾಗಿ ನಟಿಸಿರುವ ‘ಗ್ರಾಮಾಯಣ’ ಚಿತ್ರದ ‘ಬೆಂಕಿ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಇದರೊಂದಿಗೆ ಬಹಳ ಕಾಲದಿಂದ ಅಪ್‌ಡೇಟ್ ಇಲ್ಲದೆ ನಿಂತಿದ್ದ ಚಿತ್ರಕ್ಕೆ ಮರುಜೀವ ಸಿಕ್ಕಿದೆ. ದೇವನೂರು ಚಂದ್ರು ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಶಿವರಾಜ್‌ಕುಮಾರ್ ಹಾಡು ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಜತೆಗೆ ಚಿತ್ರತಂಡ-ದೊಂದಿಗೆ ಹಾಡಿಗೆ ಹೆಜ್ಜೆಯನ್ನೂ ಹಾಕಿದರು. ಶಿವರಾಜ್‌ಕುಮಾರ್ ಹಾಗೂ ಸುಧಾರಾಣಿ ನಟನೆಯಲ್ಲಿ ಮೂಡಿಬಂದಿದ್ದ ‘ಮನ ಮೆಚ್ಚಿದ ಹುಡುಗಿ’ ಸಿನಿಮಾದ ‘ನಿನ್ನಾಣೆ ನಾನು ಬೆಂಕಿಯಲ್ಲಿ ತಪ್ಪು ಕಂಡೆನು’ ಹಾಡನ್ನು ಇಲ್ಲಿ ರಿಮೇಕ್ ಮಾಡಲಾಗಿದೆ. ಈ ಹಾಡನ್ನು ಕಪಿಲ್ ಕಪಿಲನ್, ಐರಾ ಉಡುಪಿ ಹಾಡಿದ್ದಾರೆ. ಚಿ ಉದಯಶಂಕರ್ ಸಾಹಿತ್ಯ, ಉಪೇಂದ್ರ ಕುಮಾರ್ ಮೂಲ ಸಂಗೀತದ ಈ ಗೀತೆಯನ್ನು ಪೂರ್ಣಚಂದ್ರ ತೇಜಸ್ವಿ ಮರುಸಂಯೋಜಿಸಿದ್ದಾರೆ.

ಲಹರಿ ಫಿಲ್ಮ್ಸ್ ಚಿತ್ರಕ್ಕೆ ಬಂಡವಾಳ ಹೂಡಿದೆ. ಅಚ್ಯುತ್ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಅರುಣ್ ಸಾಗರ್, ಸೀತಾ ಕೋಟೆ, ಶ್ರೀನಿವಾಸ ಪ್ರಭು, ಮಂಜುನಾಥ್ ಹೆಗಡೆ ಮುಂತಾದವರು ಚಿತ್ರದಲ್ಲಿದ್ದಾರೆ. ಸಂತೋಷ್ ರೈ ಪಾತಾಜೆ ಛಾಯಾ-ಚಿತ್ರಗ್ರಹಣ, ದೀಪು ಎಸ್. ಕುಮಾರ್ ಸಂಕಲನವಿದೆ.

‘ಲಂಬೋದರ 2.0’ ಎಂದ ಸುನಿ



ಅನಿಲ್ ಶೆಟ್ಟಿ, ಸಾಚಿ ಬಿಂದ್ರಾ

ನಿರ್ದೇಶಕ ಸಿಂಪಲ್ ಸುನಿ ಬಳಿ ಸಾಲು, ಸಾಲು ಸಿನಿಮಾಗಳಿವೆ. ಅವುಗಳ ನಡುವೆ ಅವರು ‘ಲಂಬೋದರ 2.0’ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಇತ್ತೀಚೆಗಷ್ಟೇ ಚಿತ್ರದ ಮುಹೂರ್ತ ಸಮಾರಂಭ ನಡೆಯಿತು.

‘ಈ ಬಾರಿ ಎಐ ಆಧಾರಿತ ಸಾಮಾಜಿಕ, ಥ್ರಿಲ್ಲರ್ ಕಥಾಹಂದರದ ಚಿತ್ರವನ್ನು ಶುರು ಮಾಡುತ್ತಿದ್ದೇನೆ. ಜತೆಗೆ ಈ ಚಿತ್ರದಿಂದ ಇಬ್ಬರು ಹೊಸ ಕಲಾವಿದರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದೇವೆ. ನಾಯಕನಾಗಿ ಅನಿಲ್ ಶೆಟ್ಟಿ, ನಾಯಕಿಯಾಗಿ ಸಾಚಿ ಬಿಂದ್ರಾ ನಟಿಸಲಿದ್ದಾರೆ. ಅನಿಲ್ ಶೆಟ್ಟಿ ಕೇವಲ ನಟ ಮಾತ್ರ ಅಲ್ಲ, ಈ ಚಿತ್ರದ ಲೇಖಕ ಕೂಡ. ಅವರದ್ದೇ ನಿರ್ಮಾಣ ಸಂಸ್ಥೆ ಮಾಸ್ ಪ್ರೊಡಕ್ಷನ್ ಈ ಚಿತ್ರವನ್ನು ನಿರ್ಮಿಸುತ್ತಿದೆ. ಸದ್ಯ ಚಿತ್ರ ಪ್ರೀಪ್ರೊಡಕ್ಷನ್ ಹಂತದಲ್ಲಿದೆ’ ಎಂದು ಸುನಿ ಹೇಳಿದ್ದಾರೆ.

ಸಾಚಿ ಬಿಂದ್ರಾ ಈಗಾಗಲೇ ಬಾಲಿವುಡ್ ಚಿತ್ರವೊಂದರಲ್ಲಿ ನಟಿಸಿದ್ದು, ಇದೇ ಮೊದಲ ಬಾರಿಗೆ ಕನ್ನಡದಲ್ಲಿ ನಟಿಸುತ್ತಿದ್ದಾರೆ. ಜೆನ್‌ಜಿಗಳಿಗೆ ಬೇಕಾದ, ಹಾಸ್ಯಮಯ ಕಥಾಹಂದರವನ್ನು ಈ ಚಿತ್ರ ಹೊಂದಿದೆ

ಚಿತ್ರಕ್ಕೆ ವೀರ್ ಸಮರ್ಥ್ ಸಂಗೀತ, ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣವಿದೆ.

ಜ.30ಕ್ಕೆ ವಿಕಲ್ಪ ತೆರೆಗೆ



ಇಂದಿರಾ ಶಿವಸ್ವಾಮಿ, ನಾಗಶ್ರೀ ಹೆಬ್ಬಾರ್, ಜಯತೀರ್ಥ, ಪೃಥ್ವಿರಾಜ್ ಪಾಟೀಲ್

ಬಹುತೇಕ ಹೊಸಬರಿಂದಲೇ ಕೂಡಿರುವ ‘ವಿಕಲ್ಪ’ ಚಿತ್ರ ಜ.30ಕ್ಕೆ ತೆರೆಗೆ ಬರಲಿದೆ. ಇತ್ತೀಚೆಗಷ್ಟೇ ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದೆ. ಸೈಕಾಲಜಿಕಲ್, ಥ್ರಿಲ್ಲರ್ ಕಥಾಹಂದರದ ಚಿತ್ರಕ್ಕೆ ಪೃಥ್ವಿರಾಜ್ ಪಾಟೀಲ್ ಆ್ಯಕ್ಷನ್ ಕಟ್ ಹೇಳುವುದರ ಜತೆಗೆ ನಾಯಕನಾಗಿ ನಟಿಸಿದ್ದಾರೆ.

ನಿರ್ದೇಶಕ ಜಯತೀರ್ಥ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ, ‘ಕನ್ನಡ ಚಿತ್ರರಂಗಕ್ಕೆ ಹೊಸಪ್ರತಿಭೆಗಳು ಬರುತ್ತಿರುವುದು ನಿಜಕ್ಕೂ ಖುಷಿಯ ವಿಷಯ. ಹೊಸಬರ ಮೂಲಕ ಹೊಸ ಹೊಸ ಕಲ್ಪನೆ, ಆಲೋಚನೆಗಳು ಸಿನಿಮಾವಾಗಿ ತೆರೆಮೇಲೆ ಅನಾವರಣವಾಗುತ್ತದೆ. ಹೊಸಬರು ಯಾವಾಗಲೂ ಚಿತ್ರರಂಗದ ಜೀವಂತಿಕೆಯನ್ನು ಹಿಡಿದಿಡುತ್ತಾರೆ. ಈ ಸಿನಿಮಾದ ಕಥಾಹಂದರ, ಮೇಕಿಂಗ್, ಟೀಸರ್, ಹಾಡುಗಳು ಎಲ್ಲವೂ ಚಿತ್ರದ ಬಗ್ಗೆ ಒಂದಷ್ಟು ಭರವಸೆ ಮೂಡಿಸುವಂತಿದೆ. ಚಿತ್ರ ಬಿಡುಗಡೆಯಾಗಿ ಯಶಸ್ವಿಯಾಗಲಿ’ ಎಂದು ಹಾರೈಸಿದರು.

ಪೋಸ್ಟ್ ಟ್ರಾಮಾಟಿಕ್ ಸ್ಟ್ರೆಸ್ ಡಿಸಾರ್ಡರ್(ಪಿಟಿಎಸ್‌ಡಿ) ಎಂಬ ಮಾನಸಿಕ ವ್ಯಾಧಿಯ ಎಳೆಯನ್ನು ಆಧರಿಸಿದ ಕಥೆ ಎಂದು ಚಿತ್ರತಂಡ ಹೇಳಿದೆ. ಇಂದಿರಾ ಶಿವಸ್ವಾಮಿ ಬಂಡವಾಳ ಹೂಡಿದ್ದಾರೆ. ನಾಗಶ್ರೀ ಹೆಬ್ಬಾರ್, ಹರಿಣಿ ಶ್ರೀಕಾಂತ್, ಸಂಧ್ಯಾ ವಿನಾಯಕ್, ಗಣಪತಿ ವಡ್ಡಿನಗದ್ದೆ ಮುಂತಾದವರು ಚಿತ್ರದಲ್ಲಿದ್ದಾರೆ. ಚಿತ್ರಕ್ಕೆ ಸಂವತ್ಸರ ಸಂಗೀತ, ಅಭಿರಾಮ್ ಗೌಡ ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಸಂಕಲನವಿದೆ.

‘ಆತ್ಮಾಹುತಿ ಬಾಂಬರ್’ಗಿಂತ ಬದುಕೇ ಮುಖ್ಯವಾಯ್ತು

ಡಾ.ಉಮರ್ ಆಹ್ವಾನ ತಿರಸ್ಕರಿಸುವಂತೆ ಮಾಡಿದ ಸೇಬು ಕೊಯ್ಲು ಸುಗ್ಗಿ



ಶ್ರೀನಗರ(ಪಿಟಿಐ): ದೆಹಲಿಯ ಕೆಂಪು ಕೋಟೆ ಬಳಿ ಕಾರು ಸ್ಫೋಟದ ಸೂತ್ರಧಾರ ಡಾ.ಉಮರ್ ಉನ್ ನಬಿ ಆ ಯುವಕನನ್ನು ಎರಡನೇ ‘ಆತ್ಮಾಹುತಿ ಬಾಂಬರ್’ ಆಗಿ ನೇಮಕ ಮಾಡಿಕೊಳ್ಳಲು ಯತ್ನಿಸಿದ್ದ. ಯುವಕನೂ ಒಲವು ವ್ಯಕ್ತ ಪಡಿಸಿದ್ದ. ಕಣಿವೆಯಲ್ಲಿ ಆಗ ಆರಂಭವಾಗಿದ್ದ ಸೇಬು ಹಣ್ಣುಗಳ ಕೊಯ್ಲು ಸುಗ್ಗಿ ಹಾಗೂ ಮನೆ ದುರಸ್ತಿ ಕಾರಣ ನೀಡಿದ ಯುವಕ, ಡಾ.ಉಮರ್ ನೀಡಿದ್ದ ಆಹ್ವಾನವನ್ನು ತಿರಸ್ಕರಿಸಿದ್ದ.

ಡಾ.ಉಮರ್ ಅಂದುಕೊಂಡಂತೆ ಎಲ್ಲವೂ ನಡೆದಿದ್ದರೆ ಆ ಯುವಕ ಎರಡನೇ ‘ಆತ್ಮಾಹುತಿ ಬಾಂಬರ್’ ಆಗಿರುತ್ತಿದ್ದ.

ಕೆಂಪು ಕೋಟೆ ಬಳಿ ಕಾರು ಸ್ಫೋಟಗೊಂಡ ಪ್ರಕರಣ ಕುರಿತು ತನಿಖೆ ಕೈಗೊಂಡಿರುವ ಶ್ರೀನಗರ ಪೊಲೀಸರು ಹಾಗೂ ರಾಷ್ಟ್ರೀಯ ತನಿಖಾ ದಳ(ಎನ್‌ಐಎ) ಅಧಿಕಾರಿಗಳು, ಶೋಪಿಯಾನ್ ನಿವಾಸಿ ಯಾಸಿರ್ ಅಹ್ಮದ್ ಡಾರ್ ಎಂಬಾತನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದಾಗ ಈ ಮಾಹಿತಿ ಹೊರಬಿದ್ದಿದೆ.

ಈ ವಿದ್ಯಮಾನವು ಒಂದೆಡೆ, ಕಾಶ್ಮೀರ ಕಣಿವೆಯಲ್ಲಿ ಯುವಕರನ್ನು ನೇಮಕ ಮಾಡಿಕೊಳ್ಳುವುದಕ್ಕೆ-ಭಯೋತ್ಪಾದಕ ಸಂಘಟನೆಗಳು ಹುಡುಕಿಕೊಂಡಿರುವ ಹೊಸ ಮಾರ್ಗವನ್ನು ತೋರಿಸಿದರೆ, ಮತ್ತೊಂದೆಡೆ ಇಂತಹ ಚಟುವಟಿಕೆ-ಗಳಲ್ಲಿ ತೊಡಗುವುದಕ್ಕಿಂತ ಬದುಕು ಕಟ್ಟಿಕೊಳ್ಳಲು ಕೆಲ ಯುವಕರು ಮುಖ ಮಾಡುತ್ತಿರುವುದನ್ನು ವಿವರಿಸುತ್ತದೆ.

ಕಳೆದ ನವೆಂಬರ್ 10ರಂದು ಕೆಂಪು ಕೋಟೆ ಬಳಿ ಕಾರು ಸ್ಫೋಟಗೊಂಡಿತ್ತು. ಕಾರು ಚಲಾಯಿಸುತ್ತಿದ್ದ ಡಾ.ಉಮರ್ ನಬಿ ಹಾಗೂ ಇತರ 12 ಮಂದಿ ಮೃತಪಟ್ಟಿದ್ದರು.

‘ಡಾ.ಉಮರ್ ನಬಿ, ಭಯೋತ್ಪಾದಕ ಕೃತ್ಯ ನಡೆಸುವುದಕ್ಕಾಗಿ ಯಾಸಿರ್ ಅಹ್ಮದ್‌ನನ್ನು ಎರಡನೇ ಆತ್ಮಾಹುತಿ ಬಾಂಬರ್‌ನನ್ನಾಗಿ ನೇಮಕ ಮಾಡಿಕೊಳ್ಳಲು ಯತ್ನಿಸಿದ್ದ. ಆದರೆ, ಸೇಬು ಹಣ್ಣುಗಳ ಕೊಯ್ಲು ಆರಂಭವಾಗಿದ್ದರಿಂದ ಉಮರ್ ಯೋಜನೆ ಕೈಗೂಡಲಿಲ್ಲ’ ಎಂದು ಎನ್‌ಐಎ ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

‘ಯಾಸಿರ್ ಡಾರ್ 2023ರಿಂದಲೂ ಉಮರ್ ಜೊತೆ ಸಂಪರ್ಕ ಹೊಂದಿದ್ದ. ಉಮರ್ ಸ್ವತಃ ವೈದ್ಯನೂ ಆಗಿದ್ದ ಕಾರಣ ಯಾಸಿರ್ ಮೇಲೆ ಪ್ರಭಾವ ಬೀರಲು, ಆತನನ್ನು ಮೂಲಭೂತವಾದಿಯನ್ನಾಗಿ ಮಾಡುವುದು ಕಷ್ಟವೆನಿಸಲಿಲ್ಲ’ ಎಂದು ಹೇಳಿದ್ದಾರೆ.

ಪ್ರಮುಖ ಅಂಶಗಳು

- ಉಗ್ರಸಂಘಟನೆ ಘಟಕವು ‘ಆತ್ಮಾಹುತಿ ಬಾಂಬರ್’ ಯೋಜನೆ ಕಾರ್ಯಗತಗೊಳಿಸಲು ಸಂಚು ರೂಪಿಸಿದ್ದನ್ನು ಹಿರಿಯ ಎಸ್‌ಪಿ ಡಾ.ಜಿ.ವಿ.ಸಂದೀಪ್ ಚಕ್ರವರ್ತಿ ಭೇದಿಸಿದ್ದರು
- ವಿವಿಧ ರಾಜ್ಯಗಳಲ್ಲಿನ ಉಗ್ರ ಜಾಲ ಹಾಗೂ ಜೈಷ್-ಎ-ಮೊಹಮ್ಮದ್ ಸಂಘಟನೆಯ ನಡುವಿನ ನಂಟನ್ನು ತನಿಖೆಯು ಬಹಿರಂಗ-ಪಡಿಸಿತ್ತು
- ಟೆಲಿಗ್ರಾಮ್ ಆ್ಯಪ್ ಮೂಲಕ ಡಾ.ಉಮರ್ ಜೊತೆ ಯಾಸಿರ್ ಸಂಪರ್ಕದಲ್ಲಿದ್ದ

‘ಉಮರ್ ನಬಿ ಭಯೋತ್ಪಾದಕ ಮಾತ್ರವಲ್ಲ, ಯುವಕರನ್ನು ಸುಲಭವಾಗಿ ಮನವೊಲಿಸಿ ಅವರನ್ನು ಉಗ್ರ ಸಂಘಟನೆಗೆ ನೇಮಕ ಮಾಡಿಕೊಳ್ಳಬಲ್ಲ ಚತುರನೂ ಆಗಿದ್ದ. ಆತ್ಮಾಹುತಿ ಬಾಂಬರ್ ಆಗಿ ಕೆಲಸ ಮಾಡುವುದಕ್ಕೆ ಯುವಕರನ್ನು ನೇಮಕ ಮಾಡಿಕೊಳ್ಳಲು ವಿವಿಧ ಹಂತದ ಘಟಕಗಳನ್ನು ಸ್ಥಾಪಿಸಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ವಿಧ್ವಂಸಕ ಕೃತ್ಯ ಎಸಗಲು ಉಗ್ರ ಸಂಘಟನೆಯ ಘಟಕವು ಸಕ್ರಿಯವಾಗಿ-ರುವುದನ್ನು ಶ್ರೀನಗರ ಪೊಲೀಸರು ಕಳೆದ ವರ್ಷ ಪತ್ತೆ ಮಾಡಿ, ತನಿಖೆ ಕೈಗೊಂಡ ಬಳಿಕ ಜಸಿಯರ್ ಅಲಿಯಾಸ್ ಡ್ಯಾನಿಶ್ ಎಂಬಾತನನ್ನು ಕಾಜಿಗುಂಡದಲ್ಲಿ ಬಂಧಿಸಿದ್ದರು.

‘ಜಸಿಯರ್‌ನನ್ನು ಕೂಡ ಉಮರ್ ನೇಮಕ ಮಾಡಿಕೊಂಡಿದ್ದ. ಜೈಷ್-ಎ-ಮೊಹಮ್ಮದ್ ಸಂಘಟನೆಗೆ ಸ್ಥಳೀಯವಾಗಿ ನೆರವಾಗುವಂತೆ ಆತನಿಗೆ ಸೂಚಿಸಿ-ದ್ದನಲ್ಲದೇ, ಆತ್ಮಾಹುತಿ ಬಾಂಬರ್ ಆಗುವಂತೆಯೂ ಮನವೊಲಿಸಿದ್ದ. ತನ್ನ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ ಹಾಗೂ ಆತ್ಮಹತ್ಯೆ ಇಸ್ಲಾಮ್‌ನಲ್ಲಿ ನಿಷಿದ್ಧ ಎಂಬ ಕಾರಣ ನೀಡಿದ್ದ ಜಸಿಯರ್ ಆತ್ಮಾಹುತಿ ಬಾಂಬರ್ ಆಗುವುದಕ್ಕೆ ಒಪ್ಪಿರಲಿಲ್ಲ’ ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಹೇಳಿಕೆಗಳ ವಿವಾದಕ್ಕೆ ಸ್ಪಷ್ಟನೆ ನೀಡಿದ ಎ. ಆರ್. ರೆಹಮಾನ್

ಭಾರತ ದೇಶ ನನ್ನ ಮನೆ, ನನ್ನ ಗುರು



ರೆಹಮಾನ್

ನವದೆಹಲಿ (ಪಿಟಿಐ): ಖ್ಯಾತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಅವರು ಬಾಲಿವುಡ್‌ನಲ್ಲಿ ಕೋಮುವಾದದ ಕುರಿತು ನೀಡಿದ್ದ ಹೇಳಿಕೆಗೆ ಸ್ಪಷ್ಟನೆ ನೀಡಿದ್ದಾರೆ. ಈ ಕುರಿತ ವಿಡಿಯೊವೊಂದನ್ನು ಭಾನುವಾರ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

‘ಯಾರಿಗೂ ನೋವುಂಟು ಮಾಡುವುದು ನನ್ನ ಉದ್ದೇಶವಾಗಿರಲಿಲ್ಲ’ ಎಂದು ಹೇಳಿರುವ ಅವರು, ಕೆಲವೊಮ್ಮೆ ಮಾತು, ಅದರಲ್ಲಿರುವ ಉದ್ದೇಶಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗುತ್ತದೆ’ ಎಂದು ವಿಡಿಯೊದಲ್ಲಿ ಹೇಳಿದ್ದಾರೆ.

'ಭಾರತ ದೇಶ ನನ್ನ ಮನೆ, ಸ್ಫೂರ್ತಿ ಮತ್ತು ನನ್ನ ಗುರು. ಭಾರತದ ಸಂಸ್ಕೃತಿಯನ್ನು ಆಚರಿಸಲು ಮತ್ತು ಗೌರವಿಸಲು ನನಗೆ ಸಂಗೀತ ಒಂದು ಮಾರ್ಗವಾಗಿದೆ’ ಎಂದು ತಮಗಿರುವ ದೇಶದ ಬಗೆಗಿನ ಪ್ರೀತಿಯನ್ನು ರೆಹಮಾನ್ ವಿವರಿಸಿದ್ದಾರೆ.

‘ನನಗನ್ನಿಸುತ್ತದೆ, ಕೆಲವೊಮ್ಮೆ ಹೇಳಿಕೆ ಗಳನ್ನು ತಪ್ಪಾಗಿ ಅರ್ಥೈಸಿ ಕೊಳ್ಳಲಾಗುತ್ತಿದೆ. ಆದರೆ, ನಾನು ಯಾರಿಗೂ ನೋವುಂಟು ಮಾಡಲು ಬಯಸಿಲ್ಲ. ನನ್ನ ಉದ್ದೇಶ, ಸಂಗೀತದ ಮೂಲಕ ಉನ್ನತಿ, ಗೌರವ ಮತ್ತು ಸೇವೆ ನೀಡುವುದಾಗಿದೆ. ಈವರೆಗೂ ನಾನು ಪ್ರಾಮಾಣಿಕವಾಗಿಯೇ ಕೆಲಸ ಮಾಡಿದ್ದೇನೆ ಎಂಬುದು ನನ್ನ ಭಾವನೆ’ ಎಂದು ಸ್ಪಷ್ಟಪಡಿಸಿದ್ದಾರೆ.

ಇತ್ತೀಚೆಗೆ ರೆಹಮಾನ್ ಅವರು, ಬಿಬಿಸಿ, ಏಷ್ಯನ್ ನೆಟ್‌ವರ್ಕ್‌ಗೆ ನೀಡಿದ ಸಂದರ್ಶನದಲ್ಲಿ ‘ಕಳೆದ ಕೆಲವು ವರ್ಷಗಳಿಂದ ಹಿಂದಿ ಚಿತ್ರೋದ್ಯಮದಲ್ಲಿ ಅಧಿಕಾರ ಬದಲಾವಣೆಯಿಂದಾಗಿ ಕೆಲಸ ಕಡಿಮೆಯಾಗಿದೆ ಮತ್ತು ಅದು ಕೋಮುವಾದದ ಕಾರಣಕ್ಕೂ ಆಗಿರಬಹುದು’ ಎಂದು ಹೇಳಿದ್ದರು.

‘ಚಿತ್ರರಂಗದಲ್ಲಿ ಸೃಜನಶೀಲರಲ್ಲದ ಜನರು ಈಗ ಕೆಲವು ವಿಷಯಗಳನ್ನು ನಿರ್ಧರಿಸುವ ಶಕ್ತಿ ಹೊಂದಿದ್ದಾರೆ. ಅದು ಕೋಮುವಾದದ ವಿಷಯವೂ ಆಗಿರಬಹುದು. ನನ್ನ ದೃಷ್ಟಿಯಲ್ಲಿ ಅಲ್ಲ’ ಎಂದು ಹೇಳಿದ್ದರು.ಈ ಹೇಳಿಕೆಗೆ ಟೀಕೆಗಳು ವ್ಯಕ್ತವಾಗಿದ್ದವು.

ಉಗ್ರರಿಗೆ ಹಣ: ‘ಕ್ರಿಪ್ಟೊ ಹವಾಲಾ’ ಸಕ್ರಿಯ

ಪ್ರತ್ಯೇಕತಾವಾದಿಗಳಿಗೆ ಮರುಜೀವ ನೀಡಿದ ಹೊಸ ಮಾರ್ಗ

ಶ್ರೀನಗರ/ನವದೆಹಲಿ (ಪಿಟಿಐ): ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗೆ ಹಣ ಒದಗಿಸುವುದಕ್ಕಾಗಿ ಅತ್ಯಾಧುನಿಕ ‘ಕ್ರಿಪ್ಟೊ ಹವಾಲಾ’ ಜಾಲ ಸಕ್ರಿಯವಾಗಿವೆ. ಈ ಜಾಲದ ಮೂಲಕ ವಿದೇಶಗಳಿಂದ ಹಣ ಹರಿದು ಬರುತ್ತಿದೆ ಎಂಬ ಆತಂಕಕಾರಿ ಮಾಹಿತಿ ಹೊರಬಿದ್ದಿದೆ.

ದೇಶದಲ್ಲಿ ನಡೆಯುವ ಹಣಕಾಸು ವಹಿವಾಟು ಮೇಲೆ ಕಣ್ಗಾವಲಿರಿಸಲು ಹಲವು ನಿಯಮಗಳು–ತಂತ್ರಜ್ಞಾನ ಆಧಾರಿತ ವಿಧಾನಗಳು ಇವೆ. ಆದರೆ, ‘ಕ್ರಿಪ್ಟೊ ಹವಾಲಾ’ ಜಾಲವನ್ನು ಪತ್ತೆ ಮಾಡುವುದು ಸದ್ಯ ಜಾರಿಯಲ್ಲಿರುವ ವಿಧಾನಗಳಿಂದ ಕಷ್ಟವಾಗುತ್ತಿದೆ ಎಂದು ಕೇಂದ್ರೀಯ ಸಂಸ್ಥೆಗಳು ಭಾನುವಾರ ಎಚ್ಚರಿಸಿವೆ.

‘ಈ ಅಕ್ರಮ ಮಾರ್ಗದ ಮೂಲಕ ಸಿಗುತ್ತಿರುವ ಹಣವು ಜಮ್ಮು–ಕಾಶ್ಮೀರದಲ್ಲಿನ ಪ್ರತ್ಯೇಕತಾವಾದಿಗಳಿಗೆ ಮತ್ತೆ ಜೀವ ನೀಡಿದಂತಾಗಿದೆ ಹಾಗೂ ದೇಶ ವಿರೋಧಿ ಕೃತ್ಯಗಳಿಗೆ ಪ್ರಚೋದನೆ ನೀಡುತ್ತಿದೆ’ ಎಂದು ಜಮ್ಮು–ಕಾಶ್ಮೀರ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

‘ಡಿಜಿಟಲ್ ರೂಪದಲ್ಲಿರುವ ಕ್ರಿಪ್ಟೊ ಕರೆನ್ಸಿಗಳನ್ನು ಬಳಸಲಾಗುತ್ತದೆ. ಕ್ರಿಪ್ಟೊಕರೆನ್ಸಿಗಳನ್ನು ನಿಯಂತ್ರಿಸುವ ವ್ಯವಸ್ಥೆ ನಮ್ಮಲ್ಲಿ ಇಲ್ಲದ ಕಾರಣ ಹಣದ ವಹಿವಾಟನ್ನು ಪತ್ತೆ ಮಾಡುವುದು ಕಷ್ಟ’ ಎಂದು ವಿವರಿಸಿದ್ದಾರೆ.

ತನಿಖೆ ಹೇಳುವುದೇನು?

- ಚೀನಾ, ಮಲೇಷ್ಯಾ, ಮ್ಯಾನ್ಮಾರ್ ಹಾಗೂ ಕಾಂಬೋಡಿಯಾದಲ್ಲಿರುವ ಕೆಲವರು ಖಾಸಗಿ ಕ್ರಿಪ್ಟೊ ವ್ಯಾಲೆಟ್ ತೆರೆಯುವಂತೆ ಜಮ್ಮು–ಕಾಶ್ಮೀರದ ವ್ಯಕ್ತಿಗೆ ಸೂಚಿಸುತ್ತಾರೆ
- ವಿಪಿಎನ್ ಬಳಸಿ ಇಂತಹ ವ್ಯಾಲೆಟ್ ತೆರೆಯಲಾಗುತ್ತದೆ. ಹೀಗಾಗಿ, ಕೆವೈಸಿ ಅಥವಾ ಗುರುತು ದೃಢೀಕರಣದ ಅಗತ್ಯ ಕಂಡು ಬರುವುದಿಲ್ಲ
- ವಿದೇಶಗಳಲ್ಲಿರುವವರು ಈ ಖಾಸಗಿ ವ್ಯಾಲೆಟ್‌ಗಳಿಗೆ ಕ್ರಿಪ್ಟೊ ಕರೆನ್ಸಿಗಳನ್ನು ಜಮೆ ಮಾಡುತ್ತಾರೆ. ವ್ಯಾಲೆಟ್ ಹೊಂದಿರುವ ವ್ಯಕ್ತಿ ದೆಹಲಿ ಅಥವಾ ಮುಂಬೈನಂತಹ ಮಹಾನಗರಗಳಿಗೆ ತೆರಳಿ, ಅಲ್ಲಿರುವ ‘ಪಿಯರ್–ಟು–ಪಿಯರ್’(ಪಿ2ಪಿ) ಟ್ರೇಡರ್‌ಗಳಿಗೆ ಈ ಕ್ರಿಪ್ಟೊಕರೆನ್ಸಿಗಳನ್ನು ಮಾರಾಟ ಮಾಡಿ, ಅದರ ಬದಲಾಗಿ ಹಣವನ್ನು ಪಡೆದುಕೊಳ್ಳುತ್ತಾರೆ
- ಪಿ2ಪಿ ಟ್ರೇಡರ್‌ಗಳ ನಿಯಂತ್ರಣ ವ್ಯವಸ್ಥೆ ಭಾರತದಲ್ಲಿ ಇಲ್ಲ. ಹಾಗಾಗಿ, ಈ ಮಾರ್ಗದ ಮೂಲಕ ದೇಶದ ಒಳಗೆ ಹರಿದು ಬರುವ ಹಣವನ್ನು ಪತ್ತೆ ಮಾಡಲು ಸಾಧ್ಯ-ವಾಗುವುದಿಲ್ಲ

‘ಕಕ್ಷಿದಾರರ ಪ್ರಕರಣಗಳಿಗೆ ವಕೀಲರೇ ಆರ್‌ಟಿಐ ಅಡಿ ಮಾಹಿತಿ ಕೇಳುವಂತಿಲ್ಲ’

ನವದೆಹಲಿ (ಪಿಟಿಐ): ‘ಕಕ್ಷಿದಾರರ ಪ್ರಕರಣಗಳಿಗೆ ಸಂಬಂಧಿಸಿದಂತೆ ವಕೀಲರು ಮಾಹಿತಿ ಹಕ್ಕು ಆಯೋಗದ (ಆರ್‌ಟಿಐ) ಅಡಿಯಲ್ಲಿ ಮಾಹಿತಿ ಕೋರುವಂತಿಲ್ಲ. ಪಾರದರ್ಶಕತೆ ಕಾನೂನನ್ನು ಈ ರೀತಿ ಬಳಸುವುದರಿಂದ, ಅದರ ಮೂಲ ಉದ್ದೇಶವೇ ವಿಫಲವಾ-ಗುತ್ತದೆ’ ಎಂದು ಕೇಂದ್ರ ಮಾಹಿತಿ ಆಯೋಗವು (ಸಿಐಸಿ) ತಿಳಿಸಿದೆ.

ಹರಿಯಾಣದ ಜವಾಹರ್ ನವೋದಯ ವಿದ್ಯಾಲಯಕ್ಕೆ ಹಣ್ಣು ಹಾಗೂ ತರಕಾರಿ ಪೂರೈಕೆ ಗುತ್ತಿಗೆ ರದ್ದತಿ ಕುರಿತು ಉಂಟಾದ ವಿವಾದಕ್ಕೆ ಸಂಬಂಧಿಸಿದಂತೆ ವಕೀಲರು ಸಲ್ಲಿಸಿದ ಎರಡನೇ ಮೇಲ್ಮನವಿಯನ್ನು ವಜಾಗೊಳಿಸಿ ಸಿಐಸಿ ಆಯುಕ್ತ ಸುಧಾ ರಾಣಿ ರೆಲಂಗಿ ಅವರು ಈ ಆದೇಶ ನೀಡಿದ್ದಾರೆ.

ಪ್ರತಿವಾದಿಯು ಸಾರ್ವಜನಿಕ ಪ್ರಾಧಿಕಾರಕ್ಕೆ ತರಕಾರಿ ಹಾಗೂ ಹಣ್ಣು ಪೂರೈಸುತ್ತಿದ್ದ ಅವರ ಸಹೋದರನ ಪರವಾಗಿ ಮಾಹಿತಿ ಕೋರಿದ್ದರು. ಪೂರೈಕೆದಾರರೇ, ಯಾವ ಕಾರಣಕ್ಕಾಗಿ ಮಾಹಿತಿ ಕೋರಿರಲಿಲ್ಲ ಎಂಬುದರ ಕುರಿತು ಅರ್ಜಿದಾರರು ಸರಿಯಾದ ವಿವರಣೆ ನೀಡಿಲ್ಲ. ಮೇಲ್ಮನವಿದಾರರು ತನ್ನ ಕಕ್ಷಿದಾರರ ಪರವಾಗಿ ಮಾಹಿತಿ ಕೋರಿದ್ದು, ಅದಕ್ಕೆ ಕಾನೂನು ಅನುಮತಿ ನೀಡುವುದಿಲ್ಲ’ ಎಂದು ತೀರ್ಪಿನಲ್ಲಿ ತಿಳಿಸಿದ್ದಾರೆ.

‘ವಕೀಲರಾಗಿ ಕೆಲಸ ಮಾಡು-ತ್ತಿರುವವರು ತಮ್ಮ ಕಕ್ಷಿದಾರರ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಆರ್‌ಟಿಐನಡಿ ಕೋರುವಂತಿಲ್ಲ’ ಮದ್ರಾಸ್ ಹೈಕೋರ್ಟ್ ತೀರ್ಪು ಇದೇ ವೇಳೆ ಅವರು ಉಲ್ಲೇಖಿಸಿದ್ದಾರೆ.

‘ಮಹಾ ಜಂಗಲ್ ರಾಜ್ ಕೊನೆಗಾಣಿಸಿ’

ದೇಶದ ಭದ್ರತೆಗೆ ಟಿಎಂಸಿಯಿಂದ ಧಕ್ಕೆ: ಮೋದಿ ಕಿಡಿ



ನರೇಂದ್ರ ಮೋದಿ

ಸಿಂಗೂರ್(ಪಶ್ಚಿಮ ಬಂಗಾಳ) (ಪಿಟಿಐ): ‘ಮತ ಬ್ಯಾಂಕ್ ರಾಜಕೀಯಕ್ಕಾಗಿ ನುಸುಳುಕೋರರನ್ನು ರಕ್ಷಿಸುವ ಮೂಲಕ ಸರ್ಕಾರ ದೇಶದ ಭದ್ರತೆಗೆ ಧಕ್ಕೆ ತರುತ್ತಿರುವ ಟಿಎಂಸಿ ಸರ್ಕಾರದ ‘ಮಹಾ ಜಂಗಲ್ ರಾಜ್’ ಆಡಳಿತವನ್ನು ಕೊನೆಗಳಿಸಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು.

ಹೂಗ್ಲಿ ಜಿಲ್ಲೆಯ ಸಿಂಗೂರಿನಲ್ಲಿ ಆಯೋಜಿಸಿದ್ದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಮರುಸ್ಥಾಪಿಸಬೇಕು. ನಕಲಿ ದಾಖಲೆಗಳನ್ನು ಬಳಸಿಕೊಂಡು ರಾಜ್ಯದಲ್ಲಿ ನೆಲೆಸಿರುವ ನುಸುಳುಕೋರ-ರನ್ನು ಗುರುತಿಸಿ ವಾಪಸ್ ಕಳುಹಿಸಬೇಕು’ ಎಂದು ಅವರು ಹೇಳಿದರು.

ಮುಂಬರುವ ವಿಧಾನಸಭಾ ಚುನಾವಣೆಯು ‘ಮಹಾ-ಜಂಗಲ್ ರಾಜ್ ಮತ್ತು ಉತ್ತಮ ಆಡಳಿತ’ದ ನಡುವಿನ ಸ್ಪರ್ಧೆ ಎಂದು ವಿಶ್ಲೇಷಿಸಿದ ಅವರು, ಈ ಚುನಾವಣೆಯಲ್ಲಿ ಬಿಜೆಪಿಗೆ ಅಧಿಕಾರ ನೀಡುವ ಮೂಲಕ ‘ಡಬಲ್-ಎಂಜಿನ್ ಸರ್ಕಾರ’ದ ಮಾದರಿ ಬೆಂಬಲಿಸುವಂತೆ ಮನವಿ ಮಾಡಿದರು.

‘ಒಳನುಸುಳುಕೋರರನ್ನು ತಮ್ಮ ಮತ ಬ್ಯಾಂಕ್ ಎಂದು ಪರಿಗಣಿಸುವ ಟಿಎಂಸಿ, ಅವರನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ. ಈ ಮೂಲಕ ರಾಷ್ಟ್ರೀಯ ಭದ್ರತೆಗೆ ಧಕ್ಕೆ ಉಂಟು ಮಾಡುತ್ತಿದೆ. ಬಂಗಾಳದ ಗಡಿಗಳಲ್ಲಿ, ರಾಜ್ಯ ಸರ್ಕಾರದ ರಕ್ಷಣೆಯಲ್ಲೇ ಅಕ್ರಮ ವಲಸಿಗರು ಅಭಿವೃದ್ಧಿ ಹೊಂದಲು ಅವಕಾಶ ನೀಡಲಾಗಿದೆ’ ಎಂದು ಅವರು ಆರೋಪ ಮಾಡಿದರು.

‘ಒಳನುಸುಳುವಿಕೆಯನ್ನು ತಡೆಯಲು ಮತ್ತು ನಕಲಿ ದಾಖಲೆಗಳೊಂದಿಗೆ ನುಸುಳಿದವರನ್ನೂ ಗುರುತಿಸಿ ವಾಪಸ್ ಕಳುಹಿಸಲು ಇದು ಸಕಾಲವಾಗಿದೆ. ಬಿಜೆಪಿ ಸರ್ಕಾರ ಆ ಕೆಲಸ ಮಾಡುತ್ತದೆ’ ಎಂದು ಪ್ರಧಾನಿ ಹೇಳಿದರು.

‘ಗಡಿಯಲ್ಲಿ ನಿರ್ಣಾಯಕ ಭದ್ರತಾ ಕ್ರಮಗಳನ್ನು ಅಳವಡಿಸುವುದಕ್ಕೆ ಟಿಎಂಸಿ ಸರ್ಕಾರ ಅಡ್ಡಿಪಡಿಸುತ್ತಿದೆ ಎಂದು ಆರೋಪಿಸಿದ ಮೋದಿ, ಹಲವಾರು ವರ್ಷಗಳಿಂದ ಕೇಂದ್ರ ಸರ್ಕಾರ ಬೇಲಿ ಹಾಕುವುದಕ್ಕೆ ಭೂಮಿ ನೀಡುವಂತೆ ಕೋರಿ ರಾಜ್ಯ ಸರ್ಕಾರಕ್ಕೆ ಪತ್ರವನ್ನು ಬರೆದಿದೆ. ಆದರೆ ಏನೂ ಪ್ರಯೋಜ-ನವಾಗಿಲ್ಲ’ ಎಂದು ಟಿಎಂಸಿ ಸರ್ಕಾರದ ವಿರುದ್ಧ ದೂರಿದರು.

‘ನುಸುಳು ಕೋರರಿಗೆ ಕಾಂಗ್ರೆಸ್ ಅವಕಾಶ’

ಕಾಲಿಯಾಬೊರ್(ಪಿಟಿಐ): ‘ಈಶಾನ್ಯ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಚುನಾವಣೆ ಸಮಯದಲ್ಲಿ ಮತ ಪಡೆಯುವುದಕ್ಕಾಗಿ ಅಸ್ಸಾಂನ ಭೂಮಿಯನ್ನು ನುಸುಳುಕೋರರಿಗೆ ಬಿಟ್ಟುಕೊಟ್ಟಿತ್ತು’ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಚುನಾವಣೆ ನಡೆಯಲಿರುವ ಅಸ್ಸಾಂಗೆ ಭೇಟಿ ನೀಡಿದ ನರೇಂದ್ರ ಮೋದಿ ಅವರು ಇಲ್ಲಿ ಆಯೋಜಿಸಿದ್ದ ರ‍್ಯಾಲಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ನಡೆಸುತ್ತಿದ್ದಾಗ ಒಳನುಸುಳುವಿಕೆ ಹೆಚ್ಚುತ್ತಿತ್ತು. ಅಕ್ರಮ ವಲಸಿಗರು, ಕಾಡುಪ್ರಾಣಿಗಳ ಕಾರಿಡಾರ್‌ಗಳು ಮತ್ತು ಸಾಂಪ್ರದಾಯಿಕ ಸಂಸ್ಥೆಗಳನ್ನು ಅತಿಕ್ರಮಿಸಿಕೊಳ್ಳುವ ಪ್ರಮಾಣವೂ ಹೆಚ್ಚಾಗಿತ್ತು’ ಎಂದು ಪ್ರಧಾನಿ ದೂರಿದರು.

ಚಿಟಿಕೆ ಸುದ್ದಿ

4.52 ಕೋಟಿಗೂ ಅಧಿಕ ಭಕ್ತರಿಂದ ಪುಣ್ಯಸ್ನಾನ

ಪ್ರಯಾಗರಾಜ್ (ಪಿಟಿಐ): ಮಾಘಮೇಳದ ಅಂಗವಾಗಿ ಮೌನಿ ಅಮಾವಾಸ್ಯೆ ದಿನವಾದ ಭಾನುವಾರ ತ್ರಿವೇಣಿ ಸಂಗಮದಲ್ಲಿ 4.52 ಕೋಟಿಗೂ ಅಧಿಕ ಭಕ್ತರು ಪುಣ್ಯಸ್ನಾನ ಮಾಡಿದರು.

ಮಧ್ಯರಾತ್ರಿಯಿಂದಲೇ ಭಕ್ತರ ದಂಡು ಗಂಗಾ ಮತ್ತು ಸಂಗಮ ಘಾಟ್ ಕಡೆಗೆ ಹರಿದುಬಂದಿತ್ತು. ದಟ್ಟಮಂಜಿನ ನಡುವೆಯೂ ಭಕ್ತರು ತೀರ್ಥಸ್ನಾನ ಮಾಡಿದರು.

ಭಕ್ತ ಸಮೂಹದ ಮೇಲೆ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮಾಡಲಾಯಿತು.

ಗೊಂದಲ: ಅಪಾರ ಬೆಂಬಲಿಗರೊಂದಿಗೆ ತೀರ್ಥಸ್ನಾನಕ್ಕೆ ಆಗಮಿಸಿದ ಜೋತಿರ್‌ಪೀಠದ ಶಂಕರಾಚಾರ್ಯ ಸ್ವಾಮಿ ಅವಿಮುಕ್ತೇಶ್ವರಾನಂದ ಸ್ವಾಮೀಜಿ ಅವರನ್ನು ಪೊಲೀಸರು ತಡೆದ ಕಾರಣ, ಕೆಲ ಸಮಯ ಗೊಂದಲ ಉಂಟಾಯಿತು.

ಈ ಕುರಿತ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು, ‘ಸ್ವಾಮೀಜಿಯವರಿಗೆ ಅಗೌರವ ತೋರಿರುವ ಬಗ್ಗೆ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು

ಜೋಸೆಫೈಟ್ ರನ್



ಬೆಂಗಳೂರಿನ ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲೆಯ ಆಶ್ರಯದಲ್ಲಿ ಭಾನುವಾರ ಬೆಳಿಗ್ಗೆ ನಡೆದ ‘ಜೋಸೆಫೈಟ್ ರನ್ -2026’ ಓಟದಲ್ಲಿ ವಿದ್ಯಾರ್ಥಿಗಳು, ಪೋಷಕರು, ಹಿರಿಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು

ಅರ್ಜುನ್‌ಗೆ ಮಣಿದ ಪ್ರಜ್ಞಾನಂದ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್): ಅಗ್ರ ಶ್ರೇಯಾಂಕ ಪಡೆದಿರುವ ಭಾರತದ ಆಟಗಾರ ಅರ್ಜುನ್ ಇರಿಗೇಶಿ ಅವರು ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಸ್ವದೇಶದ ಆರ್.ಪ್ರಜ್ಞಾನಂದ ಅವರನ್ನು 32 ನಡೆಗಳಲ್ಲಿ ಮಣಿಸಿದರು.

ವಿಶ್ವ ಚಾಂಪಿಯನ್ ಡಿ.ಗುಕೇಶ್ ಇನ್ನೊಂದು ಪಂದ್ಯದಲ್ಲಿ ವಿಶ್ವಕಪ್ ವಿಜೇತ ಜಾವೊಖಿರ್ ಸಿಂದರೋವ್ ಅವರ ಜೊತೆ 78 ನಡೆಗಳ ನಂತರ ಡ್ರಾ ಮಾಡಿಕೊಂಡರು. ಪರಿಸರ ಹೋರಾಟಗಾರರ ಪ್ರತಿಭಟನೆಯಿಂದಾಗಿ, ವಿಶ್ವದ ಅತಿ ಹಳೆಯ ಈ ಟೂರ್ನಿಯ ಮೊದಲ ಸುತ್ತು ಶನಿವಾರ ಐದು ಗಂಟೆಗಳಷ್ಟು ತಡವಾಗಿ ಆರಂಭವಾಯಿತು.

ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಹ್ಯಾನ್ಸ್ ನೀಮನ್ ಅವರು ಸ್ಲೊವೇನಿಯಾದ ವ್ಲಾದಿಮಿರ್ ಫೆಡೊಸೀವ್ ಜೊತೆ ಡ್ರಾ ಮಾಡಿಕೊಂಡರು. ಪ್ರಮುಖ ಪಡೆಯೊಂದನ್ನು ಕಳೆದುಕೊಳ್ಳುವುದು ಖಚಿತವಾದ ಕಾರಣ 16ನೇ ನಡೆಯಲ್ಲೇ ಫೆಡೊಸೀವ್ ಪಂದ್ಯ ಬಿಟ್ಟುಕೊಟ್ಟರು. ಜರ್ಮನಿಯ ವಿನ್ಸೆಂಟ್ ಕೀಮರ್, ಡಚ್ ಆಟಗಾರ ಅನಿಶ್ ಗಿರಿ ಅವರನ್ನು ಸೋಲಿಸಿದರು. ಅರವಿಂದ ಚಿದಂಬರಂ ಅವರು ಜರ್ಮನಿಯ ಮಥಾಯಸ್ ಬ್ಲೂಬಾಮ್ ಜೊತೆ ಅಂಕ ಹಂಚಿಕೊಂಡರು.

ಸಾಹಿತ್ಯ ಪ್ರಶಸ್ತಿಯಲ್ಲೂ ರಾಜಕೀಯ ಹಸ್ತಕ್ಷೇಪ ಕಳವಳಕಾರಿ: ತಮಿಳುನಾಡು ಮುಖ್ಯಮಂತ್ರಿ ಟೀಕೆ

ಶಾಸ್ತ್ರೀಯ ಭಾಷಾ ಸಾಹಿತ್ಯ ಪ್ರಶಸ್ತಿ ಘೋಷಿಸಿದ ಸ್ಟಾಲಿನ್

• ಮಂಜುಶ್ರೀ ಎಂ.ಕಡಕೋಳ



ಭಾನುವಾರ ಮುಕ್ತಾಯಗೊಂಡ ಚೆನ್ನೈ ಅಂತರರಾಷ್ಟ್ರೀಯ ಪುಸ್ತಕ ಮೇಳ–2026ರಲ್ಲಿ ತಮಿಳಿನಿಂದ ವಿವಿಧ ಭಾಷೆಗಳಿಗೆ ಅನುವಾದಗೊಂಡ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಶಾಲಾ ಶಿಕ್ಷಣ ಸಚಿವ ಡಾ.ಅನ್ಬಿಲ್ ಮಹೇಶ್ ಪೊಯ್ಯಮೊಳಿ, ಬುಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್, ತಮಿಳು ಲೇಖಕ ಇಮ್ಮೆಯಂ ಉಪಸ್ಥಿತರಿದ್ದರು

ಚೆನ್ನೈ: ಕೇಂದ್ರ ಸಾಹಿತ್ಯ ಅಕಾಡೆಮಿಯ 2025ನೇ ಸಾಲಿನ ಪ್ರಶಸ್ತಿ ಘೋಷಣೆಯ ವಿಳಂಬ ನೀತಿಯನ್ನು ಕಟುವಾಗಿ ಟೀಕಿಸಿದ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು, ಇನ್ನು ಮುಂದೆ ತಮಿಳುನಾಡು ಸರ್ಕಾರವೇ ರಾಷ್ಟ್ರ ಮಟ್ಟದ ಅತ್ಯುತ್ತಮ ಸಾಹಿತ್ಯ ಕೃತಿಗೆ ₹5 ಲಕ್ಷ ಮೊತ್ತದ ‘ಶಾಸ್ತ್ರೀಯ ಭಾಷಾ ಸಾಹಿತ್ಯ ಪ್ರಶಸ್ತಿ’ ನೀಡುವುದಾಗಿ ಘೋಷಿಸಿದರು.

ಇಲ್ಲಿನ ಕಲೈವಾನರ್ ಅರಂಗಂನಲ್ಲಿ ಭಾನುವಾರ ನಡೆದ ಚೆನ್ನೈ ಅಂತರ ರಾಷ್ಟ್ರೀಯ ಪುಸ್ತಕಮೇಳದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ಕೇಂದ್ರ ಸಾಹಿತ್ಯ ಅಕಾಡೆಮಿಯು 2025ರ ಪ್ರಶಸ್ತಿಗಳನ್ನು ಅಂತಿಮಗೊಳಿಸಿ, ಘೋಷಿಸಬೇಕಿತ್ತು. ಆದರೆ, ಕೇಂದ್ರ ಸಂಸ್ಕೃತಿ ಸಚಿವಾಲಯದ ಹಸ್ತಕ್ಷೇಪದಿಂದ ಪ್ರಶಸ್ತಿ ಘೋಷಣೆಗೆ ತಡೆಯೊಡ್ಡಲಾಗಿದೆ. ಇನ್ನು ಮುಂದೆ ಅದು ನಡೆಯುತ್ತದೆಯೋ ಇಲ್ಲವೋ ಎಂಬುದೂ ತಿಳಿದಿಲ್ಲ. ಕಲೆ ಮತ್ತು ಸಾಹಿತ್ಯದ ಪ್ರಶಸ್ತಿಗಳಲ್ಲಿಯೂ ರಾಜಕೀಯ ಹಸ್ತಕ್ಷೇಪ ಮಾಡುವುದು ಅತ್ಯಂತ ಅಪಾಯಕಾರಿ’ ಎಂದು ಅವರು ತೀವ್ರ ಕಳವಳ ವ್ಯಕ್ತಪಡಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಧೋರಣೆ ಖಂಡಿಸಿದ ಸ್ಟಾಲಿನ್, ‘ತಮಿಳುನಾಡು ಸರ್ಕಾರವೇ ಇನ್ನು ಮುಂದೆ ಪ್ರತಿವರ್ಷ ‘ಸೆಮ್ಮೊಳಿ ಸಾಹಿತ್ಯ ಪ್ರಶಸ್ತಿ’ (ಶಾಸ್ತ್ರೀಯ ಭಾಷಾ ಸಾಹಿತ್ಯ ಪ್ರಶಸ್ತಿ) ನೀಡಲಿದೆ. ಕನ್ನಡ, ತಮಿಳು,ತೆಲುಗು, ಮಲಯಾಳ, ಒಡಿಯಾ, ಮರಾಠಿ ಮತ್ತು ಬಂಗಾಳಿ ಭಾಷೆಯ ಅತ್ಯುತ್ತಮ ಕೃತಿಗಳಿಗೆ ಈ ಗೌರವ ಸಂದಾಯವಾಗಲಿದೆ’ ಎಂದರು.

ಪ್ರಶಸ್ತಿಯ ಗುಣಮಟ್ಟ ಮತ್ತು ಆಯ್ಕೆ ಪ್ರಕ್ರಿಯೆಯ ಪಾರದರ್ಶಕತೆಗಾಗಿ ಆಯ್ಕೆ ಸಮಿತಿಯನ್ನು ರಚಿಸಲಾಗುವುದು. ಪ್ರಶಸ್ತಿ ವಿಚಾರದಲ್ಲಿ ಯಾವುದೇ ಕಾರಣಕ್ಕೂ ತಮಿಳುನಾಡು ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಹೇಳುವ ಮೂಲಕ ಕೇಂದ್ರಕ್ಕೆ ತಿರುಗೇಟು ನೀಡಿದರು.

‘ಮುಂದಿನ ಚುನಾವಣೆಯಲ್ಲೂ ದ್ರಾವಿಡ ಮಾದರಿಯ ಆಡಳಿತವೇ ಬರಲಿದೆ. ಆಗ ನಾವು ಇದಕ್ಕಿಂತಲೂ ದೊಡ್ಡಮಟ್ಟದ ಅಂತರಾಷ್ಟ್ರೀಯ ಪುಸ್ತಕ ಮೇಳವನ್ನು ವಿಶ್ವದ ಗಮನ ಸೆಳೆಯುವಂತೆ ಆಯೋಜಿಸುತ್ತೇವೆ. ತಮಿಳುನಾಡಿನಾದ್ಯಂತ ಇನ್ನೂ ಅನೇಕ ಬೃಹತ್ ಗ್ರಂಥಾಲಯಗಳನ್ನು ಜ್ಞಾನ ದೇಗುಲಗಳನ್ನಾಗಿ ನಿರ್ಮಿಸುತ್ತೇವೆ‘ ಎಂದು ಅವರು ತಿಳಿಸಿದರು.

ಪುಸ್ತಕಮೇಳದ ಕೊನೆಯ ದಿನ ತಮಿಳುನಾಡು ಶಾಲಾ ಶಿಕ್ಷಣ ಸಚಿವ ಡಾ.ಅನ್ಬಿಲ್ ಮಹೇಶ್ ಪೊಯ್ಯಮೊಳಿ ಅವರು ವಿವಿಧ ದೇಶಗಳ ಪ್ರಕಾಶಕರ ಬಳಿಗೆ ತೆರಳಿ ಮೇಳದ ಬಗ್ಗೆ ಪ್ರತಿಕ್ರಿಯೆ ಪಡೆದರು. ಬಳಿಕ ಪ್ರಕಾಶಕರೊಂದಿಗೆ ಸಂವಾದ ನಡೆಸಿದರು.

ನಿಜ ಸಾಹಿತ್ಯ ಪ್ರಭುತ್ವಕ್ಕೆ ಮಣಿಯದು

ಸಮಾರೋಪದಲ್ಲಿ ಮಾತನಾಡಿದ ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ಬಾನು ಮುಷ್ತಾಕ್, ‘ನಿಜವಾದ ಸಾಹಿತ್ಯವು ಅಧಿಕಾರಕ್ಕೆ ಮಣಿಯುವುದಿಲ್ಲ, ಬದಲಾಗಿ ಅದನ್ನು ಪ್ರಶ್ನಿಸುತ್ತದೆ. ಅನ್ಯಾಯವನ್ನು ಹೋಗಲಾಡಿಸಿ ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ. ಲೇಖಕರು ಕೇವಲ ಬರಹಗಾರರಲ್ಲ, ಸಮಾಜದ ನೈತಿಕತೆಯ ಸಾಕ್ಷಿದಾರರು’ ಎಂದರು.

‘ಬುಕರ್ ಪ್ರಶಸ್ತಿಯ ಅಂತಿಮಪಟ್ಟಿಯಲ್ಲಿ ತಮಿಳು ಲೇಖಕ ಪೆರುಮಾಳ್ ಮುರುಗನ್ ಅವರ ಕೃತಿಯೂ ಇತ್ತು. ಕನ್ನಡಕ್ಕೆ ಬುಕರ್ ದೊರೆತಿರುವುದು ವೈಯಕ್ತಿಕ ಸಾಧನೆಯಲ್ಲ. ಬದಲಾಗಿ ಅದು ದ್ರಾವಿಡ ಸಾಹಿತ್ಯ ಶಕ್ತಿಗೆ ದೊರೆತ ಜಾಗತಿಕ ಮನ್ನಣೆಯಾಗಿದೆ’ ಎಂದು ವಿಶ್ಲೇಷಿಸಿದರು.

‘ಅನುವಾದಕರು ನೇಪಥ್ಯದಲ್ಲಿ ಇರಬೇಕಿಲ್ಲ’



ದೀಪಾ ಭಾಸ್ತಿ

‘ದ ಇನ್‌ವಿಸಿಬಲ್ ಹ್ಯಾಂಡ್’ ಗೋಷ್ಠಿಯಲ್ಲಿ ಮಾತನಾಡಿದ ಬುಕರ್ ಪ್ರಶಸ್ತಿ ಪುರಸ್ಕೃತ ಅನುವಾದಕಿ ದೀಪಾ ಭಾಸ್ತಿ, ‘ಮೂಲ ಸಾಹಿತ್ಯದಿಂದ ಅನುವಾದ ಮಾಡಿದ ಪ್ರತಿ ಪದವೂ ಅನುವಾದಕರದ್ದೇ ಆಗಿರುತ್ತದೆ. ಹಾಗಾಗಿ,ಅನುವಾದಕರು ನೇಪಥ್ಯದಲ್ಲಿರಬೇಕಿಲ್ಲ’ ಎಂದರು. ಅನುವಾದಕರಾದ ಕವಿತಾ ಮುರಳೀಧರನ್, ಶುಭಶ್ರೀ ದೇಸಿಕನ್ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಖ್ಯಾತ ಲಿಟರರಿ ಏಜೆಂಟ್ ಕನಿಷ್ಕ ಗುಪ್ತಾ ಗೋಷ್ಠಿಯನ್ನು ನಿರ್ವಹಿಸಿದರು.

ಕಿವೀಸ್ ಪಡೆಗೆ ಸರಣಿ ಕಿರೀಟ

ವಿರಾಟ್ ಕೊಹ್ಲಿ ಶತಕ • ಮಿಚೆಲ್–ಗ್ಲೆನ್ ದ್ವಿಶತಕದ ಜೊತೆಯಾಟ • ಶುಭಮನ್ ಗಿಲ್ ಬಳಗಕ್ಕೆ ಆಘಾತ

ಇಂದೋರ್ (ಪಿಟಿಐ): ಭಾನುವಾರ ರಾತ್ರಿ ವಿರಾಟ್ ಕೊಹ್ಲಿ ಛಲದ ಶತಕ ಮತ್ತು ಹರ್ಷಿತ್ ರಾಣಾ ಅವರ ಸ್ಫೋಟಕ ಅರ್ಧಶತಕ ಮಾತ್ರ ಭಾರತದ ಅಭಿಮಾನಿಗಳ ನೆನಪಿನ ಪುಟದಲ್ಲಿ ಸೇರಿದವು. ಆದರೆ ನ್ಯೂಜಿಲೆಂಡ್ ತಂಡವು 38 ವರ್ಷಗಳ ನಂತರ ಭಾರತದಲ್ಲಿ ಏಕದಿನ ಕ್ರಿಕೆಟ್ ಸರಣಿ ಜಯಿಸಿತು.

ಹೋಳ್ಕರ್ ಮೈದಾನದಲ್ಲಿ ನಡೆದ ಸರಣಿಯ ಮೂರನೇ ಮತ್ತು ಕೊನೆಯ ಪಂದ್ಯದಲ್ಲಿ ಕಿವೀಸ್ ಬಳಗವು 41 ರನ್‌ಗಳಿಂದ ಗೆದ್ದಿತು. 2–1ರಿಂದ ಸರಣಿ ಕಿರೀಟ ಧರಿಸಿತು.

338 ರನ್‌ಗಳ ಕಠಿಣ ಗುರಿಯನ್ನು ಬೆನ್ನಟ್ಟಿದ್ದ ಭಾರತ ತಂಡಕ್ಕೆ 46 ಓವರ್‌ಗಳಲ್ಲಿ 296 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ವಿರಾಟ್ 108 ಎಸೆತಗಳಲ್ಲಿ 124 ರನ್ ಗಳಿಸಿದರು. ಸಮಚಿತ್ತ ಮತ್ತು ಸಂದರ್ಭಕ್ಕೆ ತಕ್ಕ ಆಕ್ರಮಣಶೀಲ ಆಟವು ಅವರ ಇನಿಂಗ್ಸ್‌ನಲ್ಲಿ ಮೇಳೈಸಿತ್ತು. ಚೇಸ್ ಮಾಸ್ಟರ್ ಖ್ಯಾತಿಗೆ ತಕ್ಕ ಆಟವಾಡಿದರು. ಆದರೆ ನಿತೀಶ್ ಕುಮಾರ್ ರೆಡ್ಡಿ (53; 57ಎ, 4X2, 6X2) ಮತ್ತು ಹರ್ಷಿತ್ ರಾಣಾ (52; 43ಎ, 4X4, 6X4) ಅವರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳಿಂದ ಕೊಹ್ಲಿಗೆ ಬೆಂಬಲ ಸಿಗಲಿಲ್ಲ.

ಆರಂಭಿಕ ಜೋಡಿ ರೋಹಿತ್ ಶರ್ಮಾ (11 ರನ್) ಮತ್ತು ನಾಯಕ ಶುಭಮನ್ ಗಿಲ್ (23ಎ) ಕೂಡ ತಂಡದ ಮೊತ್ತ 50 ರನ್ ಮುಟ್ಟುವ ಮುನ್ನವೇ ನಿರ್ಗಮಿಸಿದ್ದರು. ಮಧ್ಯಮ ಕ್ರಮಾಂಕದಲ್ಲಿ ಅನುಭವಿ ಕೆ.ಎಲ್. ರಾಹುಲ್, ಶ್ರೇಯಸ್ ಅಯ್ಯರ್, ರವೀಂದ್ರ ಜಡೇಜ ಕೂಡ ಕುಸಿದರು. ಕಿವೀಸ್ ತಂಡದ ಝ್ಯಾಕ್ರಿ ಫೌಲ್ಕೆಸ್ (77ಕ್ಕೆ3) ಹಾಗೂ ಕ್ರಿಸ್ಟನ್ ಕ್ಲರ್ಕ್ (54ಕ್ಕೆ3) ಶಿಸ್ತಿನ ದಾಳಿ ನಡೆಸಿದರು.

ಮಿಚೆಲ್ –ಗ್ಲೆನ್ ಶತಕದಾಟ: ಸರಣಿಯಲ್ಲಿ ಸತತ ಎರಡನೇ ಶತಕ ಬಾರಿಸಿದ ಡ್ಯಾರಿಲ್ ಮಿಚೆಲ್ (137; 131ಎ, 4X15, 6X3) ಮತ್ತು ಅಬ್ಬರದ ಬ್ಯಾಟಿಂಗ್ ಮಾಡಿದ ಗ್ಲೆನ್ ಫಿಲಿಪ್ಸ್ (106; 88ಎ, 4X9, 6X3) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 219 ರನ್ ಸೇರಿಸಿದರು. ತಂಡವು ಬೃಹತ್ ಮೊತ್ತ ಗಳಿಸಲು ಕಾರಣರಾದರು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಎಡಗೈ ವೇಗಿ ಅರ್ಷದೀಪ್ ಸಿಂಗ್ ಮೊದಲ ಓವರ್‌ನಲ್ಲಿಯೇ ಹೆನ್ರಿ ನಿಕೊಲ್ಸ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಹೆನ್ರಿ ಬರಿಗೈಯಲ್ಲಿ ಮರಳಿದರು. ನಂತರದ ಓವರ್‌ನಲ್ಲಿ ಹರ್ಷಿತ್ ರಾಣಾ ಎಸೆತದಲ್ಲಿ ರೋಹಿತ್ ಪಡೆದ ಕ್ಯಾಚ್‌ಗೆ ಡೆವೊನ್ ಕಾನ್ವೆ ಕೂಡ ನಿರ್ಗಮಿಸಿದರು.

ಈ ಹಂತದಲ್ಲಿ ವಿಲ್ ಯಂಗ್ (30; 41ಎ) ಮತ್ತು ಮಿಚೆಲ್ ಜೊತೆಗೂಡಿ 53 ರನ್ ಸೇರಿಸಿದರು. ಯಂಗ್ ವಿಕೆಟ್ ಪಡೆದ ಹರ್ಷಿತ್ ಈ ಜೊತೆಯಾಟವನ್ನೂ ಮುರಿದರು.

ಆಗ ಕ್ರೀಸ್‌ಗೆ ಬಂದ ಗ್ಲೆನ್ ಅವರು ಮಿಚೆಲ್ ಜೊತೆಗೂಡಿ ದೊಡ್ಡ ಜೊತೆಯಾಟವಾಡಿದರು. ಆತಿಥೇಯ ಬೌಲರ್‌ಗಳ ಎಲ್ಲ ಪ್ರಯತ್ನಗಳೂ ವಿಫಲವಾದವು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 8ಕ್ಕೆ337 (ವಿಲ್ ಯಂಗ್ 30, ಡ್ಯಾರಿಲ್ ಮಿಚೆಲ್ 137, ಗ್ಲೆನ್ ಫಿಲಿಪ್ಸ್ 106, ಮೈಕೆಲ್ ಬ್ರೇಸ್‌ವೆಲ್ ಔಟಾಗದೇ 28, ಅರ್ಷದೀಪ್ ಸಿಂಗ್ 63ಕ್ಕೆ3, ಹರ್ಷಿತ್ ರಾಣಾ 84ಕ್ಕೆ3) ಭಾರತ: 46 ಓವರ್‌ಗಳಲ್ಲಿ 296 (ಶುಭಮನ್ ಗಿಲ್ 23, ವಿರಾಟ್ ಕೊಹ್ಲಿ 124, ನಿತೀಶ್ ಕುಮಾರ್ ರೆಡ್ಡಿ 53, ಹರ್ಷಿತ್ ರಾಣಾ 52, ಝ್ಯಾಕ್ರಿ ಫೌಲ್ಕೆಸ್ 77ಕ್ಕೆ3, ಕ್ರಿಸ್ಟನ್ ಕ್ಲರ್ಕ್ 54ಕ್ಕೆ3, ಜೇಡನ್ ಲೆನಾಕ್ಸ್ 42ಕ್ಕೆ2) ಫಲಿತಾಂಶ: ನ್ಯೂಜಿಲೆಂಡ್ ತಂಡಕ್ಕೆ 41 ರನ್‌ಗಳ ಜಯ ಹಾಗೂ 2–1ರಿಂದ ಸರಣಿ ಗೆಲುವು.

ಪಂದ್ಯ–ಸರಣಿಯ ಆಟಗಾರ: ಡ್ಯಾರಿಲ್ ಮಿಚೆಲ್.



ನ್ಯೂಜಿಲೆಂಡ್ ತಂಡದ ಗ್ಲೆನ್ ಫಿಲಿಪ್ಸ್ ಮತ್ತು ಡ್ಯಾರಿಲ್ ಮಿಚೆಲ್ ಎಎಫ್‌ಪಿ ಚಿತ್ರ

ನ್ಯೂಜಿಲೆಂಡ್ ವಿರುದ್ಧ ಹೆಚ್ಚು ಶತಕ (ಮೂರೂ ಮಾದರಿ ಸೇರಿ)

ಶತಕ	ಇನಿಂಗ್ಸ್	ಆಟಗಾರ	ದೇಶ
10	73	ವಿರಾಟ್ ಕೊಹ್ಲಿ	ಭಾರತ
9	76	ಜಾಕ್ ಕಾಲಿಸ್	ದಕ್ಷಿಣ ಆಫ್ರಿಕಾ
9	71	ಜೋ ರೂಟ್	ಇಂಗ್ಲೆಂಡ್
9	80	ಸಚಿನ್ ತೆಂಡೂಲ್ಕರ್	ಭಾರತ

352 ರನ್

ನ್ಯೂಜಿಲೆಂಡ್ ತಂಡದ ಡ್ಯಾರಿಲ್ ಮಿಚೆಲ್ ಈ ಸರಣಿಯಲ್ಲಿ ಒಟ್ಟು 352 ರನ್ ಗಳಿಸಿದರು. ಆ ಮೂಲಕ, ಭಾರತ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಅತಿಹೆಚ್ಚು ರನ್ ಹೊಡೆದ ಸಾಧನೆ ಮಾಡಿದರು. ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿಕಾಕ್ ಅವರು ತವರಿನಲ್ಲಿ 2013ರಲ್ಲಿ ನಡೆದ ಸರಣಿಯಲ್ಲಿ 342 ರನ್ ಹೊಡೆದಿದ್ದರು.

85 ಶತಕ

ಭಾರತ ತಂಡದ ವಿರಾಟ್ ಕೊಹ್ಲಿ ಅವರು ಏಕದಿನ ಕ್ರಿಕೆಟ್‌ನಲ್ಲಿ 54ನೇ ಶತಕ ದಾಖಲಿಸಿದರು. ಅಲ್ಲದೆ, ಇದು ಒಟ್ಟಾರೆ ಅವರ 85ನೇ ಅಂತರರಾಷ್ಟ್ರೀಯ ಶತಕವಾಗಿದೆ.

ಅಥರ್ವ ತೈಡೆ ಶತಕ • ಯಶ್ ಠಾಕೂರ್ ಪ್ರಭಾವಿ ದಾಳಿ

ವಿದರ್ಭಕ್ಕೆ ವಿಜಯ್ ಹಜಾರೆ ಟ್ರೋಫಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಥರ್ವ ತೈಡೆ ಅಮೋಘ ಶತಕ ಮತ್ತು ಯಶ್ ಠಾಕೂರ್ ಶಿಸ್ತಿನ ದಾಳಿಯ ಬಲದಿಂದ ವಿದರ್ಭ ತಂಡವು ವಿಜಯ್ ಹಜಾರೆ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಭಾನುವಾರ ನಡೆದ ಟೂರ್ನಿಯ ಫೈನಲ್‌ನಲ್ಲಿ ವಿದರ್ಭ ತಂಡವು 38 ರನ್‌ಗಳಿಂದ ಸೌರಾಷ್ಟ್ರ ಎದುರು ಜಯಭೇರಿ ಬಾರಿಸಿತು. ಇದರೊಂದಿಗೆ ಮೂರನೇ ಸಲ ಚಾಂಪಿಯನ್ ಆಯಿತು. ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವನ್ನು ವಿದರ್ಭ ಸೋಲಿಸಿತ್ತು. ಹೋದ ವರ್ಷದ ಟೂರ್ನಿಯ ಫೈನಲ್‌ನಲ್ಲಿ ವಿದರ್ಭ ಕರ್ನಾಟಕದ ಎದುರು ಸೋತಿತ್ತು.


ಟಾಸ್ ಗೆದ್ದ ಸೌರಾಷ್ಟ್ರ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಥರ್ವ್ (128; 118ಎ, 4X15, 6X3) ಮತ್ತು ಅಮನ್ ಮೊಖಡೆ (33; 45ಎ) ಅವರು ಮೊದಲ ವಿಕೆಟ್‌ಗೆ 80 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಅಮನ್ ಅವರು ಟೂರ್ನಿಯಲ್ಲಿ 800ಕ್ಕೂ ಹೆಚ್ಚು ರನ್ ಗಳಿಸಿದ ಸಾಧನೆ ಮಾಡಿದರು. ಯಶ್ ರಾಥೋಡ್ (54; 61 ಎ) ಅರ್ಧಶತಕ ಗಳಿಸಿದರು. ಇದರಿಂದಾಗಿ ವಿದರ್ಭ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 317 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಸೌರಾಷ್ಟ್ರ ತಂಡದ ಆರಂಭ ಅಷ್ಟೇನೂ ಚೆನ್ನಾಗಿರಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಪ್ರೇರಕ್ ಮಂಕಡ್ (88; 92) ಮತ್ತು ಚಿರಾಗ್ ಜಾನಿ (64; 63ಎ) ಅವರ ಹೋರಾಟವು ತಂಡದ ಗೆಲುವಿಗೆ ಸಾಕಾಗಲಿಲ್ಲ. ವಿದರ್ಭದ ಯಶ್ ಠಾಕೂರ್ (50ಕ್ಕೆ4) ಮತ್ತು ನಚಿಕೇತ್ ಭೂತೆ (46ಕ್ಕೆ3) ಅವರ ಅಮೋಘ ದಾಳಿಯ ಮುಂದೆ ಸೌರಾಷ್ಟ್ರ ಕುಸಿಯಿತು. 48.5 ಓವರ್‌ಗಳಲ್ಲಿ 279 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ವಿದರ್ಭ: 50 ಓವರ್‌ಗಳಲ್ಲಿ 8ಕ್ಕೆ317 (ಅಥರ್ವ್ ತೈಡೆ 128, ಅಮನ್ ಮೊಖಡೆ 33, ಯಶ್ ರಾಥೋಡ್ 54, ಆರ್. ಸಮರ್ಥ್ 25, ಚೇತನ್ ಸಕಾರಿಯಾ 45ಕ್ಕೆ2, ಚಿರಾಗ್ ಜಾನಿ 65ಕ್ಕೆ2, ಅಂಕುರ್ ಪನ್ವರ್ 65ಕ್ಕೆ4) ಸೌರಾಷ್ಟ್ರ: 48.5 ಓವರ್‌ಗಳಲ್ಲಿ 279 (ಹರ್ವಿಕ್ ದೇಸಾಯಿ 20, ಪ್ರೇರಕ್ ಮಂಕಡ್ 88, ಸಮರ್ ಗಜ್ಜರ್ 25, ಚಿರಾಗ್ ಜಾನಿ 64, ರುಚಿತ್ ಅಹಿರ್ 21, ಯಶ್ ಠಾಕೂರ್ 50ಕ್ಕೆ4, ನಚಿಕೇತ್ ಭೂತೆ 46ಕ್ಕೆ3, ದರ್ಶನ ನಾಲ್ಕಂಡೆ 52ಕ್ಕೆ2).

ಫಲಿತಾಂಶ: ವಿದರ್ಭ ತಂಡಕ್ಕೆ 38 ರನ್ ಜಯ.

ಪಂದ್ಯದ ಆಟಗಾರ: ಅಥರ್ವ ತೈಡೆ, ಸರಣಿಯ ಆಟಗಾರ: ಅಮನ್ ಮೊಖಡೆ.



ಅಥರ್ವ ತೈಡೆ ಶತಕ ಸಂಭ್ರಮ ಚಿತ್ರ: ಪ್ರಶಾಂತ್ ಎಚ್.ಜಿ.

ಅಜೇಯ ಓಟದತ್ತ ರಾಯಲ್ ಚಿತ್ತ

ವಡೋದರದಲ್ಲಿ ಇಂದು ಮಂದಾನ ಪಡೆಗೆ ಜೈಂಟ್ಸ್ ಸವಾಲು

ವಡೋದರ (ಪಿಟಿಐ): ನವಿ ಮುಂಬೈನ ಡಿವೈ ಪಾಟೀಲ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಆಡಿದ ಎಲ್ಲ ನಾಲ್ಕು ಪಂದ್ಯಗಳನ್ನೂ ಗೆದ್ದಿದೆ. ಸೋಮವಾರ ಕೊತಂಬಿಯಲ್ಲಿ ನಡೆಯುವ ಮಹಿಳಾ ಪ್ರಿಮಿಯರ್ ಲೀಗ್ (ಡಬ್ಲ್ಯುಪಿಎಲ್) ಪಂದ್ಯದಲ್ಲಿಯೂ ಗೆಲುವಿನ ಓಟ ಮುಂದುವರಿಸುವ ಛಲದಲ್ಲಿದೆ. ಇಲ್ಲಿ ತಂಡವು ಗುಜರಾತ್ ಜೈಂಟ್ಸ್ ವಿರುದ್ಧ ಸೆಣಸಲಿದೆ.

ಆರ್‌ಸಿಬಿ ವನಿತೆಯರು ಈ ಟೂರ್ನಿಯಲ್ಲಿ ಅಮೋಘ ಆರಂಭ ಮಾಡಿದ್ದಾರೆ. ಪಾಯಿಂಟ್ ಪಟ್ಟಿಯ ಅಗ್ರಸ್ಥಾನದಲ್ಲಿದ್ದಾರೆ. ನಾಯಕಿ ಸ್ಮೃತಿ ಮಂದಾನ ಅವರು ಶನಿವಾರದ ಪಂದ್ಯದಲ್ಲಿ 96 ರನ್ ಗಳಿಸಿದ್ದರು. ಬಹುದಿನಗಳ ನಂತರ ಅವರು ತಮ್ಮ ಲಯಕ್ಕೆ ಮರಳಿದ್ದು, ತಂಡದ ಶಕ್ತಿ ಹೆಚ್ಚಿಸಿದೆ. ಆರಂಭಿಕ ಬ್ಯಾಟರ್ ಗ್ರೇಸ್ ಹ್ಯಾರಿಸ್ ಕೂಡ ಉತ್ತಮವಾಗಿ ಆಡುತ್ತಿದ್ದಾರೆ. ಜಾರ್ಜಿಯಾ ವೊಲ್ ಅಮೋಘ ಫಾರ್ಮ್‌ನಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಅವರು ಅಜೇಯ ಅರ್ಧಶತಕ ಗಳಿಸಿದ್ದರು.

ಮೂರನೇ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ಎದುರು ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಅವರು ಐದು ವಿಕೆಟ್ ಗೊಂಚಲು ಗಳಿಸಿದ್ದರು. ಅದರಿಂದಾಗಿ ಆರ್‌ಸಿಬಿಯು 32 ರನ್‌ಗಳಿಂದ ಗೆದ್ದಿತ್ತು. ಅವರಲ್ಲದೇ ಲಾರೆನ್ ಬೆಲ್ ಮತ್ತು ಸಯಾಲಿ ಸತ್ಘರೆ ಅವರೂ ಬೆಂಗಳೂರು ಬೌಲಿಂಗ್ ವಿಭಾಗವನ್ನು ಬಲಿಷ್ಠಗೊಳಿಸಿದ್ದಾರೆ.

ಆ್ಯಷ್ಲೆ ಗಾರ್ಡನರ್ ನಾಯಕತ್ವದ ಗುಜರಾತ್ ತಂಡವು ಟೂರ್ನಿಯಲ್ಲಿ ಮೊದಲೆರಡು ಪಂದ್ಯಗಳನ್ನು ಜಯಿಸುವ ಮೂಲಕ ಶುಭಾರಂಭ ಮಾಡಿತ್ತು. ಆದರೆ ನಂತರದ ಎರಡು ಪಂದ್ಯಗಳಲ್ಲಿ ಮುಗ್ಗರಿಸಿತು. ಇದೀಗ ಮತ್ತೆ ಗೆಲುವಿನ ಹಳಿಗೆ ಮರಳುವ ಯತ್ನದಲ್ಲಿದೆ.

ತಂಡದ ಬ್ಯಾಟಿಂಗ್ ವಿಭಾಗಕ್ಕೆ ಆಸ್ಟ್ರೇಲಿಯಾದ ದಂತಕತೆ ಬೆತ್ ಮೂನಿ, ಸೋಫಿ ಡಿವೈನ್, ಗಾರ್ಡನರ್, ಜಾರ್ಜಿಯಾ ವೆರ್ಹ್ಯಾಮ್ ಹಾಗೂ ಭಾರತದ ಭಾರತಿ ಫೂಲ್ಮಾಲಿ ಅವರ ಬಲವಿದೆ. ಆದರೆ ಕಳೆದೆರಡೂ ಪಂದ್ಯಗಳಲ್ಲಿ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡಿಲ್ಲ.

ರೇಣುಕಾ ಸಿಂಗ್, ಕಶ್ವಿ ಗೌತಮ್ ಮತ್ತು ಸೋಫಿ ಡಿವೈನ್ ಅವರ ಮೇಲೆ ಬೌಲಿಂಗ್ ವಿಭಾಗದ ಹೊಣೆ ಇದೆ. ಸ್ಮೃತಿ ಬಳಗದ ಬ್ಯಾಟಿಂಗ್ ಪಡೆಯನ್ನು ಕಟ್ಟಿ ಹಾಕುವುದರ ಜೊತೆಗೆ ಮೂರು ದಿನಗಳ ಹಿಂದೆ ಸೋಲಿಗೆ ತೀರಿಸಿಕೊಳ್ಳುವ ಸವಾಲು ಕೂಡ ಅವರ ಮುಂದಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್



ಶ್ರೇಯಾಂಕಾ ಪಾಟೀಲ ಪಿಟಿಐ ಚಿತ್ರ

ಮಹಿಳಾ ಪ್ರೀಮಿಯರ್ ಲೀಗ್

‘ಕೆಎಸ್‌ಸಿಎಯಿಂದ ಷರತ್ತು ಈಡೇರಿಸುವ ಭರವಸೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾರ್ಚ್ ತಿಂಗಳಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯಗಳು ಆರಂಭವಾಗಲಿವೆ. ಅಷ್ಟರಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು (ಕೆಎಸ್‌ಸಿಎ) ಅಲ್ಪಾವಧಿ ಷರತ್ತು ಪೂರೈಸಬೇಕು. ಅದಕ್ಕೆ ಬದ್ಧವಾಗಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳ ಆಯೋಜನೆಗೆ ಅನುಮತಿ ನೀಡಲಾಗಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಸ್ಪಷ್ಟಪಡಿಸಿದರು.

ಚಿನ್ನಸ್ವಾಮಿ ಮೈದಾನದಲ್ಲಿ ಕ್ರಿಕೆಟ್ ಪಂದ್ಯ ಆಯೋಜನೆಗೆ ಗೃಹ ಇಲಾಖೆ ಅನುಮತಿ ನೀಡಿದ ಕುರಿತು ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, ‘ಕ್ರೀಡಾಂಗಣದ ಪರಿಶೀಲನೆಗೆ ಸರ್ಕಾರ ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ನೇತೃತ್ವದ ವಿಚಾರಣಾ ಆಯೋಗವು ಹಲವು ಶಿಫಾರಸುಗಳನ್ನು ಮಾಡಿದೆ. ಆ ಶಿಫಾರಸುಗಳ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿದ ನಂತರ ಕೆಎಸ್‌ಸಿಎಗೆ ಕಳುಹಿಸಿ ಪಾಲಿಸುವಂತೆ ಸೂಚಿಸಲಾಗಿತ್ತು’ ಎಂದರು.

‘ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳನ್ನು ನಡೆಸಲು ಅನುಮತಿ ಕೇಳಿ ಕೆಎಸ್‌ಸಿಎ ಹೊಸ ಸಮಿತಿಯು ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಈ ಕುರಿತು ಪರಿಶೀಲಿಸಿ ವರದಿ ನೀಡಲು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ ರಾವ್ ನೇತೃತ್ವದಲ್ಲಿ ಸಮಿತಿ ಮಾಡಿದ್ದೆವು. ಆ ಸಮಿತಿಯೂ ವರದಿ ನೀಡಿದೆ. ದೀರ್ಘಾವಧಿ ಹಾಗೂ ಅಲ್ಪಾವಧಿಯಲ್ಲಿ ಷರತ್ತು ಪೂರೈಸುವುದಾಗಿ ಕೆಎಸ್ ಸಿಎ ಲಿಖಿತವಾಗಿ ಭರವಸೆ ನೀಡಿದೆ. ನಾವು ಅವರ ಮೇಲೆ ವಿಶ್ವಾಸ ಇಟ್ಟಿದ್ದೇವೆ. ಈಗಾಗಲೇ ಕ್ರೀಡಾಂಗಣದ ಗೇಟ್ ಕಿತ್ತು ಕೆಲಸ ಮಾಡುತ್ತಿದ್ದಾರೆ’ ಎಂದರು.

ಷರತ್ತುಗಳು ಹೀಗಿವೆ:

- ಸದ್ಯ ಕಾಮಗಾರಿಗಳು ಪ್ರಗತಿಯಲ್ಲಿವೆ. ಆದ್ದರಿಂದ ಕ್ರೀಡಾಂಗಣದಲ್ಲಿ ಪ್ರೇಕ್ಷಕರಿಗೆ ಅನುಮತಿ ನೀಡುವುದು ಈಗಲೇ ಸಾಧ್ಯವಿಲ್ಲ. ಕಾಮಗಾರಿಗಳೂ ಹಾಗೂ ಸುರಕ್ಷತಾ ಕ್ರಮಗಳು ಪೂರ್ಣಗೊಂಡ ನಂತರ ಸಮಿತಿಯು ಪರಿಶೀಲಿಸಿ ವರದಿ ನೀಡಿದ ನಂತರ ಎಷ್ಟು ಮಂದಿ ಪ್ರೇಕ್ಷಕರಿಗೆ ಅನುಮತಿ ನೀಡಬೇಕು ಎಂದು ನಿರ್ಧರಿಸಲಾಗುವುದು. ಪರಿಶೀಲನಾ ಸಮಿತಿಯ ಶಿಫಾರಸುಗಳಂತೆ ಕ್ರಮವಹಿಸಲಾಗುವುದು.
- ಕ್ರೀಡಾಂಗಣದಲ್ಲಿ ಸಂಸ್ಥೆಯು ಮಾಡುವ ಪ್ರಗತಿಯನ್ನು ಉನ್ನತ ಮಟ್ಟದ ಸಮಿತಿ ಹಾಗೂ ಸರ್ಕಾರವು ಸತತವಾಗಿ ಉಸ್ತುವಾರಿ ಮಾಡುವ ನಿಬಂಧನೆಗೊಳಿಸಲಾಗಿದೆ.
- ಸಮಿತಿಯ ಸೂಚನೆಗಳ ಜೊತೆಗೆ ಪಂದ್ಯಗಳನ್ನು ಆಯೋಜಿಸುವ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಮಾನದಂಡಗಳ ಅನ್ವಯ ಸುರಕ್ಷತಾ ಕ್ರಮಗಳನ್ನೂ ಹೆಚ್ಚುವರಿಯಾಗಿ ಕೈಗೊಳ್ಳಬೇಕು.

ಅಲ್ಕರಾಜ್, ಸಬಲೆಂಕಾ ಶುಭಾರಂಭ

ಆಸ್ಟ್ರೇಲಿಯನ್ ಓಪನ್ ಟೆನಿಸ್: ವೀನಸ್ ವಿಲಿಯಮ್ಸ್‌ಗೆ ನಿರಾಸೆ

ಮೆಲ್ಬರ್ನ್ (ಎಎಫ್‌ಪಿ): ಅಗ್ರ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಮತ್ತು ಅರಿನಾ ಸಬಲೆಂಕಾ ಅವರು ಭಾನುವಾರ ಆರಂಭಗೊಂಡ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಅಮೆರಿಕದ ತಾರೆ ವೀನಸ್ ವಿಲಿಯಮ್ಸ್ ಅವರು ಮೊದಲ ಸುತ್ತಿನಲ್ಲೇ ಅಭಿಯಾನ ಮುಗಿಸಿದರು.

ಮೆಲ್ಬರ್ನ್ ಪಾರ್ಕ್‌ನಲ್ಲಿ ಮೊದಲ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಸ್ಪೇನ್‌ನ ಸೂಪರ್‌ಸ್ಟಾರ್ ಅಲ್ಕರಾಜ್ 6-3, 7-6 (7/2), 6-2ರಿಂದ ಆತಿಥೇಯ ದೇಶದ ಭರವಸೆಯ ಆಟಗಾರ ಆ್ಯಡಂ ವಾಲ್ಟನ್ ಅವರನ್ನು ಮಣಿಸಿ, ಪುರುಷರ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದರು. ಮುಂದಿನ ಸುತ್ತಿನಲ್ಲಿ ಜರ್ಮನಿಯ ಯಾನಿಕ್ ಹ್ಯಾನ್ಫ್‌ಮನ್ ಅವರನ್ನು ಎದುರಿಸಲಿದ್ದಾರೆ.

ಒಂಬತ್ತು ವಾರಗಳ ಬಳಿಕ ಸ್ಪರ್ಧಾ ಕಣಕ್ಕೆ ಮರಳಿರುವ 22 ವರ್ಷದ ಅಲ್ಕರಾಜ್ ಕೆಲವೊಂದು ಲೋಪಗಳನ್ನು ಎಸಗಿದರು. ಅದರ ಲಾಭ ಪಡೆದ 81ನೇ ಕ್ರಮಾಂಕದ ವಾಲ್ಟನ್ ಎರಡನೇ ಸೆಟ್‌ನಲ್ಲಿ ಪ್ರಬಲ ಪೈಪೋಟಿ ನೀಡಿದರು. ಆ ಸೆಟ್ ಅನ್ನು ಅಲ್ಕರಾಜ್ ಟೈಬ್ರೇಕರ್‌ನಲ್ಲಿ ವಶಮಾಡಿಕೊಂಡರು. ಮೊದಲ ಮತ್ತು ಮೂರನೇ ಸೆಟ್‌ಗಳಲ್ಲಿ ಸ್ಪೇನ್ ಆಟಗಾರ ನಿರಾಯಾಸವಾಗಿ ಮೇಲುಗೈ ಸಾಧಿಸಿದರು.

ವಿಶ್ವದ ಅಗ್ರಮಾನ್ಯ ಆಟಗಾರನಾಗಿರುವ ಅಲ್ಕರಾಜ್ ಆರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಿಗೆ ಒಡೆಯನಾಗಿದ್ದಾರೆ. ಆಸ್ಟ್ರೇಲಿಯನ್ ಓಪನ್ ಹೊರತುಪಡಿಸಿ ಉಳಿದ ಮೂರೂ ಕಿರೀಟಗಳಿಗೆ ಅವರು ಮುತ್ತಿಕ್ಕಿದ್ದಾರೆ. ಇಲ್ಲಿ ಚಾಂಪಿಯನ್ ಆದಲ್ಲಿ ನಾಲ್ಕು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡ ಅತಿ ಕಿರೀಟ ಆಟಗಾರನಾಗುವ ಅವಕಾಶ ಅವರ ಮುಂದಿದೆ.

ಎರಡನೇ ಸುತ್ತಿಗೆ ಜ್ವರೇವ್: ಆರಂಭಿಕ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡ ಮೂರನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ 6-7 (1/7), 6-1, 6-4, 6-2ರಿಂದ ಕೆನಡಾದ ಗೇಬ್ರಿಯಲ್ ಡಿಯಲ್ಲೊ ಅವರನ್ನು ಮಣಿಸಿ ಅಭಿಯಾನ ಆರಂಭಿಸಿದರು.

ಸಬಲೆಂಕಾ ಮುನ್ನಡೆ: 2023 ಮತ್ತು 2024ರ ಮಹಿಳಾ ಸಿಂಗಲ್ಸ್ ಚಾಂಪಿಯನ್ ಸಬಲೆಂಕಾ 6-4, 6-1ರಿಂದ ಫ್ರಾನ್ಸ್‌ನ ಚಾನ್ಸುವಾ ಕುತುಮಾಂಗ ಆಜೋನಾ ಅವರನ್ನು ಸುಲಭವಾಗಿ ಮಣಿಸಿ ಮುನ್ನಡೆದರು. ಈ ಪಂದ್ಯಕ್ಕೆ ಟೆನಿಸ್ ದಂತಕತೆಗಳಾದ ರೋಜರ್ ಫೆಡರರ್ ಮತ್ತು ರಾಡ್ ಲೇವರ್ ಸಾಕ್ಷಿಯಾದರು.

ವೀನಸ್‌ಗೆ ನಿರಾಸೆ: 2021ರ ನಂತರ ಮೆಲ್ಬರ್ನ್ ಪಾರ್ಕ್‌ಗೆ ಮೊದಲ ಬಾರಿಗೆ ಭೇಟಿ ನೀಡಿದ ವೀನಸ್ ಅವರಿಗೆ ಪ್ರೇಕ್ಷಕರು ಎದ್ದು ನಿಂತು ಚಪ್ಪಾಳೆ ತಟ್ಟಿ ಗೌರವ ಸಲ್ಲಿಸಿದರು. 45 ವರ್ಷದ ಅವರು 7(5)–6, 3–6, 4–6ರಿಂದ ಸರ್ಬಿಯಾದ ಓಲ್ಗಾ ಡ್ಯಾನಿಲೋವಿಕ್ ಅವರಿಗೆ ಮಣಿದರು. ಅವರು ಟೂರ್ನಿಯ ಮುಖ್ಯಸುತ್ತು ಆಡಿದ ಅತಿ ಹಿರಿಯ ವಯಸ್ಸಿನ ಆಟಗಾರ್ತಿಯಾಗಿದ್ದಾರೆ.



ಕಾರ್ಲೋಸ್ ಅಲ್ಕರಾಜ್ ಎಎಫ್‌ಪಿ ಚಿತ್ರ

ಮುಂಬೈ ಮ್ಯಾರಥಾನ್: ತಾಡು, ಯೆಶಿ ಚಾಂಪಿಯನ್

ಮುಂಬೈ (ಪಿಟಿಐ): ಟಾಟಾ ಮುಂಬೈ ಮ್ಯಾರಥಾನ್‌ನಲ್ಲಿ ಇಥಿಯೋಪಿಯಾದ ಓಟಗಾರರ ಪ್ರಾಬಲ್ಯ ಮುಂದುವರಿದಿದ್ದು, ತಾಡು ಅಬಾಟೆ ಡೆಮೆ ಹಾಗೂ ಯೆಶಿ ಕಲಯೂ ಚೆಕೊಲೆ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಎಲೀಟ್ ರೇಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಮ್ಯಾರಥಾನ್‌ನಲ್ಲಿ ಅಬಾಟೆ ಅವರು ಗುರಿ ತಲುಪಲು 2 ಗಂಟೆ 9 ನಿಮಿಷ ಹಾಗೂ 55 ಸೆಕೆಂಡುಗಳನ್ನು ತೆಗೆದುಕೊಂಡರು. ಯೆಶಿ 2 ಗಂಟೆ 25 ನಿಮಿಷ ಹಾಗೂ 13 ಸೆಕೆಂಡುಗಳಲ್ಲಿ ಸ್ಪರ್ಧೆ ಮುಗಿಸಿದರು.

ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಕೆನ್ಯಾದ ಲಿಯೊನಾರ್ಡ್ ಕಿಪ್ರೊಟಿಚ್ ಲಾಂಗಟ್ (2 ಗಂಟೆ, 10ನಿ., 10ಸೆ.) ಹಾಗೂ ಎರಿಟ್ರಿಯಾದ ಮೆರ್ಹಾವಿ ಕೆಸೀಟ್ (2 ಗಂಟೆ, 10ನಿ., 10ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

ಮಹಿಳೆಯರ ವಿಭಾಗದಲ್ಲಿ ಇಥಿಯೋಪಿಯಾ ಆಟಗಾರ್ತಿಯರು ಕ್ಲೀನ್‌ಸ್ವೀಪ್ ಸಾಧಿಸಿದರು. ಕಿಡ್ಸನ್ ಅಲೆಮಾ ಗೆಬ್ರೆಮೆಧಿನ್ (2 ಗಂಟೆ, 27ನಿ., 35ಸೆ.) ಹಾಗೂ ಗೊಜ್ಜಂ ಸೀಗಯೆ ಎನ್ಯೂ (2 ಗಂಟೆ, 28ನಿ., 27ಸೆ.) ಅವರು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಕಾರ್ತಿಕ್, ಸಂಜೀವನಿಗೆ ಪ್ರಶಸ್ತಿ: ಭಾರತೀಯ ಎಲೀಟ್ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಕಾರ್ತಿಕ್ ಕರ್ಕೇರಾ ಹಾಗೂ ಮಹಿಳೆಯರ ವಿಭಾಗದಲ್ಲಿ ಸಂಜೀವನಿ ಜಾಧವ್ ಅವರು ಪ್ರಶಸ್ತಿ ಜಯಿಸಿದರು.



ತಾಡು ಅಬಾಟೆ



ಯೆಶಿ ಕಲಯೂ

ಇಂಡಿಯಾ ಓಪನ್: ಲಿನ್, ಯಂಗ್‌ಗೆ ಕಿರೀಟ

ನವದೆಹಲಿ (ಪಿಟಿಐ): ತೈವಾನ್‌ನ ಲಿನ್ ಚುನ್‌–ಯಿ ಅವರು ಭಾನುವಾರ ಮುಕ್ತಾಯಗೊಂಡ ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್ ಕಿರೀಟ ಗೆದ್ದುಕೊಂಡರು. ವಿಶ್ವದ ಅಗ್ರಮಾನ್ಯ ಆಟಗಾರ್ತಿ, ಕೊರಿಯಾದ ಆನ್ ಸೆ–ಯಂಗ್ ಮಹಿಳೆಯರ ವಿಭಾಗದ ಪ್ರಶಸ್ತಿಯನ್ನು ಉಳಿಸಿಕೊಂಡರು.

ಲಿನ್ ಅವರು ಫೈನಲ್‌ನಲ್ಲಿ 21–10, 21–18ರಿಂದ ಮೂರನೇ ಶ್ರೇಯಾಂಕದ ಆಟಗಾರ ಜೊನಾಥನ್ ಕ್ರಿಸ್ಟೀ ಅವರನ್ನು ಮಣಿಸಿದರು. ಅದರೊಂದಿಗೆ, ಸೂಪರ್ 750 ಮಟ್ಟದ ಟೂರ್ನಿಯಲ್ಲಿ ಮೊದಲ ಬಾರಿ ಪ್ರಶಸ್ತಿ ಜಯಿಸಿದರು.

ಅಗ್ರಶ್ರೇಯಾಂಕ ಹೊಂದಿದ್ದ ಯಂಗ್, ಪ್ರಶಸ್ತಿ ಸುತ್ತಿನಲ್ಲಿ 21–13, 21–11ರಿಂದ ಚೀನಾದ ವಾಂಗ್ ಜಿಯಿ ಅವರನ್ನು ಮಣಿಸಿದರು.



ಆನ್ ಸೆ–ಯಂಗ್



ಲಿನ್ ಚುನ್–ಯಿ

ರಾಜ್ಯ ಒಲಿಂಪಿಕ್ಸ್: ಬಾಗಲಕೋಟೆ, ವಿಜಯಪುರ ಸೈಕ್ಲಿಸ್ಟ್ ಮಿಂಚು

ತುಮಕೂರು: ಬಾಗಲಕೋಟೆ ಹಾಗೂ ವಿಜಯಪುರದ ಸೈಕ್ಲಿಸ್ಟ್‌ಗಳು ಇಲ್ಲಿ ನಡೆಯು ತ್ತಿರುವ ರಾಜ್ಯ ಒಲಿಂಪಿಕ್ಸ್ ಕ್ರೀಡಾಕೂಟದ ರೋಡ್ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಭಾನುವಾರ ಚಿನ್ನದ ಪದಕ ಪಡೆದು ಮಿಂಚಿದರು.

20 ಕಿಲೊ ಮೀಟರ್ ಟೀಮ್ ಟೈಮ್ ಟ್ರೈಲ್ ಸ್ಪರ್ಧೆಯಲ್ಲಿ ಬಾಗಲಕೋಟೆಯ ಪೂಜಾ ಮಠಪತಿ, ನಿವೇದಿತಾ ಕೊಕ್ಕನವರ, ನಂದಾ ಚಿಂಚಖಂಡಿ ಅವರ ತಂಡ ಪ್ರಥಮ ಸ್ಥಾನ ಪಡೆಯಿತು. ವಿಜಯಪುರದ ಪಾಯಲ್ ಚವಾಣ್, ಅಕ್ಷತಾ ಭೂತನಾಳ, ಕಾವೇರಿ ಡೊಳ್ಳಿ ತಂಡ ದ್ವಿತೀಯ, ಧಾರವಾಡದ ಕೀರ್ತಿ ನಾಯಕ, ಭೀಮವ್ವ ಮಾಳಗೊಡ, ಶೈಲಾ ನ್ಯಾಮಗೌಡ ತಂಡ ತೃತೀಯ ಸ್ಥಾನಕ್ಕೆ ಭಾಜನವಾಯಿತು.

30 ಕಿ.ಮೀ ಮಾಸ್ಡ್ ಸ್ಟಾರ್ಟ್ ಸ್ಪರ್ಧೆಯಲ್ಲಿ ವಿಜಯಪುರದ ಪಾಯಲ್ ಚವಾಣ್ ಪ್ರಥಮ, ಬಾಗಲಕೋಟೆಯ ಪೂಜಾ ಮಠಪತಿ ದ್ವಿತೀಯ ಮತ್ತು ಬಾಗಲಕೋಟೆಯ ನಂದಾ ಚಿಂಚಖಂಡಿ ತೃತೀಯ ಸ್ಥಾನ ಪಡೆದರು.

ಪುರುಷರ ವಿಭಾಗದ 40 ಕಿ.ಮೀ ಟೀಮ್ ಟೈಮ್ ಟ್ರೈಲ್ ಸ್ಪರ್ಧೆಯಲ್ಲಿ ಬಾಗಲಕೋಟೆಯ ಮಲ್ಲಿಕಾರ್ಜುನ ಎಸ್.ಶಿರೋಳ, ಸಾಗರ ಪೂಜಾರಿ, ಶ್ರೀಶೈಲ್ ವೀರಾಪೂರ, ಉದಯಕುಮಾರ ಹಂಡಿ ಅವರಿದ್ದ ತಂಡವು ಪ್ರಥಮ ಸ್ಥಾನ ಪಡೆಯಿತು.

ನೆಟ್‌ಬಾಲ್ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಹಾಸನ ಮತ್ತು ಮಹಿಳೆಯರ ವಿಭಾಗದಲ್ಲಿ ದಕ್ಷಿಣ ಕನ್ನಡ ತಂಡಗಳು ಚಾಂಪಿಯನ್ ಆದವು.

ಟೆನಿಸ್: ಬೆಂಗಳೂರು ತಂಡಕ್ಕೆ ಪ್ರಶಸ್ತಿ

ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಬೆಂಗಳೂರು ನಗರ ತಂಡಗಳು ಚಾಂಪಿಯನ್ ಆದವು. ಪುರುಷರ ವಿಭಾಗದ ಫೈನಲ್‌ನಲ್ಲಿ ಬೆಂಗಳೂರು ನಗರ ತಂಡ 3-1ರಿಂದ ದಕ್ಷಿಣ ಕನ್ನಡ ತಂಡವನ್ನು ಸೋಲಿಸಿ ಚಾಂಪಿಯನ್ ಆಯಿತು. ಮಹಿಳಾ ವಿಭಾಗದಲ್ಲಿ ಬೆಂಗಳೂರು ತಂಡ 3-0 ಸೆಟ್‌ಗಳಿಂದ ದಕ್ಷಿಣ ಕನ್ನಡ ತಂಡವನ್ನು ಮಣಿಸಿತು.

ಡ್ರ್ಯಾಗನ್ ಬೋಟ್ ಸ್ಪರ್ಧೆಯ 200 ಮೀಟರ್ ವಿಭಾಗದಲ್ಲಿ ಚಿತ್ರದುರ್ಗ ತಂಡ ಬಂಗಾರದ ಪದಕ ಪಡೆಯಿತು. ಬೆಂಗಳೂರು ನಗರ ಬೆಳ್ಳಿ, ಬೆಂಗಳೂರು ಗ್ರಾಮಾಂತರ ತಂಡ ಕಂಚು ಜಯಿಸಿತು.

ಫಲಿತಾಂಶಗಳು: ಜುಡೋ: ಪುರುಷರ ವಿಭಾಗ– 81 ಕೆ.ಜಿ– ಮೊಹಮ್ಮದ್ ಯಾಕುಬ್ ಖಾನ್ (ಬೆಂಗಳೂರು ನಗರ)–1, ಸುದೀಪ್ ರಮೇಶ್ ರಾಥೋಡ್ (ಬೆಂಗಳೂರು ನಗರ)–2, ಪವನ್ ವಿಕಾಸ್ (ಬೆಂಗಳೂರು ನಗರ)–3. 90 ಕೆ.ಜಿ– ಮನೋಜ್ ನಾಯ್ಡು (ಬೆಂಗಳೂರು ನಗರ)–1, ಬಿ.ಎಸ್.ರೋಹನ್ (ಬೆಳಗಾವಿ)–2, ಅಭಿಷೇಕ್ ವಿ.ಕಾಲೆ (ವಿಜಯಪುರ)–3.

ಮಹಿಳೆಯರ ವಿಭಾಗ: 52 ಕೆ.ಜಿ– ಎಸ್.ಆರತಿ (ವಿಜಯಪುರ)–1, ಸ್ವಾತಿ ನಾಯಕ್ (ಶಿವಮೊಗ್ಗ)–2, ಐಶ್ವರ್ಯ (ಮಂಡ್ಯ)–3.